# ಜನತಾವಾಣಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಬುಧವಾರ, ಜನವರಿ 06, 2021

ಸಂಪುಟ : 47 ಸಂಚಿಕೆ : 247 ☎ 254736 91642 99999 RNI No: 27369/75, KA/SK/CTA-275/2018-2020. O/P @ J.D. Circle P.O. ಪುಟ : 6 ರೂ : 4.00 www.janathavani.com janathavani@mac.com



ನಿಟುವಳ್ಳಿ ದುರ್ಗಾಂಬಿಕಾ ಕಾರ್ತಿಕೋತ್ಸವ

ದಾವಣಗೆರೆ-ನಿಟುವಳ್ಳಿಯ ಶ್ರೀ ದುರ್ಗಾಂಬಿಕ ದೇವಸ್ಥಾನದಲ್ಲಿ ಮಂಗಳವಾರ ಕಾರ್ತಿಕ ದೀಪೋತ್ಸವ ಜರುಗಿತು. ಶ್ರೀದೇವಿಗೆ ವಿಶೇಷ ಪೂಜೆ ಸಲ್ಲಿಸಿ, ಕಾರ-ಮಂಡಕ್ಕಿ ಫಲಹಾರ ನೈವೇದ್ಯ ಮಾಡಲಾಯಿತು.

## ಹತ್ತು ದಿನಗಳಲ್ಲಿ ಲಸಿಕೆಗೆ ಸಜ್ಜು

### ಕೇಂದ್ರದ ಹಸಿರು ನಿಶಾನೆಯೊಂದೇ ಬಾಕಿ ಎಂದ ರಾಜ್ಯ ಸರ್ಕಾರ

ಬೆಂಗಳೂರು, ಜ.5 - ಕೊರೊನಾ ಲಸಿಕೆಗಳನ್ನು ಇನ್ನು ಹತ್ತು ದಿನಗಳಲ್ಲಿ ಜನರಿಗೆ ನೀಡುವ ಪ್ರಕ್ರಿಯೆ ಆರಂಭಿಸಲು ರಾಜ್ಯ ಸರ್ಕಾರ ಸಿದ್ಧಗೊಂಡಿದೆ.

ಲಸಿಕೆ ನೀಡುವ ಸಂಬಂಧ ಇಂದು ಕೇಂದ್ರ ಆರೋಗ್ಯ ಸಚಿವಾಲಯ ಹತ್ತು ದಿನಗಳಲ್ಲಿ ಜನರಿಗೆ ನೀಡುವ ಪ್ರಕ್ರಿಯೆ ಆರಂಭಿಸಲು ಸಿದ್ಧವಿದೆ ಎಂದು ಹೇಳಿಕೆ ನೀಡಿದ ಬೆನ್ನಲ್ಲೇ ರಾಜ್ಯ ಸರ್ಕಾರವು ನಾವು ಸಿದ್ಧ ಎಂದು ಹೇಳಿದೆ.

ಕೊರೊನಾ ಲಸಿಕೆಗೆ ತುರ್ತು ಅನುಮತಿ ದೊರೆತ ಹತ್ತು ದಿನಗಳಲ್ಲೇ ಅದನ್ನು ಜನರಿಗೆ ನೀಡುವುದಕ್ಕೆ ಚಾಲನೆ ನೀಡಲಾಗುವುದು ಎಂದು ಕೇಂದ್ರ ಆರೋಗ್ಯ ಸಚಿವಾಲಯ ತಿಳಿಸಿತ್ತು. ಜನವರಿ 3ರಂದು ಲಸಿಕೆಗೆ ತುರ್ತು ಅನುಮತಿ ನೀಡಲಾಗಿತ್ತು.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿರುವ ಕೇಂದ್ರ ಆರೋಗ್ಯ ಸಚಿವಾಲಯದ ಕಾರ್ಯದರ್ಶಿ ರಾಜೇಶ್ ಭೂಷಣ್, (2ನೇ ಪುಟಕ್ಕೆ)

### ಜಟಾಪಟಿ ಬಿಟ್ಟು ಜಂಟಿ ಹೇಳಿಕೆ ನೀಡಿದ ಲಸಿಕೆ ಉತ್ಪಾದಕರು

ಹೈದರಾಬಾದ್, ಜ. 5 - ನಿನ್ನೆಯಷ್ಟೇ ಜಟಾಪಟಿ ನಡೆಸಿದ್ದ ಸೆರಮ್ ಇನ್‌ಸ್ಟಿಟ್ಯೂಟ್‌ನ ಸಿಇಒ ಅದರ್ ಪೂನಾವಾಲಾ ಹಾಗೂ ಭಾರತ್ ಬಯೋಟೆಕ್‌ನ ಕೃಷ್ಣ ಎಲ್ಲ, ಮಂಗಳವಾರ ಸಂಧಾನಕ್ಕೆ ಬಂದಿದ್ದು ಜಂಟಿ ಹೇಳಿಕೆ ಬಿಡುಗಡೆ ಮಾಡಿದ್ದಾರೆ.

ಫೈಜರ್, ಮೊಡೆರ್ನಾ ಹಾಗೂ ಆಕ್ಸ್‌ಫರ್ಡ್ - ಆಸ್ಟ್ರಾಜೆನಕಾ ಲಸಿಕೆಗಳನ್ನು ಹೊರತು ಪಡಿಸಿ ಇತರೆ ಲಸಿಕೆಗಳು 'ನೀರಿನಂತೆ' ಎಂದು ಪೂನಾವಾಲಾ ಹೇಳಿದ್ದರು.

ಇದಕ್ಕೆ ತಿರುಗೇಟು ನೀಡಿದ್ದ ಕೃಷ್ಣ ಎಲ್ಲ, ನಾವು ಶೇ.200ರಷ್ಟು ಪ್ರಾಮಾಣಿಕ ಔಷಧೀಯ ಪ್ರಯೋಗ ನಡೆಸುತ್ತೇವೆ, ಆದರೂ ಟೀಕಿಸಲಾಗುತ್ತಿದೆ. ನಾನು ತಪ್ಪು ಮಾಡಿದ್ದರೆ, ನನಗೆ ಹೇಳಿ. ಕೆಲ ಕಂಪನಿಗಳು ನಮ್ಮ ಲಸಿಕೆ ನೀರು ಎಂದು ಹೇಳುತ್ತಿವೆ ಎಂದಿದ್ದರು. (2ನೇ ಪುಟಕ್ಕೆ)

### ಫೈಜರ್ ಲಸಿಕೆ ಪಡೆದ ಮಹಿಳೆ ಸಾವು

ಲಿಸ್ಬನ್, ಜ. 5 - ಫೈಜರ್ ಕೊರೊನಾ ವೈರಸ್ ಲಸಿಕೆ ಪಡೆದ ಎರಡು ದಿನಗಳ ನಂತರ ಪೋರ್ಚುಗಲ್‌ನ ಆರೋಗ್ಯ ಕಾರ್ಯಕರ್ತೆಯೊಬ್ಬರು ಹಠಾತ್ತನೆ ಸಾವನ್ನಪ್ಪಿದ್ದಾರೆ. 41 ವರ್ಷದ ಸೋನಿಯಾ ಅಸಿವಿಡೋ ಅವರು ಪೋರ್ಟೋದಲ್ಲಿರುವ ಪೋರ್ಚುಗೀಸ್ ಇನ್‌ಸ್ಟಿಟ್ಯೂಟ್ ಆಫ್ ಅಂಕಾನಲಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದರು. ಲಸಿಕೆ ಪಡೆದ ನಂತರ ಅವರು ತಮ್ಮ ಚಿತ್ರವನ್ನು ಫೇಸ್‌ಬುಕ್‌ನಲ್ಲಿ ಪ್ರಕಟಿಸಿಕೊಂಡಿದ್ದರು. ಲಸಿಕೆ ಪಡೆದ ಜಾಗದಲ್ಲಿ ಸಾಮಾನ್ಯ ಸಮಸ್ಯೆ ಯಾಗಿತ್ತು. (2ನೇ ಪುಟಕ್ಕೆ)

## ನೈಸರ್ಗಿಕ ಅನಿಲದ ಪಾಲು ದುಪ್ಪಟ್ಟಾಗಲಿದೆ


### ಮಂಗಳೂರು-ಕೊಚ್ಚಿ ಅನಿಲ ಕೊಳವೆ ಮಾರ್ಗ ಉದ್ಘಾಟಿಸಿದ ಪ್ರಧಾನಿ

ನವದೆಹಲಿ, ಜ. 5 - ಇಂಧನದಲ್ಲಿ ನೈಸರ್ಗಿಕ ಅನಿಲದ ಪಾಲು ದುಪ್ಪಟ್ಟಾಗಲಿದೆ ಎಂದು ಹೇಳಿರುವ ಪ್ರಧಾನ ಮಂತ್ರಿ ನರೇಂದ್ರ ಮೋದಿ, ಕೊಳವೆ ಮಾರ್ಗದ ಮೂಲಕ ಅನಿಲ ಗ್ರಿಡ್ ಜೊತೆ ಸಂಪರ್ಕ ಕಲ್ಪಿಸುವುದರಿಂದ ಜನರು ಹಾಗೂ ಉದ್ಯಮಕ್ಕೆ ಕಡಿಮೆ ಬೆಲೆಯಲ್ಲಿ ಇಂಧನ ಸಿಗುತ್ತದೆ ಎಂದಿದ್ದಾರೆ.

ಕರ್ನಾಟಕದ ಮಂಗಳೂರು ಹಾಗೂ ಕೇರಳದ ಕೊಚ್ಚಿ ನಡುವಿನ 450 ಕಿ.ಮೀ. ಉದ್ದದ ನೈಸರ್ಗಿಕ ಅನಿಲ ಕೊಳವೆ ಮಾರ್ಗವನ್ನು ಉದ್ಘಾಟಿಸಿ ಮಾತನಾಡುತ್ತಿದ್ದ ಅವರು, ತಮ್ಮ ಸರ್ಕಾರದ ಅವಧಿಯಲ್ಲಿ ಹೆದ್ದಾರಿ, ರೈಲ್ವೆ, ಮೆಟ್ರೋ, ವೈಮಾನಿಕ, ಜಲ, ಡಿಜಿಟಲ್ ಹಾಗೂ ಅನಿಲ ಸಂಪರ್ಕದಲ್ಲಿ ಅಭೂತಪೂರ್ವ ಕಾಮಗಾರಿಗಳು ನಡೆಯುತ್ತಿವೆ. ಇದು ಆರ್ಥಿಕ ಬೆಳವಣಿಗೆಗೆ ನೆರವಾಗಲಿದೆ ಎಂದಿದ್ದಾರೆ. ಕಳೆದ 5-6 (2ನೇ ಪುಟಕ್ಕೆ)

## ಸಿಎಂಗೆ ಬೆಂಬಿಡದ ಭೂ ವಿವಾದ

### ಹೈಕೋರ್ಟ್‌ನಿಂದ ಎಫ್‌ಐಆರ್ ರದ್ದತಿ ಅರ್ಜಿ ವಜಾ



ಬೆಂಗಳೂರು, ಜ. 5 - ಜಮೀನು ಡಿನೋಟಿಫಿಕೇಷನ್ ಪ್ರಕರಣಕ್ಕೆ ಸಂಬಂಧಿಸಿದಂತೆ ತಮ್ಮ ವಿರುದ್ಧದ ಎಫ್‌ಐಆರ್ ರದ್ದುಗೊಳಿಸುವಂತೆ ಕೋರಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ಸಲ್ಲಿಸಿದ್ದ ರಿಟ್ ಅರ್ಜಿಯನ್ನು ಹೈಕೋರ್ಟ್ ಮಂಗಳವಾರ ವಜಾಗೊಳಿಸಿದೆ.

ಜಯಕುಮಾರ್ ಹಿರೇಮಠ್ ಎಂಬುವರು ಲೋಕಾಯುಕ್ತಕ್ಕೆ ಸಲ್ಲಿಸಿದ್ದ ದೂರಿನ ಆಧಾರದ ಮೇಲೆ ದಾಖಲಾಗಿರುವ ಎಫ್‌ಐಆರ್ ರದ್ದುಗೊಳಿಸುವಂತೆ ಕೋರಿ ಯಡಿಯೂರಪ್ಪ ಸಲ್ಲಿಸಿದ್ದ ಅರ್ಜಿಯ ಕಾಯ್ದಿರಿಸಿದ್ದ ತೀರ್ಪನ್ನು ನ್ಯಾಯಮೂರ್ತಿ ಮೈಕೆಲ್ ಡಿ.ಕುನ್ಹಾ ಅವರಿದ್ದ ನ್ಯಾಯಪೀಠ ಇಂದು ಪ್ರಕಟಿಸಿದೆ.

ಜೊತೆಗೆ, ದೂರಿನ ಸಂಬಂಧ ತನಿಖೆ ಮುಂದುವರೆಸುವಂತೆ ಲೋಕಾಯುಕ್ತಕ್ಕೆ ಸೂಚನೆ ನೀಡಿದೆ. ಇದರ ಜೊತೆಗೆ ಅರ್ಜಿದಾರ ಯಡಿಯೂರಪ್ಪಗೆ 25 ಸಾವಿರ ರೂ.ಗಳ ದಂಡವನ್ನೂ ವಿಧಿಸಲಾಗಿದೆ. ಇದು ಯಡಿಯೂರಪ್ಪ ಅವರಿಗೆ ಭಾರೀ ಹಿನ್ನಡೆ ಯಾಗಿದೆ. ಯಡಿಯೂರಪ್ಪ ಅವರ ಆರ್.ಟಿ. ನಗರದ ಗಂಗೇನಹಳ್ಳಿ ವ್ಯಾಪ್ತಿಯ ಮಠದ ಹಳ್ಳಿ ಬಡಾವಣೆಯಲ್ಲಿ 1.1 ಎಕರೆ ಭೂಮಿಯನ್ನು ತಮ್ಮ ಅಧಿಕಾರ ಬಳಸಿ ಕಾನೂನುಬಾಹಿರವಾಗಿ ಡಿನೋಟಿಫೈ ಮಾಡಲು ಆದೇಶ ನೀಡಿದ್ದಾರೆ ಎಂದು ಆರೋಪಿಸಿ ಜಯಕುಮಾರ್ ಹಿರೇಮಠ್ ಲೋಕಾಯುಕ್ತಕ್ಕೆ ದೂರು ಸಲ್ಲಿಸಿದ್ದರು. (4ನೇ ಪುಟಕ್ಕೆ)

## 118 ಬಿಜೆಪಿ ಶಾಸಕರಿಂದ ಸಿಎಂಗೆ ಬೆಂಬಲ

### ಯಡಿಯೂರಪ್ಪ ಜೊತೆಗಿನ ಸಭೆಯ ನಂತರ ಸಚಿವರ ಹೇಳಿಕೆ

ಬೆಂಗಳೂರು, ಜ. 5 – ರಾಜ್ಯದ ಎಲ್ಲಾ 118 ಬಿಜೆಪಿ ಶಾಸಕರು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಹಾಗೂ ಅವರ ನಾಯಕತ್ವಕ್ಕೆ ಬೆಂಬಲ ಹಾಗೂ ನಂಬಿಕೆ ವ್ಯಕ್ತಪಡಿಸಿದ್ದಾರೆ ಎಂದು ಸಂಪುಟದ ಸಚಿವರು ತಿಳಿಸಿದ್ದಾರೆ.

ಮುಖ್ಯಮಂತ್ರಿಗಳು ಪ್ರಾಂತ್ಯವಾರು ಶಾಸಕರ ಜೊತೆ ಭೇಟಿ ಮಾಡಿದ ನಂತರ ಜಂಟಿಯಾಗಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿರುವ ಸಚಿವರು, ಯಡಿಯೂರಪ್ಪ ಸರ್ಕಾರ ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಿದೆ ಎಂದು ಎಲ್ಲಾ 118 ಶಾಸಕರು ತಿಳಿಸಿದ್ದಾರೆ ಎಂದಿದ್ದಾರೆ.

ಎಲ್ಲರೂ ನಾಯಕತ್ವಕ್ಕೆ ಬೆಂಬಲ ವ್ಯಕ್ತಪಡಿಸಿದ್ದಾರೆ. ಯಡಿಯೂರಪ್ಪನವರ ಕೆಲಸಗಳಿಗೆ ಎಲ್ಲರೂ ಸಮಾಧಾನ ವ್ಯಕ್ತಪಡಿಸಿದ್ದಾರೆ ಎಂದು ಉಪ ಮುಖ್ಯಮಂತ್ರಿ ಗೋವಿಂದ ಕಾರಜೋಳ ಹೇಳಿದ್ದಾರೆ.

ಎರಡು ದಿನಗಳ ಕಾಲ ಶಾಸಕರ ಜೊತೆ ಮುಖ್ಯಮಂತ್ರಿ ಯಡಿಯೂರಪ್ಪ ಸಭೆ ನಡೆಸಿದ್ದರು. ಈ ಸಂದರ್ಭದಲ್ಲಿ ಬಿಜೆಪಿ ರಾಜ್ಯಾಧ್ಯಕ್ಷ ನಳಿನ್ ಕುಮಾರ್ ಕಟೀಲ್ ಉಪಸ್ಥಿತರಿದ್ದರು.

ಯಡಿಯೂರಪ್ಪ ಕೆಲಸಕ್ಕೆ ತೃಪ್ತಿ ವ್ಯಕ್ತಪಡಿಸಿದ್ದಾರೆ. ಕೊರೊನಾ ಸಂಕಷ್ಟದಲ್ಲಿ ಆದಾಯ ಮುಕ್ಕಾಲು ಪಾಲು ಬರದಿದ್ದರೂ ಕೊರೊನಾ ನಿಯಂತ್ರಣವನ್ನು ದೇಶಕ್ಕೆ ಮಾದರಿಯಾಗಿ ನಿರ್ವಹಣೆ ಮಾಡಿದ್ದಾರೆ. ನೆರೆಹಾನಿ ನಡುವೆಯೂ ಕೂಡ ಉತ್ತಮ ಕೆಲಸ ಮಾಡಿದ್ದಾರೆ ಎಂದು ಕಾರಜೋಳ ಹೇಳಿದ್ದಾರೆ.

ಇನ್ನೋರ್ವ ಉಪ ಮುಖ್ಯಮಂತ್ರಿ ಲಕ್ಷ್ಮಣ ಸವದಿ, ಸಚಿವರಾದ ಎಸ್.ಟಿ. ಸೋಮಶೇಖರ್, ವಿ. ಸೋಮಣ್ಣ, ಬಿ. ಶ್ರೀರಾಮುಲು, ಶಶಿಕಲಾ ಜೊಲ್ಲೆ ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ನಾಯಕತ್ವದ ವಿರುದ್ಧ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಟೀಕಾಪ್ರಹಾರ ನಡೆಸಿದ್ದರು.

ಸರ್ಕಾರದ ಕಾರ್ಯನಿರ್ವಹಣೆಯಲ್ಲಿ ಯಡಿಯೂರಪ್ಪ ಪುತ್ರರು ಮಧ್ಯ ಪ್ರವೇಶಿಸುತ್ತಿದ್ದಾರೆ ಎಂದು ಯತ್ನಾಳ್ ಸೋಮವಾರ ಮುಖ್ಯಮಂತ್ರಿ ಜೊತೆ ನಡೆದ ಸಭೆಯಲ್ಲಿ ತಿಳಿಸಿದ್ದರು.

ಯತ್ನಾಳ್ ಹೆಸರು ಹೇಳದೇ ಮಾತನಾಡಿದ ಕಾರಜೋಳ, ನಿನ್ನೆಯ ಸಭೆಯಲ್ಲಿ ಸಣ್ಣ ಗೊಂದಲ ಸೃಷ್ಟಿಯಾಗಿತ್ತು. ಉಳಿದಂತೆ ಸಭೆ ಸುಗಮವಾಗಿ ನಡೆದಿದೆ ಎಂದು ತಿಳಿಸಿದ್ದಾರೆ.

ಯತ್ನಾಳ್ ಅವರ ಇತ್ತೀಚಿನ ಬಹಿರಂಗ ಹೇಳಿಕೆಗಳ ಕುರಿತು ಕೇಳಿದ ಪ್ರಶ್ನೆಗೆ ಉತ್ತರಿಸಿದ ಸಚಿವ ವಿ. ಸೋಮಣ್ಣ, ಈ ಬಗ್ಗೆ ರಾಜ್ಯಾಧ್ಯಕ್ಷ ನಳಿನ್ ಕುಮಾರ್ ಕಟೀಲ್ ಅವರು ಮಾತನಾಡಿದ್ದಾರೆ. ಕಟೀಲ್ ಅವರು ಕೇಂದ್ರಕ್ಕೆ ಸಂದೇಶವೊಂದನ್ನು ಕಳಿಸಿದ್ದಾರೆ ಎಂದರು.

ಸೂಕ್ತ ಸಮಯದಲ್ಲಿ ಏನಾಗಬೇಕೋ ಅದು ಆಗಲಿದೆ. ಮುಖ್ಯಮಂತ್ರಿ ಸರ್ಕಾರದ ನಾಯಕರಾಗಿದ್ದಾರೆ. ಅವರ ಸಹೋದ್ಯೋಗಿಯಾಗಿ ನಿನ್ನೆ ನಡೆದ ಘಟನೆಯನ್ನು ಖಂಡಿಸುತ್ತೇನೆ ಎಂದೂ ಅವರು ಹೇಳಿದ್ದಾರೆ.

## ಲಸಿಕೆಯ ಅಪಪ್ರಚಾರಕ್ಕೆ ಕಿವಿಗೊಡಬೇಡಿ

### ಎಲ್ಲರೂ ಲಸಿಕೆ ಪಡೆಯಲು ಸಂಸದ ಜಿ.ಎಂ. ಸಿದ್ದೇಶ್ವರ ಕಿವಿಮಾತು



ದಾವಣಗೆರೆ, ಜ.5 - ಕೊರೊನಾ ಲಸಿಕೆಯ ಬಗ್ಗೆ ಮಾಡಲಾಗುತ್ತಿರುವ ಅಪಪ್ರಚಾರಕ್ಕೆ ಜನರು ಕಿವಿಗೊಡಬಾರದು ಎಂದು ಸಂಸದ ಜಿ.ಎಂ. ಸಿದ್ದೇಶ್ವರ ಕರೆ ನೀಡಿದ್ದಾರೆ.

ಇಲ್ಲಿನ ಜಿಲ್ಲಾಧಿಕಾರಿ ಕಚೇರಿಯ ತುಂಗಭದ್ರಾ ಸಭಾಂಗಣದಲ್ಲಿಂದು ಜಿಲ್ಲಾಡಳಿತ, ಜಿಲ್ಲಾ ಪಂಚಾಯ್ತಿ, ಪ್ರೇರಣಾ ಸಾಂಸ್ಕೃತಿಕ ಸಂಸ್ಥೆ, ಜಿಲ್ಲಾ ಯೋಗ ಒಕ್ಕೂಟ ಹಾಗೂ ಹಿಮಾಲಯನ್ ಅಡ್ವೆಂಚರ್ ಅಕಾಡೆಮಿ ಸಂಯುಕ್ತಾಶ್ರಯದಲ್ಲಿ ಕೊರೊನಾ ವಾರಿಯರ್‌ಗಳಿಗೆ ಏರ್ಪಡಿಸಿದ್ದ ಸನ್ಮಾನ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡುತ್ತಿದ್ದರು.

ಸರ್ಕಾರ ಈಗ ಸರಬರಾಜು ಮಾಡಲು ಮುಂದಾಗಿರುವ ಕೊರೊನಾ ವ್ಯಾಕ್ಸಿನ್ ಬಗ್ಗೆ ಕೆಲವರು ಅಪಪ್ರಚಾರ ಮಾಡುತ್ತಿದ್ದು, ಇದಕ್ಕೆ ಯಾರೂ ಕಿವಿಗೊಡದೇ ಎಲ್ಲರೂ ಲಸಿಕೆ ಪಡೆಯಬೇಕು. ಅಪಪ್ರಚಾರಕ್ಕೆ ಮಣಿದು ಲಸಿಕೆ ಪಡೆಯದಿದ್ದರೆ ಜೀವಕ್ಕೆ ತೊಂದರೆಯಾಗಲಿದೆ ಎಂದು ಕಿವಿಮಾತು ಹೇಳಿದ್ದಾರೆ.

ಅಧಿಕಾರಿಗಳ ತಂಡದ ಪ್ರಯತ್ನದಿಂದಾಗಿ ಜಿಲ್ಲೆಯಲ್ಲಿ ಕೊರೊನಾ ನಿಯಂತ್ರಣಕ್ಕೆ ಬಂದಿದೆ. ಈಗಿರುವ ಸಕ್ರಿಯ 88 ಪ್ರಕರಣಗಳು ಇನ್ನು ಹತ್ತು ದಿನದಲ್ಲಿ ಶಮನವಾಗಿ ಶೂನ್ಯಕ್ಕೆ ಬರುವ ದಿನ ದೂರ ವಿಲ್ಲ ಎಂದೂ ಅವರು ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಕೊರೊನಾ ನಿಯಂತ್ರಿಸಲು ಜಿಲ್ಲಾಡಳಿತ, ಪೊಲೀಸ್ ಇಲಾಖೆ, ಆರೋಗ್ಯ ಇಲಾಖೆ ಹಾಗೂ ಜಿಲ್ಲಾ ಪಂಚಾಯತ್, ಆಶಾ ಕಾರ್ಯಕರ್ತೆಯರು ಉತ್ತಮವಾಗಿ ಕೆಲಸ ಮಾಡಿವೆ. ಡಿಸಿ, ಎಸ್ಪಿ, ಸಿಇಒ ಈ ಮೂವರ ಸಮನ್ವತೆಯಿಂದ ಕೆಲಸ ಮಾಡಿ, ಕೊರೊನಾ ನಿಯಂತ್ರಿಸುವಲ್ಲಿ ಯಶಸ್ವಿಯಾಗಿದ್ದಾರೆ ಎಂದು ಶ್ಲಾಘಿಸಿದರು.

ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಮಾತನಾಡಿ, ಕೊರೊನಾದಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ಕೆಲಸ ಮಾಡಲು ಅವಕಾಶ ಸಿಕ್ಕಿರುವುದು ನಮ್ಮ ಪುಣ್ಯ. ಕೊರೊನಾ ಅವಧಿಯಲ್ಲಿ ಅದ್ಭುತವಾದ ಬೆಳವಣಿಗೆಗಳು ನಡೆದಿದ್ದು, ಇದನ್ನು (2ನೇ ಪುಟಕ್ಕೆ)

### ನಾನೇ ಮೊದಲು ಲಸಿಕೆ ತೆಗೆದುಕೊಳ್ಳುವೆ: ಡಿಸಿ

ದಾವಣಗೆರೆ.ಜ.5 - ಕೊರೊನಾ ವಿರುದ್ಧ ನೀಡುವ ಲಸಿಕೆ ಕುರಿತು ಸಾರ್ವಜನಿಕರಲ್ಲಿ ಇರುವ ಅನುಮಾನ ಪರಿಹಾರಕ್ಕಾಗಿ ನಾನೇ ಮೊದಲು ಕೊವ್ಯಾಕ್ಸಿನ್ ತೆಗೆದುಕೊಳ್ಳುವುದಾಗಿ ಜಿಲ್ಲಾಧಿಕಾರಿ ಮಹಾಂತೇಶ ಬೀಳಗಿ ತಿಳಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕೊವ್ಯಾಕ್ಸಿನ್ ಕುರಿತು ಜನರು ವದಂತಿಗಳಿಗೆ ಕಿವಿಗೊಡಬಾರದು. ವ್ಯಾಕ್ಸಿನ್ ಬಗ್ಗೆ ಜನರಲ್ಲಿ ಭರವಸೆ ಮೂಡಿಸುವ ಸಲುವಾಗಿ ಜಿಲ್ಲೆಯಲ್ಲಿ ನಾನೇ ಮೊದಲು ವ್ಯಾಕ್ಸಿನ್ ಪಡೆಯುವುದಾಗಿ ಹೇಳಿದರು.

ಜಿಲ್ಲೆಯಲ್ಲಿ ಲಸಿಕೆ ನೀಡುವ ಹಿನ್ನೆಲೆಯಲ್ಲಿ ಕಾರ್ಯಪಡೆ ರಚನೆಯಾಗಿದ್ದು, ಪ್ರತಿ ಗುರುವಾರ ಸಭೆ ಸೇರಿ ಪೂರ್ವಸಿದ್ಧತೆ ಪರಿಶೀಲನೆ ನಡೆದಿದೆ. ಮೊದಲ ಹಂತದಲ್ಲಿ ವೈದ್ಯರು, ಆರೋಗ್ಯ ರಕ್ಷಕ (2ನೇ ಪುಟಕ್ಕೆ)

## ಕೊಂಡಜ್ಜಿ ಕೆರೆ, ಕೊಮಾರನಹಳ್ಳಿ ಗುಡ್ಡ ಪ್ರದೇಶ ಜೀವವೈವಿಧ್ಯ ತಾಣ

### ಕ್ರಮ ತೆಗೆದುಕೊಳ್ಳಲು ಅಧಿಕಾರಿಗಳಿಗೆ ಸೂಚನೆ : ಆಶೀಸರ



ದಾವಣಗೆರೆ, ಜ. 5 - ಹರಿಹರ ತಾಲ್ಲೂಕಿನ ಕೊಂಡಜ್ಜಿ ಕೆರೆ ಹಾಗೂ ಕೊಮಾರನಹಳ್ಳಿ ಗುಡ್ಡದ ಪ್ರದೇಶಗಳಲ್ಲಿ ಅಮೂಲ್ಯ ಮರಗಳಿರುವ ಮಾಹಿತಿ ಸಿಕ್ಕಿದೆ. ಇವುಗಳನ್ನು ಜೀವವೈವಿಧ್ಯ ತಾಣ ಎಂದು ಘೋಷಿಸಲು ಈ ವರ್ಷ ಕ್ರಮ ತೆಗೆದುಕೊಳ್ಳಲಾಗುವುದು ಎಂದು ರಾಜ್ಯ ಜೀವ ವೈವಿಧ್ಯ ಮಂಡಳಿ ಅಧ್ಯಕ್ಷ ಅನಂತ ಹೆಗಡೆ ಆಶೀಸರ ತಿಳಿಸಿದ್ದಾರೆ.

ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಕರೆದಿದ್ದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡುತ್ತಿದ್ದ ಅವರು, ಕುರುಚಲು ಅರಣ್ಯಗಳಲ್ಲಿ ಸಾಕಷ್ಟು ಜೀವವೈವಿಧ್ಯ ಇದೆ. ಇಂತಹ ತಾಣಗಳನ್ನು ಗುರುತಿಸಲು ಅರಣ್ಯ ಇಲಾಖೆ, ಸಾಮಾಜಿಕ ಅರಣ್ಯ ಇಲಾಖೆ, ಜಿಲ್ಲಾ ಪಂಚಾಯ್ತಿ ಹಾಗೂ ಜಿಲ್ಲಾಡಳಿತಗಳ ಜೊತೆಗೂಡಿ ಕಾರ್ಯ ನಿರ್ವಹಿಸಲಾಗುವುದು ಎಂದರು.

ಪಂಚಾಯ್ತಿ ಜೀವ ವೈವಿಧ್ಯ ಸಮಿತಿ, ನಗರಸಭೆ ಜೀವ ವೈವಿಧ್ಯ ಸಮಿತಿಗಳಿಗೂ ಸಹ ಜೀವ ವೈವಿಧ್ಯ ತಾಣ ಗುರುತಿಸಲು ಅವಕಾಶವಿದೆ. ಈ ವರ್ಷದ ಕಾರ್ಯಸೂಚಿ ಪಟ್ಟಿಯಲ್ಲಿ ಇಂತಹ ಹಲವು ತಾಣಗಳನ್ನು ಗುರುತಿಸುವುದನ್ನು ಸೇರ್ಪಡೆ ಮಾಡಿಕೊಳ್ಳಲಾಗಿದೆ ಎಂದು ಹೇಳಿದರು.

ಜೀವ ವೈವಿಧ್ಯ ಕಾಯ್ದೆಯ ಅನ್ವಯ ರಾಷ್ಟ್ರ, ರಾಜ್ಯ ಹಾಗೂ ಸ್ಥಳೀಯ ಮಟ್ಟದಲ್ಲಿ ಜೀವ ವೈವಿಧ್ಯ ನಿರ್ವಹಣಾ ಸಮಿತಿಗಳಿರುತ್ತವೆ. (4ನೇ ಪುಟಕ್ಕೆ)

### ಅಡವಿ ತುಡವಿ ಜೇನುಹುಳ ರಾಜ್ಯ ಕೀಟ

ಅಡವಿ ತುಡವಿ ಜೇನುಹುಳವನ್ನು ರಾಜ್ಯ ಕೀಟವಾಗಿ ಹಾಗೂ ಸಿತಾಳೆ ಗಿಡವನ್ನು ರಾಜ್ಯ ಆರ್ಕಿಡ್ ಆಗಿ ಘೋಷಿಸುವಂತೆ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರಿಗೆ ಮನವಿ ಸಲ್ಲಿಸಲಾಗಿದೆ ಎಂದು ರಾಜ್ಯ ಜೀವ ವೈವಿಧ್ಯ ಮಂಡಳಿ ಅಧ್ಯಕ್ಷ ಅನಂತ ಹೆಗಡೆ ಆಶೀಸರ ತಿಳಿಸಿದ್ದಾರೆ.

ಚಿಕ್ಕಬಳ್ಳಾಪುರ ಜಿಲ್ಲೆಯ ಶ್ರೀಲಕ್ಷ್ಮಿ ಆದಿನಾರಾಯಣ ಬೆಟ್ಟ, ಉತ್ತರ ಕನ್ನಡ ಜಿಲ್ಲೆಯ ಕಗ್ಗಭತ್ತ ಬೆಳೆಯುವ ಪ್ರದೇಶ ಸೇರಿದಂತೆ ಹಲವಾರು ಪ್ರದೇಶಗಳನ್ನು ಜೀವವೈವಿಧ್ಯ ಪಾರಂಪರಿಕ ತಾಣಗಳಾಗಿ ಘೋಷಿಸಲೂ ಸಹ ಶಿಫಾರಸ್ಸು ಸಲ್ಲಿಸಲಾಗಿದೆ ಎಂದವರು ಹೇಳಿದ್ದಾರೆ.

## ಮತ ಎಣಿಕೆಯಲ್ಲಿ ಅಧಿಕಾರಿಗಳಿಂದ ಲೋಪದೋಷ: ಮರು ಎಣಿಕೆಗೆ ಮನವಿ



### ಜಗಳೂರು

ಜಗಳೂರು, ಜ.5- ಗ್ರಾಮ ಪಂಚಾಯಿತಿ ಚುನಾವಣೆಯ ಪ್ರಕ್ರಿಯೆಯಲ್ಲಿ ತೊಡಗಿದ್ದ ಅಧಿಕಾರಿಗಳು ಸಂಬಂಧಿ ಅಭ್ಯರ್ಥಿಗಳ ಪರವಾಗಿ ಕೆಲಸ ಮಾಡಿದ್ದು ಮತ ಎಣಿಕೆಯಲ್ಲೂ ಸಹ ಲೋಪದೋಷವಾಗಿದೆ ಎಂದು ಆರೋಪಿಸಿ ಮರು ಮತ ಎಣಿಕೆ ಮಾಡುವಂತೆ ಸೋತ ಅಭ್ಯರ್ಥಿಗಳು ತಹಶೀಲ್ದಾರ್ ಅವರಿಗೆ ಮನವಿ ಸಲ್ಲಿಸಿದ್ದಾರೆ.

ತಾಲ್ಲೂಕಿನ ದೊಣ್ಣೆಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ದೊಣ್ಣೆಹಳ್ಳಿ ಗ್ರಾಮದ 1 ನೇ ವಾರ್ಡ್‌ನ ನಾಲ್ಕು ಸ್ಥಾನಗಳಿಗೆ 13 ಅಭ್ಯರ್ಥಿಗಳು, 2ನೇ ವಾರ್ಡ್‌ನ ಹದಿನಾಲ್ಕು ಸ್ಥಾನಗಳಿಗೆ ಒಟ್ಟು 27 ಅಭ್ಯರ್ಥಿಗಳು ಚುನಾವಣೆಗೆ ಸ್ಪರ್ಧಿಸಿದ್ದರು. ಮತದಾನ ಪ್ರಕ್ರಿಯೆಯಲ್ಲಿ ತೊಡಗಿದ್ದ ರಿಟರ್ನಿಂಗ್ ಅಧಿಕಾರಿ ಹಾಗು ಮತಗಟ್ಟೆ ಅಧಿಕಾರಿ ಮತ್ತು ಮತಗಟ್ಟೆ ಸಹಾಯಕ ಸಿಬ್ಬಂದಿಗಳು ಹಾಗು ಮತ ಎಣಿಕೆಯಲ್ಲಿ ಭಾಗಿಯಾದ ಅಧಿಕಾರಿಗಳು ಸಹ ಗೆದ್ದ ಅಭ್ಯರ್ಥಿಗಳ ಹತ್ತಿರದ ಸಂಬಂಧಿಗಳಾಗಿದ್ದು ಚುನಾವಣೆಯ ಸಂಪೂರ್ಣ ಪ್ರಕ್ರಿಯೆಯಲ್ಲಿ ಪ್ರಭಾವ ಬೀರಿದ್ದಾರೆ ಎಂದು ಪರಾಜಿತ ಅಭ್ಯರ್ಥಿಗಳು ಆರೋಪಿಸಿದ್ದಾರೆ.

ಚುನಾವಣಾ ಅಧಿಕಾರಿ ಹಾಗು ಮತ ಎಣಿಕೆಯಲ್ಲಿದ್ದ ಶಿಕ್ಷಕರು ಚುನಾವಣಾ ನಿಯಮ ಮೀರಿ ಪಕ್ಷಪಾತ ಮಾಡಿ ಮತ (4ನೇ ಪುಟಕ್ಕೆ)

## ಶಾಲಾ - ಕಾಲೇಜು ಆರಂಭಕ್ಕೆ ಉತ್ತಮ ಪ್ರತಿಕ್ರಿಯೆ : ಸಚಿವ

### ಪದವಿ ಪೂರ್ವ ಕಾಲೇಜುಗಳಲ್ಲಿ ಶೇ.57.25 ಹಾಜರಾತಿ 10ನೇ ತರಗತಿಗೆ ಶೇ.51.34 ಹಾಜರಾತಿ

ಬೆಂಗಳೂರು, ಜ. 5 - ರಾಜ್ಯದಲ್ಲಿರುವ 5,492 ಪದವಿ ಪೂರ್ವ ಕಾಲೇಜುಗಳಲ್ಲಿ ದಾಖಲಾಗಿರುವ 4,24,250 ವಿದ್ಯಾರ್ಥಿಗಳ ಪೈಕಿ ಮಂಗಳವಾರ 2,42,886 ವಿದ್ಯಾರ್ಥಿಗಳು ಹಾಜರಾಗಿದ್ದಾರೆ. (ಶೇ.57.25 ಹಾಜರಿ) ಅಂತೆಯೇ 16,850 ಪ್ರೌಢಶಾಲೆಗಳಲ್ಲಿ 10ನೇ ತರಗತಿಗೆ ದಾಖಲಾಗಿರುವ 9,29,130 ವಿದ್ಯಾರ್ಥಿಗಳ ಪೈಕಿ 4,77,051 ವಿದ್ಯಾರ್ಥಿಗಳು ಹಾಜರಾಗಿದ್ದಾರೆ. (ಶೇ.51.34 ಹಾಜರಾತಿ) ಎಂದು ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವ ಎಸ್. ಸುರೇಶ್ ಕುಮಾರ್ ತಿಳಿಸಿದ್ದಾರೆ.

6 ರಿಂದ 9ನೇ ತರಗತಿಗಳಿಗೆ ನಡೆಯುತ್ತಿರುವ ಪರಿಷ್ಕೃತ ವಿದ್ಯಾಗಮ ತರಗತಿಗಳಿಗೆ ಮಂಗಳವಾರ 6,30,557 ವಿದ್ಯಾರ್ಥಿಗಳು ಹಾಜರಾಗಿದ್ದಾರೆ. ಪ್ರಸ್ತುತ ವರ್ಷದ ಶಾಲಾರಂಭದ ಐದನೇ ದಿನವಾದ ಮಂಗಳವಾರ ವಿದ್ಯಾರ್ಥಿಗಳ ಹಾಜರಾತಿ ಯಥಾಸ್ಥಿತಿಯಲ್ಲಿ ಮುಂದುವರೆದಿದ್ದು, ಶಾಲಾ ಕಾಲೇಜುಗಳನ್ನು ಆರಂಭಿಸಿರುವುದಕ್ಕೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾದಂತಾಗಿದೆ ಎಂದವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಬಾಗಲಕೋಟೆ ಜಿಲ್ಲೆಯ ಐವರು ಶಿಕ್ಷಕರಿಗೆ ಕೊರೊನಾ ಸೋಂಕು ದೃಢಪಟ್ಟಿದ್ದು, ಅವರು ಶಾಲಾರಂಭಕ್ಕೂ ಮುನ್ನವೇ ಕೊರೊನಾ ಪರೀಕ್ಷೆಯ ಫಲಿತಾಂಶ ಬಂದಿದ್ದರಿಂದ ಆ ಶಿಕ್ಷಕರು ಕ್ವಾರಂಟೈನ್‌ನಲ್ಲಿದ್ದು, ಮಕ್ಕಳ ಸಂಪರ್ಕಕ್ಕೆ (4ನೇ ಪುಟಕ್ಕೆ)

# ಸೆಂಟ್ರಲ್ ವಿಸ್ಟಾ ಯೋಜನೆಗೆ ಸುಪ್ರೀಂ ಕೋರ್ಟ್ ಅನುಮತಿ

ನವದೆಹಲಿ, ಜ.5 – ರಾಜಧಾನಿಯಲ್ಲಿ ರಾಷ್ಟ್ರಪತಿ ಭವನದಿಂದ ಇಂಡಿಯಾ ಗೇಟ್ ವರೆಗಿನ 3 ಕಿ.ಮೀ. ಪ್ರದೇಶದಲ್ಲಿ ನಿರ್ಮಾಣ ವಾಗಲಿರುವ ಮಹತ್ವಾಕಾಂಕ್ಷಿ ಸೆಂಟ್ರಲ್ ವಿಸ್ಟಾ ಯೋಜನೆಗೆ ಸುಪ್ರೀಂ ಕೋರ್ಟ್ ಹಸಿರು ನಿಶಾನೆ ತೋರಿದೆ. ಈ ಯೋಜನೆಗೆ ಪರಿಸರ ಅನುಮತಿ ಹಾಗೂ ಇತರೆ ಅನುಮತಿಗಳನ್ನು ನೀಡುವಲ್ಲಿ ಯಾವುದೇ ಲೋಪವಾಗಿಲ್ಲ ಎಂದು ನ್ಯಾಯಾಲಯ ತಿಳಿಸಿದೆ.

ಕಾರ್ಯಕಾರಿ ವಿಷಯಗಳಲ್ಲಿ ನ್ಯಾಯಾಲಯ ಧುಮುಕಿ ಮಧ್ಯ ಪ್ರವೇಶ ಮಾಡಲು ಸಾಧ್ಯವಿಲ್ಲ. ಆಡಳಿತ ನಡೆಸಲು ನ್ಯಾಯಾಂಗಕ್ಕೆ ತಿಳಿಸಲಾಗದು ಎಂದು ಸುಪ್ರೀಂ ಕೋರ್ಟ್ ಹೇಳಿದೆ.

ನೂತನ ಸಂಸತ್ ಭವನ ನಿರ್ಮಾಣವನ್ನು ಒಳಗೊಂಡ ಸೆಂಟ್ರಲ್ ವಿಸ್ಟಾ ಯೋಜನೆಯ ಬಗ್ಗೆ ಸೆಪ್ಟೆಂಬರ್ 2019ರಲ್ಲಿ ಪ್ರಕಟಣೆ ಹೊರಡಿಸಲಾಗಿತ್ತು.

ಈ ಯೋಜನೆ ಪ್ರಶ್ನಿಸಿ ದಾಖಲಾಗಿದ್ದ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎ.ಎಂ. ಖಾನ್ವಿಲ್ಕರ್ ಅವರ ನೇತೃತ್ವದ ತ್ರಿಸದಸ್ಯ ಪೀಠ, 2-1 ಅಂತರದ ಬಹುಮತದ ತೀರ್ಪು ನೀಡಿದೆ. ಯೋಜನೆಗೆ ಪರಿಸರ ಅನುಮತಿ ನೀಡಿರುವುದು ಹಾಗೂ ನೂತನ ಸಂಸತ್ ಭವನ ನಿರ್ಮಾಣಕ್ಕೆ ಜಮೀನಿನಲ್ಲಿ ಬದಲಾವಣೆ ತರಲು ಅಧಿಸೂಚನೆ ಹೊರಡಿಸಿರುವುದು ಸಿಂಧುವಾಗಿದೆ ಎಂದು ಬಹುಮತದ ಆದೇಶದಲ್ಲಿ ತಿಳಿಸಲಾಗಿದೆ. ನ್ಯಾಯಮೂರ್ತಿ ಖಾನ್ವಿಲ್ಕರ್ ಅವರು ತಮ್ಮ ಹಾಗೂ ನ್ಯಾಯಮೂರ್ತಿ ದಿನೇಶ್ ಮಹೇಶ್ವರಿ ಅವರ ಪರವಾಗಿ ತೀರ್ಪು ಬರೆದಿದ್ದಾರೆ.

ಭಿನ್ನಮತದ ತೀರ್ಪು ಬರೆದಿರುವ ನ್ಯಾಯಮೂರ್ತಿ ಸಂಜೀವ್ ಖನ್ನ, ನಿರ್ಧಾರ ತೆಗೆದುಕೊಳ್ಳುವ ಪ್ರಕ್ರಿಯೆಯಲ್ಲಿ ಸಾರ್ವಜನಿಕ ಭಾಗಿದಾರಿಕೆ ಇಲ್ಲ ಹಾಗೂ ನಿರ್ಮಾಣಕ್ಕಾಗಿ ಪಾರಂಪರಿಕ ಸಂರಕ್ಷಣಾ ಸಮಿತಿ ಅನುಮತಿ ಪಡೆದಿಲ್ಲ ಎಂದು ತಿಳಿಸಿದ್ದಾರೆ.

ಆದರೆ, ಕಟ್ಟಡ ನಿರ್ಮಾಣದ ಬಿಡ್‌ಗೆ ಆಹ್ವಾನ, ಕನ್ಸಲ್ಟೆನ್ಸಿಗೆ ಅನುಮತಿ ನೀಡಿರುವುದು ಹಾಗೂ ಅರ್ಬನ್ ಆರ್ಟ್ಸ್ ಕಮೀಷನ್‌ಗೆ ಆದೇಶ ನೀಡಿರುವುದು ನಿಯಮಗಳಿಗೆ ಅನುಗುಣವಾಗಿದೆ ಎಂದು ನ್ಯಾಯಮೂರ್ತಿ ಖನ್ನ ತಿಳಿಸಿದ್ದಾರೆ.

ಸೆಂಟ್ರಲ್ ವಿಸ್ಟಾ ಯೋಜನೆಯನ್ನು ಪ್ರಶ್ನಿಸಿ ಹತ್ತು ಅರ್ಜಿಗಳನ್ನು ದಾಖಲಿಸಲಾಗಿತ್ತು.

### ಪಾರಂಪರಿಕ ಸಮಿತಿ ಒಪ್ಪಿಗೆಯ ನಂತರ ಸೆಂಟ್ರಲ್ ವಿಸ್ಟಾ ಕಾಮಗಾರಿ

ನವದೆಹಲಿ, ಜ. 5 - ಸುಪ್ರೀಂ ಕೋರ್ಟ್ ಅನುಮತಿ ಪಡೆದಿರುವ ಸೆಂಟ್ರಲ್ ವಿಸ್ಟಾ ಯೋಜನೆಗೆ ಪಾರಂಪರಿಕ ಸಂರಕ್ಷಣಾ ಸಮಿತಿಯ ಅನುಮೋದನೆಯ ನಂತರ ಚಾಲನೆ ನೀಡಲಾಗುವುದು ಎಂದು ಕೇಂದ್ರ ಲೋಕೋಪಯೋಗಿ ಇಲಾಖೆಯ ಅಧಿಕಾರಿಗಳು ತಿಳಿಸಿದ್ದಾರೆ.

ನೂತನ ಸಂಸತ್ ಕಟ್ಟಡದ ಕಾಮಗಾರಿ ಆರಂಭಿಸುವ ಮುಂಚೆ ಪಾರಂಪರಿಕ ಸಂರಕ್ಷಣಾ ಸಮಿತಿಗೆ ಅರ್ಜಿ ಸಲ್ಲಿಸಲಾಗುವುದು. ಔಪಚಾರಿಕತೆಗಳನ್ನು ಪೂರ್ಣಗೊಳಿಸಿದ ನಂತರ ಕಟ್ಟಡ ನಿರ್ಮಾಣಕ್ಕೆ ಮುಂದಾಗಲಾಗುವುದು ಎಂದು ಕೇಂದ್ರ ವಸತಿ ಹಾಗೂ ನಗರ ವ್ಯವಹಾರಗಳ ಸಚಿವಾಲಯದ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

# ಹೆಚ್ಚಿನ ವಸತಿ ಮಂಜೂರಾತಿಗಾಗಿ ಸಿಎಂಗೆ ಮನವಿ : ರಾಮಚಂದ್ರ



ಜಗಳೂರು, ಜ.5 - ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ವಸತಿ ರಹಿತರು, ನಿವೇಶನ ರಹಿತರು ಇರುವುದರಿಂದ ಹೆಚ್ಚಿನ ಸಂಖ್ಯೆಯ ವಸತಿಗಳನ್ನು ಮಂಜೂರು ಮಾಡುವಂತೆ ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಿದ್ದೇನೆ ಎಂದು ಶಾಸಕರು ಮತ್ತು ಎಸ್.ಟಿ. ಅಭಿವೃದ್ಧಿ ನಿಗಮದ ಅಧ್ಯಕ್ಷ ಎಸ್.ವಿ. ರಾಮಚಂದ್ರ ತಿಳಿಸಿದ್ದಾರೆ.

ಇಂದು ಮುಖ್ಯಮಂತ್ರಿಗಳ ಸಭೆಯ ನಂತರ ದೂರವಾಣಿಯಲ್ಲಿ 'ಜನತಾವಾಣಿ' ಯೊಂದಿಗೆ ಮಾತನಾಡಿದ ಶಾಸಕರು, ಸರಕಾರ ಬಂದು ಒಂದೂವರೆ ವರ್ಷವಾಗಿದೆ. ಆದರೆ ವಸತಿ ನಿರ್ಮಾಣದ ಪ್ರಗತಿ ಕಡಿಮೆ ಇದೆ. ಗ್ರಾಮೀಣ ಭಾಗದ ಬಡ ಜನರಿಗೆ ಹೆಚ್ಚಿನ ಪ್ರಮಾಣದ ಮನೆಗಳನ್ನು ನಿರ್ಮಿಸಿ ಕೊಡುವುದು ನನ್ನ ಆದ್ಯತೆಯಾಗಿದೆ. ಆದ್ದರಿಂದ ತಕ್ಷಣವೇ ಹೆಚ್ಚಿನ ವಸತಿ ಗಳನ್ನು ಮಂಜೂರಾತಿ ಮಾಡಬೇಕೆಂದು ಮುಖ್ಯಮಂತ್ರಿಗಳಿಗೆ ಮನವಿ ಮಾಡಿದ್ದೇನೆ ಎಂದು ತಿಳಿಸಿದ್ದಾರೆ.

ಕೊಳಚೆ ನಿರ್ಮೂಲನಾ ಮಂಡಳಿಯಿಂದ ಮನೆ ನಿರ್ಮಿಸುವ ಕಾಮಗಾರಿ ಟೆಂಡರ್ ನನೆಗುದಿಗೆ ಬಿದ್ದಿದೆ. ತಕ್ಷಣವೇ ಈ ಕಾಮಗಾರಿಯ ಆರಂಭಕ್ಕೆ ಕ್ರಮ ಕೈಗೊಳ್ಳಬೇಕೆಂದು ವಿನಂತಿಸಿದ್ದೇನೆ. ಕ್ಷೇತ್ರದ ವ್ಯಾಪ್ತಿಯಲ್ಲಿ ಹೊಸದಾಗಿ ಮೂರು ರಸ್ತೆಗಳನ್ನು ಅಭಿವೃದ್ಧಿಗೆ 25 ಕೋಟಿ ರೂ ಮಂಜೂರಾತಿ ನೀಡಿದ್ದಾರೆ ಎಂದರು.

ನಾನು ಕ್ಷೇತ್ರದ ಜನತೆಗೆ ನೀಡಿರುವ ಭರವಸೆಯಂತೆ 'ನೀರು-ಸೂರು' ಕಲ್ಪಿಸಲು ಪ್ರಾಮಾಣಿಕ ಪ್ರಯತ್ನ ಮಾಡುತ್ತಿದ್ದೇನೆ. ಕೆರೆ ತುಂಬಿಸುವ ಯೋಜನೆಗೆ ಈಗಾಗಲೇ ಸರಕಾರ ಅನುದಾನ ನೀಡದೆ ಕಾಮಗರಿಯು ಪ್ರಗತಿಯಲ್ಲಿದೆ. ಬಹುನಿರೀಕ್ಷಿತ ಭದ್ರಾ ಮೇಲ್ದಂಡೆ ಯೋಜನೆ ರಾಷ್ಟ್ರೀಯ ಯೋಜನೆಯಾಗಿರುವುದರಿಂದ ಜಗಳೂರು ಕ್ಷೇತ್ರ ಕಾಲುವೆ ಕಾಮಗಾರಿ ಶೀಘ್ರವೇ ಆರಂಭವಾಗುವ ನಿರೀಕ್ಷೆ ಇದೆ ಹಾಗೂ ಭದ್ರಾ ಹಿನ್ನೀರಿನ ಯೋಜನೆ (ಹೊಸಪೇಟೆ) ವ್ಯಾಪ್ತಿಗೆ ತಾಲ್ಲೂಕಿನ ಎರಡು ಗ್ರಾ.ಪಂಗಳ ಹಳ್ಳಿಗಳಿಗೆ ಕುಡಿಯುವ ನೀರು ಕಲ್ಪಿಸಲು ಮುಖ್ಯಮಂತ್ರಿಗಳಿಗೆ ಮನವಿ ಮಾಡಿದ್ದೇನೆ ಎಂದು ಅವರು ತಿಳಿಸಿದರು.

## ರಾಣೇಬೆನ್ನೂರು : ಸಿಲಿಂಡರ್‌ಗೆ ಮಿಸ್ಡ್ ಕಾಲ್ ಮಾತ್ರ ಕೊಡಿ



ರಾಣೇಬೆನ್ನೂರು, ಜ.5- ಇನ್ನು ಮುಂದೆ ಸಿಲಿಂಡರ್‌ಗಾಗಿ ಬುಕ್ ಮಾಡುವಂತಿಲ್ಲ. 94936 02222 ಈ ಸಂಖ್ಯೆಗೆ ಮಿಸ್ಡ್ ಕಾಲ್ ಮಾಡಿದರೆ ಮರುದಿನ ನಿಮಗೆ ಸಿಲಿಂಡರ್ ಬರುತ್ತೆ. ಮಿಸ್ಡ್ ಕಾಲ್ ಮಾಡುವ ಸಂಖ್ಯೆ ಎಚ್‌ಪಿ ಅವರಲ್ಲಿ ರಿಜಿಸ್ಟರ್ ಆಗಿರಬೇಕು. ಮಿಸ್ಡ್ ಕಾಲ್ ಕೊಟ್ಟ ನಂತರ ಬರುವ ಒಟಿಪಿ ಸಂಖ್ಯೆಯನ್ನು ಸಿಲಿಂಡರ್ ಕೊಡಲು ಬಂದವರಿಗೆ ಹೇಳಬೇಕು. ನಿಮ್ಮ ಸಂಖ್ಯೆ ರಿಜಿಸ್ಟರ್ ಆಗದೇ ಇದ್ದರೆ ಡೆಲಿವರಿ ಬಾಯ್‌ಗೆ ಹೇಳಿದರೆ ನಿಮ್ಮ ಮನೆಯಲ್ಲಿಯೇ ಆ್ಯಪ್‌ನಲ್ಲಿ ರಿಜಿಸ್ಟರ್ ಮಾಡುತ್ತಾರೆ. ಈ ಎಲ್ಲ ಮಾಹಿತಿಯನ್ನು ರಾಣೇಬೆನ್ನೂರು ದೀಕ್ಷಿತ್ ಗ್ಯಾಸ್ ಏಜೆನ್ಸಿಯ ಉಮಾಶಂಕರ್ ಕೋರಿಶೆಟ್ಟರ್ ವಿವರಿಸಿ, ನಮ್ಮ ಗ್ರಾಹಕರು ಈ ನೂತನ ಸೌಲಭ್ಯವನ್ನು ಸದುಪಯೋಗ ಪಡಿಸಿಕೊಳ್ಳುವಂತೆ ಮನವಿ ಮಾಡಿದ್ದಾರೆ.

## ವಿಜಯಕುಮಾರ್‌ಗೆ ಪಿಹೆಚ್ ಡಿ ಪದವಿ



ದಾವಣಗೆರೆ, ಜ.5- ಬಿಐಇಟಿ ಕಾಲೇಜಿನ ಸಿವಿಲ್ ಇಂಜಿನಿಯರಿಂಗ್ ವಿಭಾಗದ ಸಹ ಪ್ರಾಧ್ಯಾಪಕ ಸಿ.ಎಸ್. ವಿಜಯಕುಮಾರ್ ಅವರಿಗೆ ಬೆಂಗಳೂರು ವಿಶ್ವವಿದ್ಯಾಲಯ ಪಿ.ಹೆಚ್.ಡಿ. ಪದವಿ ನೀಡಿದೆ. ವಿಜಯಕುಮಾರ್ ಅವರು ಬೆಂಗಳೂರಿನ ಪ್ರಾಧ್ಯಾಪಕ ಡಾ. ಎಲ್. ಮಂಜೇಶ್ ಅವರ ಮಾರ್ಗದರ್ಶನದಲ್ಲಿ 'ಸ್ಟಡೀಸ್ ಆನ್ ದಿ ಎಫೆಕ್ಟ್ ಆಫ್ ಟೆಂಪರೇಚರ್ ವೇರಿಯೇಷನ್ ಆನ್ ದಿ ಪರ್ಫಾರ್‌ಮೆನ್ಸ್ ಆಫ್ ರಿಜಿಡ್ ಪೇವ್‌ಮೆಂಟ್ಸ್' ಮಹಾಪ್ರಬಂಧ ಮಂಡಿಸಿದ್ದರು.

# ಹತ್ತು ದಿನಗಳಲ್ಲಿ ಲಸಿಕೆಗೆ ಸಜ್ಜು

**(1ನೇ ಪುಟದಿಂದ)** ಆರೋಗ್ಯ ಕಾರ್ಯಕರ್ತರು ಹಾಗೂ ಮುಂಚೂಣಿ ಕಾರ್ಮಿಕರಿಗೆ ಲಸಿಕೆ ನೀಡಲಾಗುವುದು. ತುರ್ತು ಅನುಮತಿ ನೀಡಿದ ದಿನಾಂಕ ಹತ್ತು ದಿನಗಳಲ್ಲೇ ಲಸಿಕೆ ನೀಡಲಾಗುವುದು ಎಂದು ಹೇಳಿದ್ದಾರೆ.

ಇದರ ಬೆನ್ನಲ್ಲೇ ರಾಜ್ಯ ಆರೋಗ್ಯ ಸಚಿವ ಡಾ. ಕೆ. ಸುಧಾಕರ್ ಸರಣಿ ಟ್ವೀಟ್ ಮಾಡಿ, ಲಸಿಕೆ ತಾಲೀಮು ಪ್ರಕ್ರಿಯೆ ಪೂರ್ಣಗೊಂಡಿದೆ. ಲಸಿಕೆ ಅಭಿಯಾನ ಯಾವಾಗ ಆರಂಭವಾಗುತ್ತದೆಯೋ ಅಂದಿನಿಂದಲೇ ರಾಜ್ಯದಲ್ಲೂ ಜನರಿಗೆ ನೀಡಲಾಗುವುದು ಎಂದು ಹೇಳಿದ್ದಾರೆ.

### ಫೈಜರ್ ಲಸಿಕೆ ಪಡೆದ ಮಹಿಳೆ ಸಾವು

**(1ನೇ ಪುಟದಿಂದ) ಉಳಿದಂತೆ ಅವರು ಆರೋಗ್ಯವಾಗಿದ್ದರು ಎಂದು ಅಸಿವಿಡೋ ಮಗಳು ವಾನಿಯಾ ಫಿಗ್ಯುರೆಡೊ ತಿಳಿಸಿದ್ದಾರೆ.**
**ನನ್ನ ಮಗಳು ಆರೋಗ್ಯವಾಗಿದ್ದಳು. ಯಾವುದೇ ಆರೋಗ್ಯ ಸಮಸ್ಯೆ ಇರಲಿಲ್ಲ. ಕೊರೊನಾ ಲಸಿಕೆ ಪಡೆದಿದ್ದರಾದರೂ, ಯಾವುದೇ ಲಕ್ಷಣಗಳು ಕಂಡು ಬಂದಿರಲಿಲ್ಲ. ಏನಾಯಿತು ಎಂಬುದು ಗೊತ್ತಿಲ್ಲ. ನನಗೆ ಉತ್ತರ ಬೇಕಿದೆ ಎಂದು ಅವರ ತಂದೆ ಅಬಿಲೋ ಅಸಿವಿಡೊ ತಿಳಿಸಿದ್ದಾರೆ. ಅಸಿವಿಡೋ ಸೇರಿದಂತೆ ಪೋರ್ಟೋದ 538 ಜನರಿಗೆ ಫೈಜರ್ ಲಸಿಕೆ ನೀಡಲಾಗಿತ್ತು.**

### ಜಂಟಿ ಹೇಳಿಕೆ ನೀಡಿದ ಲಸಿಕೆ ಉತ್ಪಾದಕರು

**(1ನೇ ಪುಟದಿಂದ)** ಈ ಜಟಾಪಟಿಯ ನಂತರ ಉಭಯರು ಜಂಟಿ ಹೇಳಿಕೆ ನೀಡಿದ್ದು, ದೇಶದಲ್ಲಿ ಹಾಗೂ ವಿಶ್ವದಲ್ಲಿ ಸುಲಲಿತವಾಗಿ ಲಸಿಕೆ ಬಿಡುಗಡೆ ಮಾಡಲು ಶ್ರಮಿಸುವುದಾಗಿ ತಿಳಿಸಿದ್ದಾರೆ.

ಜೀವಗಳನ್ನು ರಕ್ಷಿಸುವುದು ಹಾಗೂ ಜನಸಮೂಹದ ಜೀವನಾಧಾರ ಉಳಿಸುವುದು ನಮ್ಮ ಎದುರಿನ ಪ್ರಮುಖ ಆದ್ಯತೆಯಾಗಿದೆ. ಲಸಿಕೆಗಳು ಜಾಗತಿಕ ಸಾರ್ವಜನಿಕ ಆರೋಗ್ಯಕ್ಕೆ ಒಳ್ಳೆಯವಾಗಿದ್ದು ಅವುಗಳು ಜೀವಗಳನ್ನು ರಕ್ಷಿಸುವ ಹಾಗೂ ಆರ್ಥಿಕತೆಯನ್ನು ಆದಷ್ಟು ಬೇಗ ಸಾಮಾನ್ಯ ಸ್ಥಿತಿಗೆ ತರುವ ಸಾಮರ್ಥ್ಯ ಹೊಂದಿವೆ ಎಂದು ಉಭಯರು ಹೇಳಿದ್ದಾರೆ.

ಜನರು ಹಾಗೂ ದೇಶಗಳಿಗೆ ಲಸಿಕೆ ಎಷ್ಟು ಪ್ರಾಮುಖ್ಯ ಎಂಬುದು ನಮಗೆ ತಿಳಿದಿದೆ. ಜಗತ್ತಿಗೆ ನಮ್ಮ ಲಸಿಕೆ ಸಿಗುವಂತಾಗಲು ಜಂಟಿಯಾಗಿ ಬದ್ಧತೆ ತೋರುತ್ತೇವೆ ಎಂದು ಉಭಯರು ತಿಳಿಸಿದ್ದಾರೆ.

# ಅಪಪ್ರಚಾರಕ್ಕೆ ಕಿವಿಗೊಡಬೇಡಿ

**(1ನೇ ಪುಟದಿಂದ)** ದಾಖಲಿಸುವ ಕೆಲಸ ಆಗಬೇಕಿದೆ ಎಂದರು. ಕೊರೊನಾ ನಿಯಂತ್ರಿಸಲು ಆರೋಗ್ಯ, ಪೊಲೀಸ್, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಗಳು, ಆಶಾ ಕಾರ್ಯಕರ್ತೆಯರು ಜಿಲ್ಲಾಡಳಿತದೊಂದಿಗೆ ಉತ್ತಮ ರೀತಿಯಲ್ಲಿ ಸಂಪರ್ಕ ಸಾಧಿಸಿ ಶ್ರಮ ವಹಿಸಿ ಕೆಲಸ ಮಾಡಿದ್ದಾರೆ. ಅದರಂತೆ, ಜಿಲ್ಲೆಯ ಜನಪ್ರತಿನಿಧಿಗಳು ಸಹ ಕೆಲಸ ಮಾಡಲು ನಮಗೆ ಹುರುಪು ತುಂಬಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಹನುಮಂತರಾಯ ಮಾತನಾಡಿ, ಜಿಲ್ಲೆಯಲ್ಲಿ ಕೊರೊನಾದಿಂದ 250ಕ್ಕೂ ಹೆಚ್ಚು ಜನರು ಸಾವನ್ನಪ್ಪಿದ್ದಾರೆ. ಇಂತಹ ಸಂದರ್ಭದಲ್ಲಿ ಜನರು ತಮ್ಮ ಜೀವನ ಶೈಲಿಯಲ್ಲಿ ಮಾಡಿಕೊಂಡಿರುವ ಬದಲಾವಣೆಗಳನ್ನು ಮುಂದುವರೆಸುವ ಮೂಲಕ ತಮ್ಮನ್ನು ರಕ್ಷಿಸಿಕೊಳ್ಳಬೇಕು. ಎಲ್ಲ ಬದಲಾವಣೆ ಪೊಲೀಸರಿಂದ ಸಾಧ್ಯವಿಲ್ಲ ಎಂದು ಹೇಳಿದರು.

ಮೇಯರ್ ಬಿ.ಜಿ. ಅಜಯಕುಮಾರ್ ಮಾತನಾಡಿ, ಕೊರೊನಾ ವಾರಿಯರ್‌ಗಳು ದೇವರ ರೂಪದಲ್ಲಿ ಬಂದು ಜನರನ್ನು ಕಾಪಾಡಿದ್ದಾರೆ. ಕೊರೊನಾ ಸಂದರ್ಭದಲ್ಲಿ ದಾನಿಗಳು ಅನ್ನದಾತರ ರೂಪದಲ್ಲಿ ಜನರ ಮನೆಗಳಿಗೆ ದವಸ ಧಾನ್ಯ ಕಳಿಸಿದ್ದಾರೆ ಎಂದು ತಿಳಿಸಿದರು.

ಜಿ.ಪಂ. ಸಿಇಒ ಪದ್ಮ ಬಸವಂತಪ್ಪ ಮಾತನಾಡಿ, ಕೊರೊನಾ ಮುಗಿಯಿತು ಎನ್ನುವ ಹಾಗಿಲ್ಲ. ವೈರಸ್‌ಗಳು ರೂಪಾಂತರ ಆಗುತ್ತಿರುತ್ತವೆ. ಹೀಗಾಗಿ ಜೀವನ ಶೈಲಿ ಬದಲಾಯಿಸಿಕೊಳ್ಳುವುದೇ ಕೊರೊನಾ ಸಮಸ್ಯೆ ನಿವಾರಣೆಯ ಮಾರ್ಗ ಎಂದರು.

ಹಿರಿಯ ಪತ್ರಕರ್ತ ಹೆಚ್.ಬಿ.ಮಂಜುನಾಥ್ ಮಾತನಾಡಿದರು. ಜಿಲ್ಲಾ ಯೋಗ ಒಕ್ಕೂಟದ ಪ್ರಧಾನ ಕಾರ್ಯದರ್ಶಿ ವಾಸುದೇವ ರಾಯ್ಕರ್ ಪ್ರಾಸ್ತಾವಿಕ ನುಡಿಗಳನ್ನಾಡಿದರು.

ಪ್ರೇರಣಾ ಸಂಸ್ಥೆ ಅಧ್ಯಕ್ಷೆ ಚೇತನಾ ಶಿವಕುಮಾರ್ ಅಧ್ಯಕ್ಷತೆ ವಹಿಸಿದ್ದರು. ವೇದಿಕೆಯಲ್ಲಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಉಪ ನಿರ್ದೇಶಕ ಕೆ.ಹೆಚ್. ವಿಜಯಕುಮಾರ್, ಜಿಲ್ಲಾ ಆರೋಗ್ಯಾಧಿಕಾರಿ ಡಾ.ನಾಗರಾಜ್, ಡಾ.ಯು.ಸಿದ್ದೇಶ್, ಜಿಲ್ಲಾ ವರದಿಗಾರರ ಕೂಟದ ಅಧ್ಯಕ್ಷ ಜಿ.ಎಂ.ಆರ್. ಆರಾಧ್ಯ, ಡಿ.ವೆಂಕಟೇಶ್ ಕಾಟೆ, ಮರಿಯೋಜಿರಾವ್, ಶಾರದಾ ರಾಯ್ಕರ್ ಮತ್ತಿತರರು ಉಪಸ್ಥಿತರಿದ್ದರು.

ಈ ಸಂದರ್ಭದಲ್ಲಿ ಸುಮಾರು ಇನ್ನೂರು ಕೊರೊನಾ ವಾರಿಯರ್‌ಗಳಾದ ವೈದ್ಯರು, ಶುಶ್ರೂಷಕಿಯರು, ಪೊಲೀಸರು, ಪತ್ರಕರ್ತರು ಮತ್ತಿತರರನ್ನು ಸನ್ಮಾನಿಸಲಾಯಿತು.

ಹಿಮಾಲಯನ್ ಅಡ್ವೆಂಚರ್ ಅಕಾಡೆಮಿಯ ಎನ್.ಕೆ.ಕೊಟ್ರೇಶ್ ಸ್ವಾಗತಿಸಿದರು. ಶೃತಿ ನಿರೂಪಿಸಿ, ಪ್ರಾರ್ಥಿಸಿದರು.

### ನಾನೇ ಮೊದಲು ಲಸಿಕೆ ತೆಗೆದುಕೊಳ್ಳುವೆ: ಡಿಸಿ

**(1ನೇ ಪುಟದಿಂದ)** ಸಿಬ್ಬಂದಿಗೆ ಲಸಿಕೆ ನೀಡಲಾಗುವುದು. ನಂತರದ ಹಂತಗಳಲ್ಲಿ ಎಲ್ಲ ವರ್ಗದ ಸಾರ್ವಜನಿಕರಿಗೆ ಲಸಿಕೆ ಲಭ್ಯವಾಗಲಿದೆ. ಇದಕ್ಕಾಗಿ ಜಿಲ್ಲೆಯ 100 ಸಾರ್ವಜನಿಕ ಚಿಕಿತ್ಸಾ ಕೇಂದ್ರಗಳಲ್ಲಿ ವ್ಯವಸ್ಥೆ ಮಾಡಲಾಗಿದೆ ಎಂದು ಸುದ್ದಿಗಾರರ ಪ್ರಶ್ನೆಗೆ ಜಿಲ್ಲಾಧಿಕಾರಿ ಮಹಾಂತೇಶ ಬೀಳಗಿ ಉತ್ತರಿಸಿದ್ದಾರೆ.

# ವಿಷ ನೀಡುವ ಪ್ರಯತ್ನ ನಡೆದಿತ್ತು ಎಂದ ಇಸ್ರೋ ವಿಜ್ಞಾನಿ

ಬೆಂಗಳೂರು, ಜ. 5 – ಮೂರು ವರ್ಷಗಳ ಹಿಂದೆ ತಮಗೆ ವಿಷಪ್ರಾಷನ ಮಾಡಿಸುವ ಪ್ರಯತ್ನ ನಡೆದಿತ್ತು ಎಂದು ಇಸ್ರೋದ ಉನ್ನತ ವಿಜ್ಞಾನಿಯೊಬ್ಬರು ಹೇಳಿದ್ದಾರೆ. ಮೇ 23, 2017ರಲ್ಲಿ ಇಸ್ರೋ ಕೇಂದ್ರ ಕಚೇರಿಯಲ್ಲಿ ಸಂದರ್ಶನವೊಂದನ್ನು ನೀಡುತ್ತಿರುವ ವೇಳೆ ಮಾರಣಾಂತಿಕ ಆರ್ಸೆನಿಕ್ ಟ್ರಯಾಕ್ಸೈಡ್ ನೀಡಲಾಗಿತ್ತು ಎಂದು ವಿಜ್ಞಾನಿ ತಪನ್ ಮಿಶ್ರ ಹೇಳಿದ್ದಾರೆ.

ಭೋಜನದ ಸಮಯದಲ್ಲಿ ದೋಸೆ ಜೊತೆ ನೀಡಿದ ಚಟ್ನಿಯಲ್ಲಿ ವಿಷ ಬೆರೆಸಲಾಗಿತ್ತು ಎಂದವರು ತಿಳಿಸಿದ್ದಾರೆ. ಪ್ರಸಕ್ತ ಮಿಶ್ರ ಅವರು ಇಸ್ರೋದ ಹಿರಿಯ ಸಲಹೆಗಾರರಾಗಿದ್ದಾರೆ. ಅವರು ಈ ತಿಂಗಳ ಅಂತ್ಯಕ್ಕೆ ನಿವೃತ್ತರಾಗಲಿದ್ದಾರೆ.

ಫೇಸ್‌ಬುಕ್‌ನಲ್ಲಿ ಈ ಘಟನೆಯ ಬಗ್ಗೆ ಹೇಳಿಕೆ ನೀಡಿರುವ ಅವರು, ಗೃಹ ವ್ಯವಹಾರಗಳ ಭದ್ರತಾ ಸಿಬ್ಬಂದಿ ತಮ್ಮನ್ನು ಭೇಟಿ ಮಾಡಿ ವಿಷದ ಬಗ್ಗೆ ಎಚ್ಚರಿಸಿದರು. ವೈದ್ಯರು ತಕ್ಷಣವೇ ಚಿಕಿತ್ಸೆ ನೀಡಲು ನೆರವಾದರು ಎಂದಿದ್ದಾರೆ. ನಂತರ ಹಲವಾರು ಆರೋಗ್ಯ ಸಮಸ್ಯೆಗಳಿಂದ ಬಳಲಿದ್ದಾಗಿ ತಿಳಿಸಿರುವ ಮಿಶ್ರ, ಬೃಹತ್ ಸೈನಿಕ ಹಾಗೂ ವಾಣಿಜ್ಯ ಕೊಡುಗೆ ನೀಡುವುದನ್ನು ತಡೆಯಲು ಈ ಕೃತ್ಯ ಎಸಗಲಾಗಿತ್ತು.ಈ ಘಟನೆಯ ಬ ಗ್ಗೆ ಸರ್ಕಾರ ತನಿಖೆ ನಡೆಸಬೇಕು ಎಂದವರು ಒತ್ತಾಯಿಸಿದ್ದಾರೆ.

# ಮನಸ್ಸಿನ ಹಿಡಿತಕ್ಕೆ ಯೋಗ, ಕ್ರೀಡೆಯಲ್ಲಿ ತೊಡಗಿಕೊಳ್ಳಬೇಕು

### ಹರಪನಹಳ್ಳಿ ತಾ।।ನ ಕಾರ್ಯಕ್ರಮದಲ್ಲಿ ಪಂಚಮಸಾಲಿ ಶ್ರೀ



ಹರಪನಹಳ್ಳಿ, ಜ.5- ದೇಹ ವೃಕ್ಷವಾದರೆ, ಮನಸ್ಸು ಮಂಗನಿದ್ದಂತೆ. ಮನಸ್ಸನ್ನು ಕೇಂದ್ರೀಕರಿಸಲು ದೇಹಕ್ಕೆ ಸರಿಯಾಗಿ ನೀರು, ಆಹಾರ ಪೂರೈಸಬೇಕು. ಆಗ ಮಾತ್ರ ಮನಸ್ಸು ಹಿಡಿತದಲ್ಲಿರುತ್ತದೆ ಎಂದು ಹರಿಹರ ಪಂಚಮಸಾಲಿ ಪೀಠದ ಶ್ರೀ ವಚನಾನಂದ ಸ್ವಾಮೀಜಿ ಅಭಿಪ್ರಾಯಪಟ್ಟರು.

ತಾಲ್ಲೂಕಿನ ಕಾನಹಳ್ಳಿ, ಕೂಲಹಳ್ಳಿ, ಬಾಗಳಿ, ಕೋಡಿಹಳ್ಳಿ, ನಂದಿಬೇವೂರು, ಕೊಂಗನಹೊಸೂರು, ಬಾವಿಹಳ್ಳಿ, ಗಜಾಪುರ ಹಾಗೂ ಚಿಗಟೇರಿ ಗ್ರಾಮಗಳಿಗೆ ತೆರಳಿ ಗ್ರಾಮದರ್ಶನ ಕೈಗೊಂಡು ಭಕ್ತರನ್ನು ಇದೇ ದಿನಾಂಕ 14-15ರಂದು ನಡೆಯುವ ಹರಜಾತ್ರೆಗೆ ಆಹ್ವಾನಿಸಿ, ನಂತರ ಪಟ್ಟಣದ ಪರ್ಲ್ ವಿದ್ಯಾಸಂಸ್ಥೆಗೆ ಭೇಟಿ ನೀಡಿದ ಸಂದರ್ಭದಲ್ಲಿ ಮಾತನಾಡಿದರು.

ವಿದ್ಯಾರ್ಥಿಗಳೊಂದಿಗೆ ಕ್ರಿಕೆಟ್ ಆಡಿದ ಶ್ರೀಗಳು, ಮನುಷ್ಯ ನಿತ್ಯ ತನ್ನ ಬದುಕಿನ ಜತೆಗೆ ಉತ್ತಮ ಆರೋಗ್ಯ ಹೊಂದಲು ಯೋಗ ಮತ್ತು ಕ್ರೀಡೆಗಳಲ್ಲಿ ತೊಡಗಿಕೊಳ್ಳುವುದರಿಂದ ಹೊಸ ಚೈತನ್ಯ, ಉತ್ಸಾಹ ಮೂಡುತ್ತದೆ ಎಂದರು. ನಮ್ಮ ಪರಿಸರ ಆರೋಗ್ಯಕರ ವಾತಾವರಣವನ್ನುಂಟು ಮಾಡಬೇಕು. ಇದಕ್ಕಾಗಿ ಸ್ವಚ್ಚತೆ, ಗಿಡ, ಮರಗಳನ್ನು ಬೆಳೆಸಿದಾಗ ಮಾತ್ರ ಉತ್ತಮ ಆರೋಗ್ಯ ಹೊಂದಲು ಸಾಧ್ಯ ಎಂದರು. ಪರ್ಲ್ ಪಬ್ಲಿಕ್ ಶಾಲೆಯ ಅಧ್ಯಕ್ಷ ಶಶಿಧರ್ ಪೂಜಾರ್, ಸದಸ್ಯರುಗಳಾದ ಕೆ. ವಿರೂಪಾಕ್ಷ, ಪಿ. ಮಂಜುನಾಥ, ಉಲ್ಲತ್ತಿ ಬಸವರಾಜ, ಮಾಲತೇಶ ಚಳಗೇರಿ, ಚನ್ನೇಶ ಬಣಕಾರ್, ಪ್ರಾಂಶುಪಾಲರಾದ ಸುಮಾ ನಾಗೇಶ ಉಪ್ಪಿನ. ನಾಗೇಶ ಉಪ್ಪಿನ ಇನ್ನಿತರರಿದ್ದರು.

# ನೈಸರ್ಗಿಕ ಅನಿಲದ ಪಾಲು ದುಪ್ಪಟ್ಟಾಗಲಿದೆ

**(1ನೇ ಪುಟದಿಂದ)** ವರ್ಷಗಳಲ್ಲಿ ಅನಿಲ ಕೊಳವೆ ಮಾರ್ಗದ ಜಾಲ ಎರಡು ಪಟ್ಟು ಹೆಚ್ಚಾಗಿ 32,000 ಕಿಮೀ.ಗಳಿಗೆ ತಲುಪಿದೆ. ಗುಜರಾತ್‌ನಲ್ಲಿ ಪವನ ಹಾಗೂ ಸೌರ ವಿದ್ಯುತ್ ಒಳಗೊಂಡ ವಿಶ್ವದ ಅತಿ ದೊಡ್ಡ ಹೈಬ್ರೀಡ್ ನವೀಕರಿಸುವ ವಿದ್ಯುತ್ ಘಟಕ ಸ್ಥಾಪನೆಯಾಗುತ್ತಿದೆ ಎಂದು ಪ್ರಧಾನಿ ತಿಳಿಸಿದರು.

ಜೈವಿಕ ಇಂಧನದ ಜೊತೆಗೆ ವಿದ್ಯುತ್ ಚಾಲಿತ ವಾಹನಗಳಿಗೂ ಒತ್ತು ನೀಡಲಾಗುತ್ತಿದೆ. ಇದರಿಂದಾಗಿ ಭಾರತ ಮಾಲಿನ್ಯಕಾರಕ ಕಲ್ಲಿದ್ದಲು ಹಾಗೂ ದ್ರವ ಇಂಧನವನ್ನು ಆಧರಿಸುವುದು ಕಡಿಮೆಯಾಗಲಿದೆ ಎಂದವರು ತಿಳಿಸಿದ್ದಾರೆ.

ಪ್ರಸಕ್ತ ದೇಶದ ಶೇ.58ರಷ್ಟು ವಿದ್ಯುತ್ ಪೆಟ್ರೋಲ್ ಹಾಗೂ ಇತರೆ ಇಂಧನಗಳಿಂದ ಬರುತ್ತಿದೆ. ನೈರ್ಗಿಕ ಅನಿಲದ ಪ್ರಮಾಣ ಶೇ.6 ಹಾಗೂ ನವೀಕರಿಸಬಹುದಾದ ಇಂಧನದ ಪ್ರಮಾಣ ಶೇ.2ಕ್ಕಿಂತಲೂ ಕಡಿಮೆ ಇದೆ. ನೈಸರ್ಗಿಕ ಅನಿಲ ಸ್ವಚ್ಛವಾಗಿದೆ ಹಾಗೂ ಇದನ್ನು ಕೊಳವೆ ಮಾರ್ಗದ ಮೂಲಕ ಸಾಗಿಸಬಹುದಾಗಿದೆ. ಇದರಿಂದಾಗಿ ವಾಹನ ಸಂಚಾರ ಕಡಿಮೆಯಾಗುತ್ತದೆ. 2030ರ ವೇಳೆಗೆ ಇಂಧನದಲ್ಲಿ ಅನಿಲದ ಪಾಲು ಶೇ.15ರಷ್ಟಾಗಲಿದೆ ಎಂದು ಪ್ರಧಾನಿ ವಿಶ್ವಾಸ ವ್ಯಕ್ತಪಡಿಸಿದ್ದಾರೆ.


## ಎಸ್.ಎನ್. ಕೃಷ್ಣೋಜಿರಾವ್ (ಬಿರ್ಜೆ) ನಿಧನ



ದಾವಣಗೆರೆ ಪಾತಾಳ ಲಿಂಗೇಶ್ವರ ದೇವಸ್ಥಾನ, ಹೊಂಡದ ರಸ್ತೆ ವಾಸಿ **ಎಸ್.ಎನ್ ಕೃಷ್ಣೋಜಿರಾವ್ (ಬಿರ್ಜೆ)** (82) ಅವರು ದಿನಾಂಕ 5.01.2021 ರಂದು ಮಂಗಳವಾರ ರಾತ್ರಿ 9.30ಕ್ಕೆ ನಿಧನರಾಗಿದ್ದಾರೆ. ಪತ್ನಿ, ಇಬ್ಬರು ಪುತ್ರರು, ಮೂವರು ಪುತ್ರಿಯರು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 6.01.2021 ರಂದು ಬುಧವಾರ ಮಧ್ಯಾಹ್ನ 2.30ಕ್ಕೆ ನಗರದ ಸಾರ್ವಜನಿಕ ರುದ್ರಭೂಮಿಯಲ್ಲಿ ನೆರವೇರಲಿದೆ.

**ಇಂತಿ ದುಃಖತಪ್ತ ಕುಟುಂಬ ವರ್ಗ, 98868 81944**

## ಕೈ ಹಿಡಿದು ನಡೆಸಿದ ಅಪ್ಪ-ಅಮ್ಮರ ನೆನಪಲ್ಲಿ



**ದಿ।। ಕೊಂಡಜ್ಜಿ ಈಶ್ವರಪ್ಪನವರು**
ನಿಧನ : 06.01.1984



**ದಿ।। ಅನ್ನಪೂರ್ಣಮ್ಮ ಕೊಂಡಜ್ಜಿ**
ನಿಧನ : 06.06.2008

ನಮ್ಮೆಲ್ಲರನ್ನು ಕೈ ಹಿಡಿದು ನಡೆಸಿ
ತಪ್ಪು ಹೆಜ್ಜೆಗಳನ್ನು ತಿದ್ದಿ ತೀಡಿ
ನಮಗೆ ಬದುಕು ದೊರಕಿಸಿಕೊಟ್ಟ ನೀವು
ನಿತ್ಯ ಸ್ಮರಣೀಯರು

ವರ್ಷಗಳೆಷ್ಟೇ ಕಳೆಯಲಿ,
ನಿಮ್ಮ ನೆನಪು
ನಮ್ಮೆದೆಗಳಲ್ಲಿ ಹಚ್ಚ ಹಸಿರಾಗಿದೆ....
ನೀವಿಟ್ಟ ಹೆಜ್ಜೆಗಳ ಮೇಲೆ ನಡೆಯುತ್ತಿರುವ.....

ಶ್ರೀಮತಿ ಶ್ರೀ ಕೊಂಡಜ್ಜಿ ಜಯಪ್ರಕಾಶ್ — ಶ್ರೀಮತಿ ಶ್ರೀ ಯೋಗೀಶ್ ಕೊಂಡಜ್ಜಿ
ಶ್ರೀಮತಿ ಶ್ರೀ ಭೀಮರಾಜ್ ಕೊಂಡಜ್ಜಿ — ಶ್ರೀಮತಿ ಶ್ರೀ ಗಿರೀಶ್ ಕೊಂಡಜ್ಜಿ
ಚಿ।। ಗಂಗಾ BE, ಚಿ।। ಗಾನವಿ, ಚಿ।। ತೇಜಸ್
ಶ್ರೀಮತಿ ಮತ್ತು ಶ್ರೀ ಜಿ.ಹೆಚ್. ರಾಜಕುಮಾರ್ ಮತ್ತು ಮಕ್ಕಳು — ದಿ।। ಸಾಲೇರ ಸಿದ್ದಪ್ಪನವರ ಮಕ್ಕಳು
ಶ್ರೀಮತಿ ಮತ್ತು ಶ್ರೀ ಜಿ.ಹೆಚ್. ಶಿವಕುಮಾರ್ ಮತ್ತು ಮಕ್ಕಳು — ಶ್ರೀಮತಿ ಶ್ರೀ ಎ.ಎಂ. ಜಯದೇವಪ್ಪ ಮತ್ತು ಮಕ್ಕಳು
ಶ್ರೀಮತಿ ಮತ್ತು ಶ್ರೀ ಡಾ।। ಜಿ.ಹೆಚ್. ಮಂಜುನಾಥ್ — ಶ್ರೀಮತಿ ಸರ್ವಮಂಗಳಮ್ಮ ಪುರದಪ್ಪ ಮತ್ತು ಮಕ್ಕಳು
ಶ್ರೀಮತಿ, ಶ್ರೀ ಎಂ.ಎಸ್. ಪಾಟೀಲ್ ಮತ್ತು ಮಕ್ಕಳು

**ಅಂತರವಳ್ಳಿ, ಮನೆತನದವರು ಕೊಂಡಜ್ಜಿ ಹಾಗೂ ಬಂಧು-ಮಿತ್ರರು.**

## ವೈಕುಂಠ ಸಮಾರಾಧನೆ ಆಹ್ವಾನ ಪತ್ರಿಕೆ



ದಾವಣಗೆರೆ ತಾಲ್ಲೂಕು ತೋಳಹುಣಸೆ ಗ್ರಾಮದ ವಾಸಿ (ಯಲ್ಲಮ್ಮ ನಗರ) ದಿ. ಟಿ.ಎಲ್. ರಾಮಾನಾಯ್ಕ್ ಇವರ ಧರ್ಮಪತ್ನಿ ಹಾಗೂ ನಮ್ಮ ತಾಯಿಯವರಾದ
**ಶ್ರೀಮತಿ ಲಕ್ಷ್ಮಿಬಾಯಿ**
ಇವರು ದಿನಾಂಕ 26.12.2020 ರಂದು ಸಂಜೆ 5.15ಕ್ಕೆ ನಿಧನರಾಗಿದ್ದು ತತ್ಸಂಬಂಧ ಮೃತರ ಆತ್ಮ ಶಾಂತಿಗಾಗಿ ಇವರ **ವೈಕುಂಠ ಸಮಾರಾಧನೆಯನ್ನು** ದಿನಾಂಕ 7.01.2021ರಂದು ಗುರುವಾರ ಮಧ್ಯಾಹ್ನ 12.30ಕ್ಕೆ ತೋಳಹುಣಸೆ ಮೃತರ ಸ್ವಗೃಹದಲ್ಲಿ ಏರ್ಪಡಿಸಲಾಗಿದೆ. ಕಾರಣ ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಶಾಂತಿ ಕೋರಲು ವಿನಂತಿ.

ಇಂತಿ ದುಃಖತಪ್ತರು
**ಮಕ್ಕಳು, ಅಳಿಯಂದಿರು, ಸೊಸೆಯಂದಿರು ಹಾಗೂ ಮೊಮ್ಮಕ್ಕಳು.**

ವಿ.ಸೂ. : ಈಗಾಗಲೇ ಆಹ್ವಾನ ಪತ್ರಿಕೆ ಕಳುಹಿಸಲಾಗಿದ್ದು, ತಲುಪದೇ ಇರುವವರು ಇದನ್ನೇ ಆಹ್ವಾನವೆಂದು ಭಾವಿಸಿ, ಆಗಮಿಸಲು ಕೋರಿದೆ.

## ಈರಣ್ಣ ಮೇಡ್ಲೇರಿ ನಿಧನ



ದಾವಣಗೆರೆ ನಗರದ ಶಿವಕುಮಾರ ಸ್ವಾಮಿ ಬಡಾವಣೆ ವಾಸಿ ಶ್ರೀಮತಿ ನಿರ್ಮಲ ಮೇಡ್ಲೇರಿ ಇವರ ಪತಿ, ವಿಜಯ ಬ್ಯಾಂಕ್ ನಿವೃತ್ತ ನೌಕರರಾದ **ಶ್ರೀ ಈರಣ್ಣ ಮೇಡ್ಲೇರಿ** ಅವರು ದಿನಾಂಕ 05.01.2021ನೇ ಮಂಗಳವಾರ ಮಧ್ಯಾಹ್ನ 2.20ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 67 ವರ್ಷ ವಯಸ್ಸಾಗಿತ್ತು. ಪತ್ನಿ, ಇಬ್ಬರು ಪುತ್ರರು, ಸೊಸೆಯಂದಿರು, ಮೊಮ್ಮಗಳು ಹಾಗೂ ಅಪಾರ ಬಂಧು-ಮಿತ್ರರನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 06.01.2021ನೇ ಬುಧವಾರ ಬೆಳಿಗ್ಗೆ 10 ಗಂಟೆಗೆ ದಾವಣಗೆರೆ ನಗರದ ಹಿಂದೂ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.

**ಇಂತಿ ದುಃಖತಪ್ತರು : ಶ್ರೀಮತಿ ನಿರ್ಮಲ ಮೇಡ್ಲೇರಿ ಮತ್ತು ಮಕ್ಕಳು ಹಾಗೂ ಬಂಧು-ಮಿತ್ರರು.**
**ಮೊ. : ಕಿರಣ್ - 9448846586, ಪ್ರೀತಮ್ - 9538461819**

# ಜೆಡಿಎಸ್ ಸದಸ್ಯರ ಸೆಳೆಯಲು ಯತ್ನ

ಬೆಂಗಳೂರು, ಜ. 5 - ಗ್ರಾಮ ಪಂಚಾಯಿತಿ ಚುನಾವಣೆ ನಂತರ ರಾಷ್ಟ್ರೀಯ ಪಕ್ಷಗಳಿಂದ ಜೆಡಿಎಸ್ ಬೆಂಬಲಿತ ಸದಸ್ಯರನ್ನು ಸೆಳೆಯುವ ಪ್ರಯತ್ನ ನಡೆಯುತ್ತಿವೆ ಎಂದು ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ ದೂರಿದ್ದಾರೆ.

ಈ ಸಂಬಂಧ ಸರಣಿ ಟ್ವೀಟ್ ಮಾಡಿರುವ ಅವರು, ಇಂತಹ ಪ್ರಯತ್ನಗಳಿಗೆ ನಮ್ಮವರು ತಿರುಗೇಟು ನೀಡುತ್ತಿದ್ದಾರೆ. ಆದರೆ, ಅತಿ ಹೆಚ್ಚು ಸ್ಥಾನ ಗಳಿಸಿದೆವು ಎಂದು ಹೇಳಿಕೊಳ್ಳುವ ರಾಷ್ಟ್ರೀಯ ಪಕ್ಷಗಳಿಗೆ ಯಾಕೆ ಇಂಥ ಗತಿ? ಎಂದು ಪ್ರಶ್ನಿಸಿದ್ದಾರೆ. ರಾಷ್ಟ್ರೀಯ ಪಕ್ಷಗಳು ಜೆಡಿಎಸ್ ಬೆಂಬಲಿತ ಗ್ರಾಮ ಪಂಚಾಯಿತಿ ಸದಸ್ಯರ ಕಾಲುಗಳನ್ನು ಹಿಡಿಯುತ್ತಿವೆ, ಅವರ ಮನೆ ಬಾಗಿಲಿಗೆ ಅಲೆಯುತ್ತಿವೆ ಎಂದರೆ, ಕನ್ನಡಿಗರು ಜೆಡಿಎಸ್‌ಗೆ ಎಷ್ಟು ಬಲ ತುಂಬಿದ್ದಾರೆ ಎಂಬುದು ಯಾರಿಗಾದರೂ ಗೊತ್ತಾಗುವ ವಿಚಾರ. ರಾಷ್ಟ್ರೀಯ ಪಕ್ಷಗಳು ನಮ್ಮ ಮುಖಂಡರ ಕಾಲು ಹಿಡಿಯುವುದನ್ನು ನಿಲ್ಲಿಸಿ, ಮರ್ಯಾದೆ ಉಳಿಸಿಕೊಳ್ಳಬೇಕು ಎಂದಿದ್ದಾರೆ.

### ಕುಮಾರ ಸ್ವಾಮಿ ದೂರು

# ಲಾರಿ ಹರಿದು ದ್ವಿಚಕ್ರ ಸವಾರ ಸ್ಥಳದಲ್ಲೇ ಸಾವು



ದಾವಣಗೆರೆ, ಜ.5- ಸಿಗ್ನಲ್ ದಾಟು ತ್ತಿದ್ದ ವೇಳೆ ಲಾರಿ ಹರಿದ ಪರಿಣಾಮ ದ್ವಿಚಕ್ರ ವಾಹನ ಸವಾರ ನೋರ್ವ ಸ್ಥಳದಲ್ಲೇ ಧಾರುಣವಾಗಿ ಸಾವಿಗೀಡಾಗಿರುವ ಘಟನೆ ನಗರದ ಬಿಎಸ್ ಎನ್ ಎಲ್ ಕಚೇರಿ ಸಮೀಪದ ಕ್ರಾಂತಿ ವೀರ ಸಂಗೊಳ್ಳಿ ರಾಯಣ್ಣ ವೃತ್ತದಲ್ಲಿಂದು ಸಂಜೆ ಸಂಭವಿಸಿದೆ.

ನಗರದ ಶಿವಕುಮಾರ ಸ್ವಾಮಿ ಬಡಾವಣೆಯ ಈರಣ್ಣ (67) ಮೃತಪಟ್ಟ ದುರ್ದೈವಿ. ವೃತ್ತದಲ್ಲಿ ಸಿಗ್ನಲ್ ದಾಟುವ ವೇಳೆ ಚಾಲಕನು ಲಾರಿಯನ್ನು ಅತೀ ವೇಗ, ಅಜಾಗ ರೂಕತೆಯಿಂದ ಚಾಲನೆ ಮಾಡುತ್ತಾ ನುಗ್ಗಿದ ಪರಿಣಾಮ ದ್ವಿಚಕ್ರ ವಾಹನಕ್ಕೆ ಡಿಕ್ಕಿಯಾಗಿದ್ದು, ನಂತರ ಕೆಳಗೆ ಬಿದ್ದ ದ್ವಿಚಕ್ರ ವಾಹನ ಸವಾರನ ತಲೆಯ ಮೇಲೆ ಹರಿದಿದೆ.

ಅಪಘಾತಕ್ಕೆ ಕಾರಣನಾದ ಲಾರಿ ಚಾಲಕ ಲಾರಿ ಸಹಿತ ಪರಾರಿಯಾಗಲು ಯತ್ನಿಸಿದ್ದು, ತಕ್ಷಣವೇ ಕಾರ್ಯಪ್ರವೃತ್ತರಾದ ವಿದ್ಯಾನಗರ ಪೊಲೀಸರು ಬೆನ್ನು ಹತ್ತಿ ಚಾಲಕನನ್ನು ಲಾರಿ ಸಮೇತ ಬಂಧಿಸಿದ್ದಾರೆ. ಮೃತ ವ್ಯಕ್ತಿ ಬಗ್ಗೆ ಪೊಲೀಸರು ಮಾಹಿತಿ ಕಲೆ ಹಾಕುತ್ತಿದ್ದು, ಈ ಸಂಬಂಧ ದಾವಣಗೆರೆ ದಕ್ಷಿಣ ಸಂಚಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

**ಹೃದಯವಂತಿಕೆ ತೋರಿದ ಮುಖ್ಯ ಪೇದೆ:** ಅಪಘಾತದಿಂದ ಸಾವನ್ನಪ್ಪಿದ ಸವಾರನ ಮೃತದೇಹ ಸಾಗಿಸಲು ಯಾರೂ ಮುಂದೆ ಬಾರದ ಕಾರಣ ರಸ್ತೆಯಲ್ಲೇ ಹಾಗೆ ಬಿದ್ದಿತ್ತು. ಈ ವೇಳೆ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಕರ್ತವ್ಯ ಮುಗಿಸಿ ಅದೇ ದಾರಿಯಲ್ಲಿ ಸಾಗುತ್ತಿದ್ದ ಡಿಆರ್ ನ ಹೆಡ್ ಕಾನ್ಸ್ ಟೇಬಲ್ ದುಗ್ಗೇಶ್ ಅವರು ಮೃತದೇಹವನ್ನು ರಸ್ತೆ ಮೇಲಿಂದ ಎತ್ತಿ ಸಾಗಿಸಲು ಮುಂದಾದ ನಂತರ ಅಂಬುಲೆನ್ಸ್ ನ ಓರ್ವ ಮತ್ತು ಕೆಲ ಸಾರ್ವಜನಿಕರು ಸಹ ಸಹಕಾರ ನೀಡಿದ್ದಾರೆ.

# ನೈರುತ್ಯ ರೈಲ್ವೆ : ಹರಿಹರ - ದೇವರಗುಡ್ಡ ನಿಲ್ದಾಣಗಳ ನಡುವೆ ಜೋಡಿ ಹಳಿ ಅನುಷ್ಠಾನ

ದಾವಣಗೆರೆ, ಜ.5- ನೈರುತ್ಯ ರೈಲ್ವೆಯ ಮೈಸೂರು ವಿಭಾಗದ ಹರಿಹರ-ದೇವರಗುಡ್ಡ ನಿಲ್ದಾಣಗಳ ನಡುವೆ (31 ಕಿ.ಮೀ) ಹೊಸದಾಗಿ ನಿರ್ಮಿಸಲಾದ ಜೋಡಿ ಹಳಿ ಮಾರ್ಗವನ್ನು ನಿನ್ನೆ ಅನುಷ್ಠಾನಗೊಳಿಸ ಲಾಯಿತು.

ಹರಿಹರ-ದೇವರಗುಡ್ಡ ನಿಲ್ದಾಣಗಳ ನಡುವಿನ ಈ ಜೋಡಿ ಹಳಿ ಮಾರ್ಗವು ಹುಬ್ಬಳ್ಳಿ ಮತ್ತು ಚಿಕ್ಕಜಾಜೂರು ನಡುವಿನ 190 ಕಿ.ಮೀ ದ್ವಿಪಥೀಕರಣದ ಭಾಗವಾಗಿದೆ. ಈ ವಿಭಾಗದಲ್ಲಿ ಇಲ್ಲಿಯವರೆಗೆ ಅಕ್ಟೋಬರ್ 2018 ರಲ್ಲಿ ಅನುಷ್ಠಾನಗೊಂಡ ಚಿಕ್ಕಜಾಜೂರು-ತೋಳಹುಣಸೆ ನಡುವೆ 37 ಕಿ.ಮೀ ಮತ್ತು ದಾವಣಗೆರೆ-ಹರಿಹರ ನಡುವೆ 2019 ರ ನವೆಂಬರ್‌ನಲ್ಲಿ ಕಾರ್ಯಾರಂಭ ಮಾಡಿದ 13 ಕಿ.ಮೀ ಸೇರಿದಂತೆ 81 ಕಿ.ಮೀ.ಗಳನ್ನು ಅನುಷ್ಠಾನಗೊಳಿಸಲಾಗಿದೆ.

ರೈಲ್ವೆ ಸುರಕ್ಷತೆ ಆಯುಕ್ತರು (ಸಿಆರ್‌ಎಸ್) ದಕ್ಷಿಣ ವೃತ್ತ, 23.12.2020 ಮತ್ತು 24.12. 2020 ರಂದು ಹರಿಹರ-ದೇವರಗುಡ್ಡ ನಿಲ್ದಾಣಗಳ ನಡುವೆ ಹೊಸದಾಗಿ ಹಾಕಿದ ಡಬಲ್ ಲೈನ್‌ನ ಶಾಸನಬದ್ಧ ಪರಿಶೀಲನೆಯನ್ನು ಪೂರ್ಣಗೊಳಿಸಿದ್ದಾರೆ. ಎಲ್ಲಾ ನಾನ್‌ಇಂಟರ್‌ಲಾಕಿಂಗ್ ಮತ್ತು ಇಂಟರ್‌ಲಾಕಿಂಗ್ ಕಾರ್ಯಗಳು ಪೂರ್ಣಗೊಂಡ ನಂತರ, ಹರಿಹರ-ದೇವರಗುಡ್ಡ ನಿಲ್ದಾಣದ ನಡುವೆ 02.01.2020 ರಿಂದ ಜೋಡಿ ಹಳಿ ಮಾರ್ಗವನ್ನು ಸಂಚಾರಕ್ಕೆ ತೆರೆಯಲಾಗಿದೆ.

ಸಿಆರ್‌ಎಸ್ ತಪಾಸಣೆ ಪೂರ್ಣಗೊಂಡ ನಂತರ 29.12.2020 ರಿಂದ ಇಂಟರ್ ಲಾಕಿಂಗ್ ಕೆಲಸಗಳು ಪ್ರಾರಂಭವಾಗಿ 02.01.2021 ರಂದು ಪೂರ್ಣಗೊಂಡಿವೆ. 2.2.2021 ರಂದು ಈ ವಿಭಾಗವು ಅನುಷ್ಠಾನವಾಗುವ ಮುನ್ನ ಈ ಕೆಳಗಿನ ಕಾರ್ಯಗಳು ಪೂರ್ಣಗೊಂಡಿವೆ.

ಕುಮಾರಪಟ್ಟಣ ಸೈಡಿಂಗ್ (9 ಮಾರ್ಗಗಳು) ನಲ್ಲಿ 29.12.2020 ರಂದು ಯಾರ್ಡ್ ಮರುನವೀಕರಣ ಮತ್ತು ವಿದ್ಯುನ್ಮಾನ ಅಂತರ್ಬಂಧ (ಎಲೆಕ್ಟ್ರಾನಿಕ್ ಇಂಟರ್‌ಲಾಕಿಂಗ್) ಬದಲಾವಣೆಯೊಂದಿಗೆ ಎರಡೂ ತುದಿಗಳಲ್ಲಿ ಜೋಡಿ ಹಳಿ ಅನುಷ್ಠಾನಗೊಳಿಸಲಾಯಿತು.

ಚಲಗೇರಿ (32 ಮಾರ್ಗಗಳು) ಯಲ್ಲಿ 30.12.2020 ರಂದು ಯಾರ್ಡ್ ಮರುನವೀಕರಣ ಮತ್ತು ವಿದ್ಯುನ್ಮಾನ ಅಂತರ್ಬಂಧ (ಎಲೆಕ್ಟ್ರಾನಿಕ್ ಇಂಟರ್‌ಲಾಕಿಂಗ್) ಬದಲಾವಣೆಯೊಂದಿಗೆ ಎರಡೂ ತುದಿಗಳಲ್ಲಿ ಜೋಡಿ ಹಳಿ ಕಾಮಗಾರಿ ಅನುಷ್ಠಾನಗೊಳಿಸಲಾಯಿತು.

ರಾಣೇಬೆನ್ನೂರು (34 ಮಾರ್ಗಗಳು) ನಲ್ಲಿ 31.12.2020 ರಂದು ಯಾರ್ಡ್ ಮರುನವೀಕರಣ ಮತ್ತು ವಿದ್ಯುನ್ಮಾನ ಅಂತರ್ಬಂಧ (ಎಲೆಕ್ಟ್ರಾನಿಕ್ ಇಂಟರ್‌ಲಾಕಿಂಗ್) ಬದಲಾವಣೆಯೊಂದಿಗೆ ಎರಡೂ ತುದಿಗಳಲ್ಲಿ ಜೋಡಿ ಹಳಿ ಕಾಮಗಾರಿ ಅನುಷ್ಠಾನಗೊಳಿಸಲಾಯಿತು.

ದೇವರಗುಡ್ಡ (32 ಮಾರ್ಗಗಳು) ದಲ್ಲಿ 01.01.2021 ರಂದು ಯಾರ್ಡ್ ಮರುನವೀಕರಣ ಮತ್ತು ವಿದ್ಯುನ್ಮಾನ ಅಂತರ್ಬಂಧ (ಎಲೆಕ್ಟ್ರಾನಿಕ್ ಇಂಟರ್‌ಲಾಕಿಂಗ್) ಬದಲಾವಣೆಯೊಂದಿಗೆ ಎರಡೂ ತುದಿಗಳಲ್ಲಿ ಜೋಡಿ ಹಳಿ ಕಾಮಗಾರಿ ಅನುಷ್ಠಾನಗೊಳಿಸಲಾಯಿತು.

ಹರಿಹರ (141 ಮಾರ್ಗಗಳು) ದಲ್ಲಿ 02.01.2021 ರಂದು 24 ಹೆಚ್ಚುವರಿ ಪಾಯಿಂಟ್‌ಗಳು (ಹಳಿ ತಿರುಗಣಿ) ಮತ್ತು 33 ಹೊಸ ಟ್ರ್ಯಾಕ್ ಸರ್ಕ್ಯೂಟ್‌ಗಳೊಂದಿಗೆ ಅಸ್ತಿತ್ವದಲ್ಲಿದ್ದ 5 ಹಳಿ ಸಾಲುಗಳನ್ನು 7 ಸಾಲುಗಳಾಗಿ ಪ್ರಮುಖ ಯಾರ್ಡ್ ಮರುನವೀಕರಣ ಮತ್ತು ವಿದ್ಯುನ್ಮಾನ ಅಂತರ್ಬಂಧ (ಎಲೆಕ್ಟ್ರಾನಿಕ್ ಇಂಟರ್‌ಲಾಕಿಂಗ್) ಬದಲಾವಣೆಯೊಂದಿಗೆ ಎರಡೂ ತುದಿಗಳಲ್ಲಿ ಜೋಡಿ ಹಳಿ ಕಾಮಗಾರಿ ಅನುಷ್ಠಾನಗೊಳಿಸಲಾಯಿತು.




**ಹರಿಹರ - ದೇವರಗುಡ್ಡ ವಿಭಾಗದ ಪ್ರಮುಖ ಲಕ್ಷಣಗಳು** : ಹರಿಹರ ಯಾರ್ಡಿನಲ್ಲಿ ಒಂದು ಹೆಚ್ಚುವರಿ ಚಾಲನಾ ಹಳಿ ಮತ್ತು ಒಂದು ಹೆಚ್ಚುವರಿ ಸ್ಥಿರ ಹಳಿ ಮತ್ತು ಎರಡು ಪೂರ್ಣ ಉದ್ದದ ಶಂಟಿಂಗ್ ನೆಕ್‌ಗಳನ್ನು ನಿರ್ಮಿಸಲಾಗಿದೆ. 2.5 ಕಿ.ಮೀ ಯಾರ್ಡ್ ಮರುನವೀಕರಣ ಮಾಡಲಾಗಿದೆ. ಒಟ್ಟು 46 ಪಾಯಿಂಟ್‌ಗಳನ್ನು ಅಳವಡಿಸಲಾಗಿದೆ. ಇದು ರೈಲುಗಳ ಸತತ ಸಂಚಾರದ ಪರಿಸ್ಥಿತಿಗಳಲ್ಲಿ ಮಹತ್ತರವಾದ ಕೆಲಸವಾಗಿತ್ತು.

ದೇವರಗುಡ್ಡದಲ್ಲಿ ಎರಡು ಹೆಚ್ಚುವರಿ ಚಾಲನಾ ಹಳಿಗಳನ್ನು ಸೇರಿಸಲಾಯಿತು. ಕುಮಾರಪಟ್ಟಣಂ, ಚಲಗೇರಿ ಮತ್ತು ರಾಣೇಬೆನ್ನೂರಿನಲ್ಲಿ ತಲಾ ಒಂದು ಹೆಚ್ಚುವರಿ ಹಳಿಯನ್ನು ನಿರ್ಮಿಸಲಾಯಿತು.

ಚಲಗೇರಿ ಯಾರ್ಡಿನಲ್ಲಿ 450 ಮೀ ಉದ್ದದ 2 ಹೊಸ ಹೈ ಲೆವೆಲ್ ಐಲ್ಯಾಂಡ್ ಪ್ಲಾಟ್‌ಫಾರಂಗಳು ಮತ್ತು ದೇವರಗುಡ್ಡ ಯಾರ್ಡಿನಲ್ಲಿ 540 ಮೀ ಉದ್ದದ ಹೈ ಲೆವೆಲ್ ಎಂಡ್ ಪ್ಲಾಟ್ ಫಾರಂ ನಿರ್ಮಿಸಲಾಗಿದೆ.

ಹರಿಹರದಲ್ಲಿ 170 ಮೀ ಉದ್ದದ ಎರಡು ಪ್ಲಾಟ್‌ಫಾರಂಗಳ ವಿಸ್ತರಣೆ, ಚಲಗೇರಿಯಲ್ಲಿ 120 ಮೀ ಉದ್ದದ ಒಂದು ಪ್ಲಾಟ್‌ಫಾರಂ, ಮತ್ತು ರಾಣೇಬೆನ್ನೂರಿನಲ್ಲಿ ತಲಾ 100 ಮೀ ಉದ್ದದ ಎರಡು ಪ್ಲಾಟ್‌ಫಾರಂಗಳನ್ನು ವಿಸ್ತರಿಸಲಾಗಿದೆ. ಟ್ರೋಲಿಗಳು / ಗಾಲಿ ಕುರ್ಚಿಗಳ ಚಲನೆಗಾಗಿ ಪ್ಲಾಟ್‌ಫಾರಂನ ಎರಡೂ ಬದಿಯಲ್ಲಿರುವ ಟ್ರಾಲಿ ಮಾರ್ಗವನ್ನು ಕಾಂಕ್ರೀಟ್‌ನಿಂದ ಸುಗಮಗೊಳಿಸಲಾಗಿದೆ.

ವಿಭಾಗದಲ್ಲಿ ROB / RUB ಕೆಲಸದ ನಿರ್ಮಾಣದ ನಂತರ ಲೆವೆಲ್ ಕ್ರಾಸಿಂಗ್ ಗೇಟ್‌ಗಳನ್ನು ಮುಚ್ಚಲಾಗಿದೆ.

ಆರ್‌ಒಬಿ ನಿರ್ಮಿಸಿ, ಲೆವೆಲ್ ಕ್ರಾಸಿಂಗ್ ಗೇಟ್ -208 ಮತ್ತು 213 ಮುಚ್ಚಲಾಗಿದೆ.

ಆರ್‌ಯುಬಿ ನಿರ್ಮಾಣದಿಂದ ಲೆವೆಲ್ ಕ್ರಾಸಿಂಗ್ ಗೇಟ್ -219 ಮತ್ತು 221 ಮುಚ್ಚಲಾಗಿದೆ.

ಹಳಿ ದ್ವಿಗುಣಗೊಳಿಸುವ ಭಾಗವಾಗಿ ಸಾರ್ವಜನಿಕ ಬೇಡಿಕೆಗೆ ಅನುಗುಣವಾಗಿ ಲೆವೆಲ್ ಕ್ರಾಸಿಂಗ್ ಗೇಟ್ 77 ಮತ್ತು 82 ರಲ್ಲಿ ಎರಡು ಹೊಸ ಆರ್‌ಯುಬಿಗಳನ್ನು ಸಹ ನಿರ್ಮಿಸಲಾಗಿದೆ.

ಯೋಜನೆಯ ಒಟ್ಟು ವೆಚ್ಚ ರೂ. 298 ಕೋಟಿ.

ತುಂಗಭದ್ರಾ ನದಿಯಲ್ಲಿ ನಿರ್ಮಿಸಲಾದ 16 ಸ್ಪ್ಯಾನ್‌ನ ಒಂದು ಪ್ರಮುಖ ಸೇತುವೆ.

ವಿಭಾಗದ ಜೋಡಿ ಹಳಿ ಕೆಲಸವನ್ನು ಮುಖ್ಯ ಆಡಳಿತಾಧಿ ಕಾರಿ / ಸಿಎನ್ ಮುಖ್ಯ ಆಡಳಿತಾಧಿಕಾರಿ (ನಿರ್ಮಾಣ) ಕೆ.ಸಿ. ಸ್ವಾಮಿ ಇವರು ಯೋಜಿಸಿದ್ದರು. ಈ ಯೋಜನೆಯನ್ನು ಮುಖ್ಯ ಅಭಿಯಂತರ (ನಿರ್ಮಾಣ / ಉತ್ತರ) ನಾರಾಯಣ್ ರಾವ್ ಮತ್ತು ಮುಖ್ಯ ಸಂಕೇತ ಮತ್ತು ದೂರ ಸಂಪರ್ಕ ಅಭಿಯಂತರ (ನಿರ್ಮಾಣ) ಶಾಂತಿರಾಮ್ ಮತ್ತು ನಿರ್ಮಾಣ ಸಂಸ್ಥೆಯ ಇತರೆ ಅಧಿಕಾರಿಗಳು ದಕ್ಷವಾಗಿ ಕಾರ್ಯಗತಗೊಳಿಸಿದರು.

ಮೈಸೂರು ವಿಭಾಗದ ವಿಭಾಗೀಯ ರೈಲ್ವೆ ವ್ಯವಸ್ಥಾಪಕ ರಾಹುಲ್ ಅಗರ್‌ವಾಲ್, ಮೈಸೂರು ವಿಭಾಗದ ಅಧಿಕಾರಿಗಳು ಮತ್ತು ಸಿಬ್ಬಂದಿಯೊಂದಿಗೆ ಇಂಟರ್‌ಲಾಕ್ ಮಾಡುವ ಕಾರ್ಯವನ್ನು ಮೇಲ್ವಿಚಾರಣೆ ಮಾಡಿದರು.

ನೈರುತ್ಯ ರೈಲ್ವೆ ಪ್ರಧಾನ ವ್ಯವಸ್ಥಾಪಕ ಅಜಯ್ ಕುಮಾರ್ ಸಿಂಗ್ ಈ ಕಾರ್ಯವನ್ನು ಶ್ಲಾಘಿಸಿದ್ದು, ಇದು ಚಲನಶೀಲತೆ ಯನ್ನು ಹೆಚ್ಚು ಸುಧಾರಿಸುತ್ತದೆ. ವೇಗದ ರೈಲುಗಳನ್ನು ಓಡಿಸಲು ವಲಯವನ್ನು ಶಕ್ತಗೊಳಿಸಲು ಈ ದ್ವಿಪಥಗೊಳಿಸುವಿಕೆಯೊಂದಿಗೆ ಮೂಲಸೌಕರ್ಯ ಅಭಿವೃದ್ಧಿಗೆ ಹೆಚ್ಚಿನ ಒತ್ತು ನೀಡಲಾಯಿತು. ಉಳಿದ ವಿಭಾಗದ ಕಾರ್ಯಗಳು ಭರದಿಂದ ಸಾಗುತ್ತಿದ್ದು, ಮುಂದಿನ ವರ್ಷದಲ್ಲಿ ಕಾರ್ಯಾರಂಭ ಮಾಡುವ ಗುರಿ ಹೊಂದಿದೆ ಎಂದು ಸಿಂಗ್ ಮಾಹಿತಿ ನೀಡಿದರು.

ಸಾರ್ವಜನಿಕ ಬೇಡಿಕೆ ಮತ್ತು ಚುನಾಯಿತ ಪ್ರತಿನಿಧಿಗಳ ಮನವಿಗೆ ಸ್ಪಂದಿಸಿ, 2 ರಸ್ತೆ ಮೇಲ್ಸೇತುವೆ ಮತ್ತು 2 ರಸ್ತೆ ಕೆಳಸೇತುವೆಗಳನ್ನು ಈ ವಿಭಾಗದಲ್ಲಿ ನಿರ್ಮಿಸಲಾಗಿದ್ದು, ಇದು ರಸ್ತೆ ಬಳಕೆದಾರರಿಗೆ ಅನುಕೂಲವಾಗಲಿದೆ ಮತ್ತು ಸುರಕ್ಷತೆಯನ್ನು ಹೆಚ್ಚಿಸುತ್ತದೆ.

## ಜೋಯಿಸರಹರಳಹಳ್ಳಿಯಲ್ಲಿ ದೇವಸ್ಥಾನಕ್ಕೆ ಕಳಸಾರೋಹಣ



ರಾಣೇಬೆನ್ನೂರು, ಜ.5- ತಾಲ್ಲೂಕಿನ ಜೋಯಿಸರ ಹರಳಹಳ್ಳಿ ಗ್ರಾಮದ ಶ್ರೀ ಗುರುಶಾಂತೇಶ್ವರ ಹಾಗೂ ಶ್ರೀ ಮಳಿಶಾಂತೇಶ್ವರ ಸ್ವಾಮಿಗಳ ದೇವಸ್ಥಾನದ ಕಳಸಾರೋಹಣ ಸಮಾರಂಭ ನಿನ್ನೆ ಹಾವೇರಿಯ ಹುಕ್ಕೇರಿ ಮಠದ ಸದಾಶಿವ ಮಹಾಸ್ವಾಮಿಗಳ ಸಾನಿಧ್ಯದಲ್ಲಿ ಜರುಗಿತು. ಗ್ರಾಮದ ಭಕ್ತರನ್ನುದ್ದೇಶಿಸಿ ಮಾತನಾಡಿದ ಶ್ರೀಗಳು ಜಗತ್ತಿನಾದ್ಯಂತ ಜನ ಕೊರೊನಾ ಪಿಡುಗಿನಿಂದ ಸಂಕಷ್ಟದಲ್ಲಿದ್ದಾರೆ. ಈ ಸಮಯದಲ್ಲಿ ಲಕ್ಷಾಂತರ ದುಡ್ಡು ಖರ್ಚು ಮಾಡಿ ಇಂತಹ ಧಾರ್ಮಿಕ ಕಾರ್ಯಕ್ರಮ ಮಾಡಿರುವುದು ರೋಗದ ವಿರುದ್ಧ ಹೋರಾಟ ನಡೆಸಿದ ಭಾವನೆಯಾಗಿದೆ ಎಂದು ನುಡಿದರು.

ಧಾರ್ಮಿಕ ಸಭೆ, ಸಮಾರಂಭಗಳ ಮೂಲಕ ಈ ಗ್ರಾಮದ ಜನತೆ ಶಾಂತಿ, ನೆಮ್ಮದಿಯ ಬದುಕು ಕಟ್ಟಿಕೊಳ್ಳುವರು ಎಂದು ರಟ್ಟಿಹಳ್ಳಿ ಕಬ್ಬಿಣ ಕಂತಿಮಠದ ಶ್ರೀ ಶಿವಲಿಂಗ ಮಹಾಸ್ವಾಮೀಜಿ ಉಪದೇಶಿಸಿದರು.

ಅಕ್ಕಿಆಲೂರಿನ ಶ್ರೀ ಮಲ್ಲಿಕಾರ್ಜುನ ಸ್ವಾಮಿಗಳು ಉಪದೇಶಾಮೃತ ನೀಡಿದರು. ಹುಬ್ಬಳ್ಳಿ ವಾಣಿಜ್ಯೋದ್ಯಮ ಸಂಸ್ಥೆ ಉಪಾಧ್ಯಕ್ಷ ಜಿ.ಜಿ. ಹೊಟ್ಟಿಗೌಡ್ರ, ಆರ್. ಪಿ. ಹೊಟ್ಟಿಗೌಡ್ರ, ಸೋಮಶೇಖರ ಸಾರದ, ಶಿವಕುಮಾರ ಮುದ್ದಪ್ಪಳರ ಇನ್ನಿತರರು ಪಾಲ್ಗೊಂಡಿದ್ದರು.

## ಸಿಎಂ ವಿರುದ್ಧ ಎತ್ತಿ ಕಟ್ಟುತ್ತಿರುವ ಸಚಿವರು

### ಬಿಎಸ್‌ವೈ ಎದುರು ಶಾಸಕರ ದೂರು

ಬೆಂಗಳೂರು, ಜ.5 - ಮುಖ್ಯಮಂತ್ರಿ ಬಿ. ಎಸ್.ಯಡಿಯೂರಪ್ಪ ನಾಯಕತ್ವದ ವಿರುದ್ಧ ಸಂಪುಟದಲ್ಲಿನ ಕೆಲವು ಸಹೋದ್ಯೋಗಿಗಳೇ ಪಕ್ಷದ ಶಾಸಕರನ್ನು ಎತ್ತಿಕಟ್ಟುತ್ತಿದ್ದಾರೆ ಎಂದು ಶಾಸಕರು ದೂರಿದ್ದಾರೆ.

ಎರಡನೇ ದಿನದ ಬಿಜೆಪಿ ಶಾಸಕರೊಂದಿಗಿನ ಸಭೆಯಲ್ಲಿ ಈ ಗಂಭೀರ ವಿಚಾರ ವ್ಯಕ್ತವಾಗಿದೆ.

ಹಳೇ ಮೈಸೂರು, ಮಧ್ಯ ಕರ್ನಾಟಕ, ಮಲೆನಾಡು ಮತ್ತು ಕರಾವಳಿಯ ಕೆಲವು ಶಾಸಕರೊಂದಿಗೆ ಯಡಿಯೂರಪ್ಪ ನಡೆಸಿದ ಸಮಾಲೋಚನೆ ವೇಳೆ ಕೆಲವು ಶಾಸಕರು ತಮ್ಮ ಅಳಲು ತೋಡಿಕೊಂಡರು.

ಕೆಲವು ಸಚಿವರು ನಿಮ್ಮ ವಿರುದ್ಧವೇ ಕಾರಸ್ಥಾನ ನಡೆಸುತ್ತಿದ್ದಾರೆ, ಇವರಿಗೆ ಪಕ್ಷ ಮತ್ತು ಸರ್ಕಾರದ ಬಗ್ಗೆ ಎಳ್ಳಷ್ಟೂ ಕಾಳಜಿ ಇಲ್ಲವಾಗಿದೆ. ಕೆಲವು ಸಚಿವರಂತೂ ನಿಮ್ಮ ಆಡಳಿತಾವಧಿ ಮುಗಿದ ನಂತರ ಯಾವ ಸರ್ಕಾರ ಬರುತ್ತದೆ, ಯಾರ ಜೊತೆ ಹೋಗಬೇಕೆಂಬ ಆಲೋಚನೆಯಲ್ಲೇ ನಿರತರಾಗಿದ್ದಾರೆ ಎಂದು ಹೇಳಿದ್ದಾರೆ.

ಜೊತೆಗೆ ಮುಖ್ಯಮಂತ್ರಿ ಹುದ್ದೆ ಮೇಲೆ ಕಣ್ಣಿಟ್ಟಿರುವವರೂ ನಿಮ್ಮ ವಿರುದ್ಧ ತೆರೆಮರೆಯಲ್ಲಿ ಕತ್ತಿ ಮಸೆಯುತ್ತಿದ್ದಾರೆ. ಇವರುಗಳಿಗೆ ಪೂರ್ಣ ಅಧಿಕಾರ ನೀಡಿದ್ದೇ ಇಷ್ಟೆಲ್ಲಾ ಅನಾಹುತಗಳಿಗೆ ಕಾರಣವಾಗಿದೆ.

ಈ ಸಚಿವರುಗಳು ನಮ್ಮ ಬೇಡಿಕೆಗಳಿಗೆ ಸ್ಪಂದಿಸುತ್ತಿಲ್ಲ, ಕ್ಷೇತ್ರದಲ್ಲಿನ ಅಭಿವೃದ್ಧಿ ಕಾರ್ಯಗಳಿಗೆ ಹಣ ನೀಡುತ್ತಿಲ್ಲ ಎಂದು ದೂರಿದ್ದಾರೆ.

ವಿಧಾನಸೌಧದಲ್ಲಿ ಕುಳಿತು ಈ ಸಚಿವರು ನಾಯಕತ್ವದ ವಿರುದ್ಧ ಮಸಲತ್ತು ನಡೆಸಿದ್ದು, ಇವರನ್ನು ಮಟ್ಟ ಹಾಕದಿದ್ದರೆ, ಮುಂದೆ ಸರ್ಕಾರಕ್ಕೆ ಮತ್ತು ಪಕ್ಷಕ್ಕೆ ತೊಂದರೆ ಎದುರಾಗಲಿದೆ ಎಂದು ಹೇಳಿದ್ದಾರೆ.

ಮುಖ್ಯಮಂತ್ರಿ ಅವರ ಕುಟುಂಬ ಸದಸ್ಯರು ಆಡಳಿತದಲ್ಲಿ ಹಸ್ತಕ್ಷೇಪ ನಡೆಸುತ್ತಿದ್ದಾರೆ ಎಂಬ ಅಪಪ್ರಚಾರವನ್ನೂ ಈ ಸಚಿವರು ಮಾಡುತ್ತಿದ್ದಾರೆ.

ನೀವು ಆರಂಭದಲ್ಲಿಯೇ ಈ ಸಚಿವರುಗಳ ವಿರುದ್ಧ ಕ್ರಮ ಕೈಗೊಂಡಿದ್ದರೆ, ಇಂತಹ ಪರಿಸ್ಥಿತಿ ಬರುತ್ತಿರಲಿಲ್ಲ. ಈಗಲಾದರೂ ಕ್ರಮ ಕೈಗೊಳ್ಳಿ ಎಂದು ಆಗ್ರಹಿಸಿದ್ದಾರೆ.

ರಾಜ್ಯದ ಕೆಲವು ಭಾಗಗಳಲ್ಲಿ ಈಗಾಗಲೇ ಕುಡಿಯುವ ನೀರಿಗೆ ತೊಂದರೆ ಎದುರಾಗಿದೆ, ಜೊತೆಗೆ ಇತರೆ ಆಡಳಿತ ಸಮಸ್ಯೆಗಳೂ ಕಾಣಿಸಿಕೊಂಡಿವೆ, ಇವಾವುದಕ್ಕೂ ನಿಮ್ಮ ವಿರೋಧಿ ಸಚಿವರು ಗಮನ ಹರಿಸದೆ ಸರ್ಕಾರಕ್ಕೆ ಕೆಟ್ಟ ಹೆಸರು ತರುವ ಕಾರ್ಯದಲ್ಲಿ ನಿರತರಾಗಿದ್ದಾರೆ ಎಂದು ಆರೋಪಗಳ ಸುರಿಮಳೆಯನ್ನೇ ಮಾಡಿದರು.

ಈ ಸಚಿವರುಗಳ ಇಲಾಖಾ ಕಾರ್ಯ ಪ್ರಗತಿ ಪರಿಶೀಲನೆ ಮಾಡಬೇಕು, ಇವರನ್ನು ನಿಯಂತ್ರಣದಲ್ಲಿ ಇಟ್ಟುಕೊಳ್ಳಬೇಕು. ಕೆಲವರನ್ನು ಸಚಿವ ಸ್ಥಾನದಿಂದ ವಜಾ ಮಾಡಬೇಕು ಎಂದು ಆಗ್ರಹಿಸಿದ್ದಾರೆ.

ಕೋವಿಡ್ ಪರಿಸ್ಥಿತಿಯ ಅರಿವು ನಮಗೂ ಇದೆ, ಈ ಸಂದರ್ಭದಲ್ಲಿ ಹಣವನ್ನು ಅಗತ್ಯಕ್ಕೆ ತಕ್ಕಂತೆ ಸದ್ಬಳಕೆ ಮಾಡಬೇಕು ಎಂದು ಒತ್ತಾಯಿಸಿದರು. ಎಲ್ಲವನ್ನೂ ಸಮಾಧಾನದಿಂದ ಆಲಿಸಿದ ಮುಖ್ಯಮಂತ್ರಿ ಯಡಿಯೂರಪ್ಪ, ಎಲ್ಲ ವಿಚಾರವೂ ತಮಗೆ ತಿಳಿದಿದೆ, ಸಚಿವರ ವಿರುದ್ಧ ತಕ್ಷಣಕ್ಕೆ ಕ್ರಮ ಕೈಗೊಳ್ಳಲು ಸಾಧ್ಯವಿಲ್ಲ. ನಿಮಗೆ ಆಗಿರುವ ತೊಂದರೆ ಎಲ್ಲವನ್ನೂ ಪರಿಹರಿಸುತ್ತೇನೆ, ನೀವು ಸರ್ಕಾರ ಮತ್ತು ಪಕ್ಷದ ವಿರುದ್ಧ ಹೇಳಿಕೆಗಳನ್ನು ಸಾರ್ವಜನಿಕವಾಗಿ ನೀಡಬೇಡಿ.

ನಿಮ್ಮ ಕ್ಷೇತ್ರಗಳ ಅಭಿವೃದ್ಧಿ ಜವಾಬ್ದಾರಿ ನನ್ನದು, ಸಂಪನ್ಮೂಲ ಕ್ರೋಢೀಕರಣದ ಆಧಾರದ ಮೇಲೆ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳುತ್ತೇನೆ ಎಂದು ಹೇಳುವ ಮೂಲಕ ಸಮಾಧಾನ ಪಡಿಸಿದ್ದಾರೆ.

## ಅಂಗವಿಕಲರ ಗುರುತಿನ ಚೀಟಿ ನೋಂದಣಿ ಅಭಿಯಾನ



ದಾವಣಗೆರೆ, ಜ.5- ಪರಿಷ್ಕೃತ ಅಂಗವಿಕಲರ ಕಾಯ್ದೆ 2016 ಅಡಿಯಲ್ಲಿ ಹಿಮೋಫಿಲಿಯಾ ರಕ್ತಸ್ರಾವ ರೋಗವು ಸೇರಿಸಿದ ನಂತರ ವಿಶಿಷ್ಟ ಅಂಗವಿಕಲರ ಗುರುತಿನ ಚೀಟಿ ನೋಂದಣಿ ಅಭಿಯಾನವನ್ನು ಇತ್ತೀಚೆಗೆ ಹಮ್ಮಿಕೊಳ್ಳಲಾಗಿತ್ತು.

ಕರ್ನಾಟಕ ಹಿಮೋಫಿಲಿಯಾ ಸೊಸೈಟಿ, ಜಿಲ್ಲಾ ಆಸ್ಪತ್ರೆ ಹಾಗೂ ಜಿಲ್ಲಾ ಅಂಗವಿಕಲರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಸಹಯೋಗದಲ್ಲಿ ಅಭಿಯಾನವನ್ನು ಹಮ್ಮಿಕೊಳ್ಳಲಾಗಿತ್ತು.

ಕಾರ್ಯಕ್ರಮವನ್ನು ಜಿಲ್ಲಾಸ್ಪತ್ರೆ ಅಧೀಕ್ಷಕ ಡಾ. ಜಯಪ್ರಕಾಶ್ ಉದ್ಘಾಟಿಸಿ, ಹಿಮೋಫಿಲಿಯಾ ರೋಗಿಗಳ ಕ್ಷೇಮಾಭಿವೃದ್ಧಿಗಾಗಿ ಶ್ರಮಿಸುತ್ತಿರುವ ಕರ್ನಾಟಕ ಹಿಮೋಫಿಲಿಯಾ ಸೊಸೈಟಿ ಕಾರ್ಯಕ್ರಮವನ್ನು ಅಭಿನಂದಿಸಿದರು. ಜಜಮು ವೈದ್ಯಕೀಯ ಮಹಾವಿದ್ಯಾಲಯದ ಪೆಥಾಲಜಿ ವಿಭಾಗದ ಪ್ರಾಧ್ಯಾಪಕರು ಹಾಗೂ ಸೊಸೈಟಿ ಅಧ್ಯಕ್ಷರು, ರಾಜ್ಯ ಅಂಗವಿಕಲರ ಆಯುಕ್ತರಿಗೆ ಸಲಹೆಗಾರರೂ ಆದ ಡಾ. ಸುರೇಶ ಹನಗವಾಡಿ ಅವರು ಸ್ವಾಗತಿಸಿದರು.

ಅಂಗವಿಕಲರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಕಲ್ಯಾಣಾಧಿಕಾರಿ ಶಶಿಧರ್ ಮಾತನಾಡಿ, ಸರ್ಕಾರದ ಸೌಲಭ್ಯಗಳ ಮಾಹಿತಿ ನೀಡಿದರು. ಜಿಲ್ಲಾಧೀಕ್ಷಕ ಡಾ. ಜಯಪ್ರಕಾಶ್, ನಿವಾಸಿ ವೈದ್ಯರಾದ ಡಾ. ಮಂಜುನಾಥ್ ವೈ. ಪಾಟೀಲ್ ಸಹಕಾರದಲ್ಲಿ ವೈದ್ಯರುಗಳಾದ ಡಾ. ನಂದಕುಮಾರ್, ಕೀಲು ಮೂಳೆ ತಜ್ಞ ಡಾ. ಲೋಹಿತ್, ಮಕ್ಕಳ ತಜ್ಞ ಡಾ. ಹೇಮಂತ್, ಹಿಮೋಫಿಲಿಯಾ ಬಾಧಿತರನ್ನು ತಪಾಸಣೆ ಮಾಡಿ ನೋಂದಾಯಿಸಿದರು. ದುರ್ಗೇಶ್ ಹಾಗೂ ಬಸವರಾಜ್ ನೋಂದಣಿ ಕಾರ್ಯ ನಿರ್ವಹಿಸಿದರು.

ಸಂಸ್ಥೆಯ ಮಹಿಳಾ ವಿಭಾಗದ ಅಧ್ಯಕ್ಷೆ ಡಾ. ಮೀರಾ ಹನಗವಾಡಿ ಕೃತಜ್ಞತೆ ಸಲ್ಲಿಸಿದರು. ಸಂಸ್ಥೆಯ ಕಾರ್ಯನಿರ್ವಾಹಕ ಅಧಿಕಾರಿ ನವೀನ್ ಹವಳಿ, ವ್ಯವಸ್ಥಾಪಕ ಮಹಂತೇಶ್ ನಾಯಕ್, ಲ್ಯಾಬೋರೇಟರಿ ತಂತ್ರಜ್ಞ ಕೆ. ಮಂಜುನಾಥ್, ಹಿಮೋಫಿಲಿಯಾ ಬಾಧಿತ ಯುವಕರಾದ ದರ್ಶನ್, ಮೈನುದ್ದೀನ್, ಮುರಳಿ ಇನ್ನಿತರರಿದ್ದರು.

## ಅಸಮಾನತೆ ನಿಂತ ನೀರು, ಸಮಾನತೆ ಹರಿಯುವ ನೀರು

### ವಿರಕ್ತ ಮಠದ ಶ್ರೀ ಬಸವಪ್ರಭು ಸ್ವಾಮೀಜಿ ವಿಶ್ಲೇಷಣೆ

ದಾವಣಗೆರೆ, ಜ. 5 - ಅಸಮಾನತೆ ನಿಂತ ನೀರು. ಆದರೆ, ಸಮಾನತೆ ಹರಿಯುವ ನೀರು ಎಂದು ವಿರಕ್ತ ಮಠದ ಶ್ರೀ ಬಸವಪ್ರಭು ಸ್ವಾಮೀಜಿ ವಿಶ್ಲೇಷಿಸಿದರು.

ನಗರದ ಶ್ರೀ ಶಿವಯೋಗ ಮಂದಿರದಲ್ಲಿ ಶ್ರೀ ಜಗದ್ಗುರು ಮುರುಘರಾಜೇಂದ್ರ ಶಿವಯೋಗಾಶ್ರಮ ಟ್ರಸ್ಟ್ ವತಿಯಿಂದ ಮೊನ್ನೆ ಏರ್ಪಡಿಸಿದ್ದ ಶರಣ ಸಂಗಮ ಕಾರ್ಯಕ್ರಮದ ಸಮ್ಮುಖ ವಹಿಸಿ ಶ್ರೀಗಳು ಆಶೀರ್ವಚನ ನೀಡಿದರು. ನಿಂತ ನೀರು ಕೊಳಚೆಯಾಗಿರುತ್ತದೆ, ಹರಿಯುವ ನೀರು ಶುಭ್ರವಾಗಿರುತ್ತದೆ ಎಂದು ತಿಳಿಸಿದರು.

ಶರಣ ಸಂಗಮ ಒಂದು ಅಧ್ಯಾತ್ಮಿಕ ತರಬೇತಿ ಕೇಂದ್ರವಿದ್ದಂತೆ ಎಂದು ಹೋಲಿಕೆ ನೀಡಿದರು. ಕೊಳೆಯಾದ ಬಟ್ಟೆಗಳನ್ನು ಸೋಪಿನಿಂದ ಶುಭ್ರಗೊಳಿಸಬಹುದು. ಆದರೆ, ಮನಸ್ಸಿನ ಕೊಳೆಯನ್ನು ಇಂತಹ ಶರಣ ಸಂಗಮಗಳಿಂದ ತೊಳೆಯಬಹುದು ಎಂದು ಹೇಳಿದರು.




ಮಡಿವಂತಿಕೆ ಮತ್ತು ಅದರಿಂದಾಗುವ ಅಸಮಾನತೆ ಕುರಿತು ದಾವಣಗೆರೆ ವಿ.ವಿ. ಕನ್ನಡ ಅಧ್ಯಯನ ಕೇಂದ್ರದ ಸಹ ಪ್ರಾಧ್ಯಾಪಕ ಡಾ. ಹೆಚ್. ವಿಶ್ವನಾಥ್ ಅವರು ಮಾತನಾಡಿದರು.

ಮಡಿವಂತಿಕೆ, ಮೌಢ್ಯದ ವಿರುದ್ಧ ಬಸವಾದಿ ಶರಣರು ಸಮರ ಸಾರಿದರು. ಶರಣರ ವಚನಗಳನ್ನು ನಾವು ಅಳವಡಿಸಿಕೊಂಡಾಗ ಮಾತ್ರ ಮೌಢ್ಯ, ಅಸಮಾನತೆಯನ್ನು ಹೋಗಲಾಡಿಸಲು ಸಾಧ್ಯ ಎಂದು ಪ್ರತಿಪಾದಿಸಿದರು .

ಜಿಲ್ಲಾ ಪಂಚಾಯತ್ ಅಧ್ಯಕ್ಷರಾದ ಶ್ರೀಮತಿ ಶಾಂತಕುಮಾರಿ ಅವರು, ಅಸಮಾನತೆ ಇರುವ ತನಕ ನವ ಸಮಾಜ ಕಟ್ಟಲು ಸಾಧ್ಯವಿಲ್ಲ.

ಬಸವಣ್ಣ, ಅಂಬೇಡ್ಕರ್ ಮುಂತಾದವರು ಅಸಮಾನತೆ ವಿರುದ್ಧ ಹೋರಾಡಿದಂತೆ ನಾವೂ ಹೋರಾಟ ನಡೆಸಬೇಕೆಂದು ಆಶಿಸಿದರು.

ಬಸವ ಕಲಾ ಲೋಕದವರು ಪ್ರಾರ್ಥಿಸಿದರು. ಎಂ. ಕೆ. ಬಕ್ಕಪ್ಪ ಸ್ವಾಗತಿಸಿದರು. ಕಾರ್ಯಕ್ರಮವನ್ನು ಎನ್. ಜೆ. ಶಿವಕುಮಾರ್ ನಿರೂಪಿಸಿದರು. ಕುಂಟೋಜಿ ವಂದಿಸಿದರು.

## ವಜ್ರೇಶ್ವರಿ ಸಂಸ್ಥೆಯಿಂದ ಹೊಸ ವರ್ಷ, ಕ್ರಿಸ್‌ಮಸ್ ದಿನಾಚರಣೆ

ದಾವಣಗೆರೆ, ಜ.5- ನಗರದ ವಜ್ರೇಶ್ವರಿ ಮಹಿಳಾ ಸಂಸ್ಥೆಯಿಂದ ಹೊಸ ವರ್ಷದ ಆಚರಣೆ ಮತ್ತು ಕ್ರಿಸ್‌ಮಸ್ ದಿನಾಚರಣೆಯನ್ನು ನಗರದ ಎಂಸಿಸಿ 'ಎ' ಬ್ಲಾಕ್‌ನಲ್ಲಿರುವ ಚರ್ಚಿನಲ್ಲಿ ಆಚರಿಸಲಾಯಿತು. ಫಾದರ್ ಸ್ಟೀವನ್ ಪ್ರಾರ್ಥನೆ ಮಾಡುವ ಮೂಲಕ ಶುಭಾಶಯ ಕೋರಿದರು. ನಿರೂಪಣೆಯನ್ನು ಗೀತಾ ಪ್ರಭಾಕರ್ ನಡೆಸಿಕೊಟ್ಟರು.

ಸಂಸ್ಥೆಯ ನಿರ್ದೇಶಕರುಗಳಾದ ಸುನಂದಾ ವೆರ್ಣೇಕರ್, ಶಶಿ ಪ್ರಕಾಶ್, ಸುಜಾತ ನಾಗೇಶ್ ಹಾಗೂ ಸದಸ್ಯರುಗಳಾದ ರೂಪಾ, ಪ್ರಿಯಾಂಕ, ಮಹೇಶ್ವರಿ, ಐಶು ಭಾಗವಹಿಸಿದ್ದರು. ಕಾರ್ಯಕ್ರಮ ಸಂಸ್ಥೆಯ ಅಧ್ಯಕ್ಷ ವಿಜಯ ಅಕ್ಕಿ ಅವರ ಅಧ್ಯಕ್ಷತೆಯಲ್ಲಿ ನಡೆಯಿತು.

## ಸಾವಿತ್ರಿಬಾಯಿ ಫುಲೆ ಅನುಪಮ ಸಮಾಜ ಸುಧಾರಕಿ, ಅನನ್ಯ ಶಿಕ್ಷಕಿ

### ಹೊನ್ನಾಳಿ ಕಾರ್ಯಕ್ರಮದಲ್ಲಿ ಶಾಸಕ ರೇಣುಕಾಚಾರ್ಯ ಬಣ್ಣನೆ

ಹೊನ್ನಾಳಿ, ಜ.5- ದೇಶದ ಪ್ರಥಮ ಶಿಕ್ಷಕಿ ಎಂಬ ಹಿರಿಮೆಯ ಸಾವಿತ್ರಿಬಾಯಿ ಫುಲೆ ಅನುಪಮ ಸಮಾಜ ಸುಧಾರಕಿ, ಅನನ್ಯ ಶಿಕ್ಷಕಿ ಎಂದು ಸಿ.ಎಂ. ರಾಜಕೀಯ ಕಾರ್ಯದರ್ಶಿ ಎಂ.ಪಿ. ರೇಣುಕಾಚಾರ್ಯ ಬಣ್ಣಿಸಿದರು.

ಕರ್ನಾಟಕ ರಾಜ್ಯ ಸಾವಿತ್ರಿಬಾಯಿ ಫುಲೆ ಶಿಕ್ಷಕಿಯರ ಸಂಘದ ತಾಲ್ಲೂಕು ಘಟಕದ ವತಿಯಿಂದ ಇಲ್ಲಿನ ಗುರುಭ ವನದಲ್ಲಿ ಹಮ್ಮಿಕೊಂಡ ಸಾವಿತ್ರಿಬಾಯಿ ಫುಲೆ ಅವರ 190ನೇ ಜಯಂತ್ಯುತ್ಸವ ಉದ್ಘಾಟಿಸಿ ಅವರು ಮಾತನಾಡಿದರು.

ಮೇಲ್ಜಾತಿಯ ಪುರುಷರು, ಉಳ್ಳವರು ಹಾಗೂ ಒಂದು ಭಾಷಾ ವರ್ಗದವರ ಸ್ವತ್ತಾಗಿದ್ದ ಶಿಕ್ಷಣವನ್ನು ಎಲ್ಲರಿಗೂ, ವಿಶೇಷವಾಗಿ ಮಹಿಳೆಯರಿಗೆ ನೀಡಲು ಇನ್ನಿಲ್ಲದಂತೆ ಶ್ರಮಿಸಿದ ಸಾವಿತ್ರಿಬಾಯಿ ಫುಲೆ ಪ್ರಾತಃಸ್ಮರಣೀಯರು. ಅವರಿಲ್ಲದಿದ್ದರೆ, ಮಹಿಳೆಯರು ಅಭಿವೃದ್ಧಿ ಹೊಂದುತ್ತಿರಲಿಲ್ಲ ಎಂದು ತಿಳಿಸಿದರು.

ಹಿರೇಕಲ್ಮಠದ ಒಡೆಯರ್ ಡಾ. ಚನ್ನಮಲ್ಲಿಕಾರ್ಜುನ ಶಿವಾಚಾರ್ಯ ಸ್ವಾಮೀಜಿ ಸಮಾರಂಭದ ಸಾನಿಧ್ಯ ವಹಿಸಿ ಮಾತನಾಡಿ, ಅಕ್ಷರದ ಗಂಧ-ಗಾಳಿಯೇ ಇಲ್ಲದ ಸಂದರ್ಭ ದಲ್ಲಿ ಮಹಿಳೆಯರಿಗೆ ಅಕ್ಷರ ಕಲಿಸಿದ ಸಾವಿತ್ರಿಬಾಯಿ ಫುಲೆ 'ಅಕ್ಷರದವ್ವ' ಎಂದು ಹೆಸರಾಗಿದ್ದಾರೆ. ಭಾರತದಲ್ಲಿ ಬ್ರಿಟಿಷರ ಆಳ್ವಿಕೆಯ ಕಾಲದಲ್ಲೇ ಅವರು 18 ಶಾಲೆಗಳನ್ನು ತೆರೆದು ಶಿಕ್ಷಣಕ್ಕೆ ಆದ್ಯತೆ ನೀಡಿದ್ದು ಸ್ಮರಣೀಯವಾದುದು.

ಸಾವಿತ್ರಿಬಾಯಿ ಫುಲೆ ಅವರ ಅಕ್ಷರ ಕ್ರಾಂತಿ ಗಮನಿಸಿದ ಅಂದಿನ ಬ್ರಿಟಿಷ್ ಸರ್ಕಾರ ಅವರಿಗೆ 'ಇಂಡಿಯನ್ ಫಸ್ಟ್ ಲೇಡಿ ಟೀಚರ್' ಎಂಬ ಬಿರುದು ನೀಡಿ ಗೌರವಿಸಿತ್ತು. ಅವರ ಕಾರಣಕ್ಕಾಗಿಯೇ ಇಂದು ಮಹಿಳೆಯರು ಶಿಕ್ಷಣ, ರಾಜಕೀಯ ಸೇರಿದಂತೆ ಸಮಾಜದ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಲು ಸಾಧ್ಯವಾಗಿದೆ. ಇಂತಹ ಧೀಮಂತ ಮಹಿಳೆಯ ಜನ್ಮ ದಿನವನ್ನು ಆಚರಿಸುತ್ತಿರುವುದು ಮಾದರಿಯಾದುದು ಎಂದು ತಿಳಿಸಿದರು.



ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಕರ್ನಾಟಕ ರಾಜ್ಯ ಸಾವಿತ್ರಿಬಾಯಿ ಫುಲೆ ಶಿಕ್ಷಕಿಯರ ಸಂಘದ ತಾಲ್ಲೂಕು ಘಟಕದ ಅಧ್ಯಕ್ಷೆ ಎಸ್. ಷಹಜಾನ್ ಮಾತನಾಡಿ, ಸಾವಿತ್ರಿಬಾಯಿ ಫುಲೆ ಬಾಲ್ಯವಿವಾಹದ ಸಂಕೋಲೆಯಲ್ಲಿ ತಾವೇ ಸ್ವತಃ ಬಂಧಿಯಾಗಿದ್ದರೂ ಲೆಕ್ಕಿಸದೇ ನಾಳಿನ ಭವಿಷ್ಯದ ಬಗ್ಗೆ ನಾಡಿನ ಜನತೆಯ ಶೈಕ್ಷಣಿಕ ಅಭಿವೃದ್ಧಿಯ ಬಗ್ಗೆ ಶ್ರಮಿಸಿದರು. ಶಿಕ್ಷಕ ಸಮೂಹಕ್ಕೆ ಅವರು ಆದರ್ಶ, ಪ್ರೇರಣಾ ಶಕ್ತಿ, ಆಶಾಕಿರಣ ಎಂದು ಹೇಳಿದರು.

ಕ್ಷೇತ್ರ ಶಿಕ್ಷಣಾಧಿಕಾರಿ ಜಿ.ಇ. ರಾಜೀವ್, ಅಕ್ಷರ ದಾಸೋಹ ಸಹಾಯಕ ನಿರ್ದೇಶಕ ಕೆ.ಆರ್. ರುದ್ರಪ್ಪ, ಬಿಆರ್‌ಪಿಗಳಾದ ನಾಗರತ್ನಮ್ಮ, ಜಿ.ಕೆ. ಅರುಣ್‌ಕುಮಾರ್, ಶಿಕ್ಷಕಿ ಲತಾ, ಸಾವಿತ್ರಿಬಾಯಿ ಫುಲೆ ಶಿಕ್ಷಕಿಯರ ಸಂಘದ ತಾಲ್ಲೂಕು ಘಟಕದ ಉಪಾಧ್ಯಕ್ಷೆಯರಾದ ಪುಷ್ಪಲತಾ ಕೆ. ತೇಜಮೂರ್ತಿ, ಎಚ್. ಲಲಿತಮ್ಮ, ಪ್ರಧಾನ ಕಾರ್ಯದರ್ಶಿ ರಂಜಿತಾ ಮತ್ತಿತರರು ಮಾತನಾಡಿದರು.


> ವಿವಿಧ ಮಹನೀಯರುಗಳ ಜಯಂತ್ಯುತ್ಸವ ಆಚರಿಸುವುದು ಒಳ್ಳೆಯದೇ. ಆದರೆ, ಸರ್ಕಾರಿ ರಜೆ ನೀಡುವ ಪರಿಪಾಠ ಕೈಬಿಟ್ಟರೆ ಒಳಿತು.
>
> - ಡಾ. ಚನ್ನಮಲ್ಲಿಕಾರ್ಜುನ ಶಿವಾಚಾರ್ಯ ಸ್ವಾಮೀಜಿ, ಹಿರೇಕಲ್ಮಠ

ಪಿಎಸ್‌ಐ ಬಸನಗೌಡ ಬಿರಾದಾರ, ಸರ್ಕಾರಿ ನೌಕರರ ಸಂಘದ ತಾಲ್ಲೂಕು ಘಟಕದ ಅಧ್ಯಕ್ಷ ಚಂದ್ರಶೇಖರ್, ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ತಾಲ್ಲೂಕು ಘಟಕದ ಅಧ್ಯಕ್ಷ ಟಿ.ಎಸ್. ರುದ್ರೇಶ್, ಉಪಾಧ್ಯಕ್ಷ ಪುರುಷೋತ್ತಮ್, ಸಾವಿತ್ರಿಬಾಯಿ ಫುಲೆ ಶಿಕ್ಷಕಿಯರ ಸಂಘದ ತಾಲ್ಲೂಕು ಘಟಕದ ಉಪಾಧ್ಯಕ್ಷೆ ಗೀತಾ ದೊಡ್ಡಪ್ಪ, ಸಂಘಟನಾ ಕಾರ್ಯದರ್ಶಿಗಳಾದ ನಳಿನಾ, ಗಿರಿಜಮ್ಮ, ಕಾರ್ಯಕಾರಿಣಿ ಸದಸ್ಯೆ ಉಷಾ ಮತ್ತಿತರರು ಉಪಸ್ಥಿತರಿದ್ದರು.

ಜಿಲ್ಲಾ ಮಟ್ಟದ ಅತ್ಯುತ್ತಮ ಶಿಕ್ಷಕ ಪ್ರಶಸ್ತಿ ವಿಜೇತ ಶಿಕ್ಷಕರಾದ ಜೆ.ಎಚ್. ಸುರೇಶ್ ಗೆಜ್ಜುರಿ ಮತ್ತು ಎಸ್. ಷಹಜಾನ್ ಅವರನ್ನು, ಪ್ರೌಢಶಾಲೆಗೆ ಬಡ್ತಿ ಹೊಂದಿದ ಶಿಕ್ಷಕರು ಹಾಗೂ ಇತರರನ್ನು ಹಿರೇಕಲ್ಮಠದ ಒಡೆಯರ್ ಡಾ. ಚನ್ನಮಲ್ಲಿಕಾರ್ಜುನ ಶಿವಾಚಾರ್ಯ ಸ್ವಾಮೀಜಿ ಸನ್ಮಾನಿಸಿದರು.

MODI MOTORS
869/2 & 3, P.B. Road, Davangere.
CHEVROLET ಕಂಪನಿಯವರು ಭಾರತದಲ್ಲಿ ಮಾರಾಟವನ್ನು ನಿಲ್ಲಿಸಿರುವುದರಿಂದ ನಾವೂ ಸಹ ದಾವಣಗೆರೆಯಲ್ಲಿ ಮಾರಾಟ ಮತ್ತು ಸರ್ವೀಸನ್ನು ನಿಲ್ಲಿಸಿರುತ್ತೇವೆ. ನಮ್ಮಲ್ಲಿ ಕೆಲವು ವಾಹನಗಳನ್ನು ಗ್ರಾಹಕರು ಬಿಟ್ಟಿದ್ದು, ಪತ್ರದ ಮೂಲಕ ಅವರಿಗೆ ವಿಷಯ ತಿಳಿಸಿದ್ದೇವೆ. ತೆಗೆದುಕೊಂಡು ಹೋಗಲು ಇನ್ನು ಬಂದಿರುವುದಿಲ್ಲ. ಆದಕಾರಣ 7 ದಿನಗಳಲ್ಲಿ ವಾಹನದ ಡೆಮರೇಜ್ (Demurrage Charges) ಚಾರ್ಜನ್ನು ಕೊಟ್ಟು ವಾಹನವನ್ನು ತೆಗೆದುಕೊಂಡು ಹೋಗಬೇಕೆಂದು ಕೇಳಿಕೊಳ್ಳುತ್ತೇವೆ. ನಂತರ ಬಂದರೆ ನಾವು ಜವಾಬ್ದಾರರಲ್ಲ.
- Management

ಹೃದಯಪೂರ್ವಕ ಅಭಿನಂದನೆಗಳು



ಶ್ರೀಮತಿ ಕಂಚಿಕೆರೆ ಸುಶೀಲಮ್ಮನವರು

ಹುಟ್ಟು ಕಾಯಕ ಯೋಗಿಗಳಾಗಿದ್ದು, ಸರಳ ಜೀವನವನ್ನು ರೂಢಿಸಿಕೊಂಡಿರುವವರು, ಹಲವಾರು ಸಮಾಜ ಮುಖಿ ಕಾರ್ಯಗಳನ್ನು ಕೈಗೊಂಡಿರುವವರು. ಇಂತಹ ಸಹೃದಯಿ ವ್ಯಕ್ತಿತ್ವ ಹೊಂದಿರುವ ಶ್ರೀಯುತರಿಗೆ ಈ ಬಾರಿಯ 'ಜಿಲ್ಲಾ ಕನ್ನಡ ರಾಜ್ಯೋತ್ಸವ ಪ್ರಶಸ್ತಿ', ನೀಡಿ ಗೌರವಿಸಲಾಗಿದೆ.



ಶ್ರೀಮತಿ ನೀಲಗುಂದ ಜಯಮ್ಮನವರು

ಬಹುಮುಖ ಪ್ರತಿಭೆ, "ಆಡು ಮುಟ್ಟದ ಸೊಪ್ಪಿಲ್ಲ ಜಯ್ಯಮ್ಮನವರು ಸ್ಪರ್ಶಿಸದ ಕ್ಷೇತ್ರವಿಲ್ಲ" ಎಂದರೆ ಅತಿಶಯೋಕ್ತಿಯಾಗಲಾರದು, ಶ್ರೀಯುತರು ಶಿಕ್ಷಣ, ಸಾಹಿತ್ಯ, ಕಲೆ, ಮಹಿಳಾ ಸಬಲೀಕರಣ, ಸಮಾಜ ಸೇವೆ ಇನ್ನೂ ಹತ್ತು ಹಲವು ಕ್ಷೇತ್ರದಲ್ಲಿ ತಮ್ಮನ್ನು ತೊಡಗಿಸಿಕೊಂಡಿರುವ ಶ್ರೀಯುತರಿಗೆ ಈ ಬಾರಿಯ 'ಕದಳಿಶ್ರೀ' ಪ್ರಶಸ್ತಿ ನೀಡಿ ಗೌರವಿಸಲಾಗಿದೆ.

ಇವರಿಗೆ ಅಭಿನಂದನೆ ಕೋರುವವರು :
ಮಹಿಳಾ ಸೇವಾ ಸಮಾಜ ನರ್ಸರಿ, ಪ್ರಾಥಮಿಕ, ಪ್ರೌಢಶಾಲೆ ಶಿಕ್ಷಕರು ಮತ್ತು ಸಿಬ್ಬಂದಿ ವರ್ಗ
ಚೆನ್ನಮ್ಮ ಮಹೇಶ್ವರಯ್ಯ ಮೆಮೋರಿಯಲ್ ಪದವಿ ಪೂರ್ವ ಕಾಲೇಜ್ ಉಪನ್ಯಾಸಕರು ಮತ್ತು ಸಿಬ್ಬಂದಿ ವರ್ಗ
ಮಹಿಳಾ ಪ್ರಥಮ ದರ್ಜೆ ಕಾಲೇಜಿನ ಉಪನ್ಯಾಸಕರು ಮತ್ತು ಸಿಬ್ಬಂದಿ ವರ್ಗ, ದಾವಣಗೆರೆ.

## ಗುಡ್ಡ ಪ್ರದೇಶ ಜೀವವೈವಿಧ್ಯ ತಾಣ

**(1ನೇ ಪುಟದಿಂದ)** ದಾವಣಗೆರೆ ಜಿಲ್ಲೆಯಲ್ಲೂ ಸಹ ಗ್ರಾಮ, ತಾಲ್ಲೂಕು, ಜಿಲ್ಲೆ ಹಾಗೂ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಜೀವ ವೈವಿಧ್ಯ ಸಮಿತಿಗಳನ್ನು ರಚಿಸಲಾಗಿದೆ ಎಂದು ಹೇಳಿದರು.

ನಗರ ತ್ಯಾಜ್ಯದಿಂದ ಬಯೋಗ್ಯಾಸ್ ತಯಾರಿಕೆ ಮಾಡಬಹುದಾಗಿದೆ. ಹಾಸ್ಟೆಲ್, ಕಲ್ಯಾಣ ಮಂಟಪ ಹಾಗೂ ಮನೆಗಳ ತ್ಯಾಜ್ಯ ಸಂಗ್ರಹಿಸಿಯೂ ಗ್ಯಾಸ್ ತಯಾರಿಸಬಹುದು. ಆದರೆ, ದಾವಣಗೆರೆಯಲ್ಲಿ ಇಂತಹ ಕ್ರಮ ತೆಗೆದುಕೊಂಡಿಲ್ಲ. ಈ ಕ್ರಮ ತೆಗೆದುಕೊಂಡರೆ ತ್ಯಾಜ್ಯ ಸಮಸ್ಯೆ ಬಗೆಹರಿಯುವ ಜೊತೆಗೆ ಇಂಧನವೂ ಸಿಗುತ್ತದೆ ಎಂದು ಹೇಳಿದರು. ಕೆಲ ಔಷಧೀಯ ಸಸ್ಯಗಳು ಅಳಿವಿನ ಅಂಚಿಗೆ ಬಂದಿವೆ. ಜಿಲ್ಲೆಯಲ್ಲಿ ಇಂತಹ ಅಳಿವಿನ ಅಂಚಿನ ಸಸ್ಯಗಳಿದ್ದರೆ, ಅವುಗಳನ್ನು ಗುರುತಿಸಿ ರಕ್ಷಿಸಲು ಕ್ರಮ ತೆಗೆದುಕೊಳ್ಳಲು ವರದಿ ರೂಪಿಸಲಾಗುತ್ತಿದೆ. ಪಾರ್ಕ್‌ಗಳಲ್ಲೂ ಮರಗಳನ್ನು ಹೆಚ್ಚಾಗಿ ಬೆಳೆಸಬಹುದು ಎಂದೂ ಆಶೀಸರ ಹೇಳಿದ್ದಾರೆ.

ನದಿ ಪ್ರದೇಶಗಳಲ್ಲಿನ ಗಣಿಗಾರಿಕೆಯಿಂದಾಗಿ ಮೀನುಗಳಿಗೆ ತೊಂದರೆಯಾಗಿದೆ. ಹೀಗಾಗಿ ತುಂಗಭದ್ರಾ ನದಿ ಸೇರಿದಂತೆ, 15 ನದಿ ಪ್ರದೇಶಗಳಲ್ಲಿ ಮತ್ಸ್ಯಧಾಮ ರೂಪಿಸಲು ನಿರ್ಧರಿಸಲಾಗಿದೆ. ಈಗಾಗಲೇ 11 ಮತ್ಸ್ಯಧಾಮಗಳನ್ನು ರೂಪಿಸಲಾಗಿದೆ ಎಂದವರು ತಿಳಿಸಿದರು.

ಪರಿಸರ ರಕ್ಷಣೆಯ ಜೊತೆಗೆ ಸುಸ್ಥಿರ ಅಭಿವೃದ್ಧಿ ಹೊಂದುವುದು ಸರ್ಕಾರದ ಉದ್ದೇಶವಾಗಿದೆ. ಇದಕ್ಕಾಗಿ 2030 ಹಾಗೂ 2050ರ ಮಾರ್ಗಸೂಚಿಗಳು ಸಿದ್ಧವಾಗಿವೆ. ಇವುಗಳ ಅನ್ವಯ ಪ್ರತಿ ವರ್ಷವೂ ಕ್ರಮಗಳನ್ನು ತೆಗೆದುಕೊಳ್ಳಬೇಕಿದೆ ಎಂದು ಆಶೀಸರ ಹೇಳಿದರು.

ಈ ಸಂದರ್ಭದಲ್ಲಿ ಜಿಲ್ಲಾ ಪಂಚಾಯ್ತಿ ಸಿಇಒ ಪದ್ಮಾ ಬಸವಂತಪ್ಪ, ಅಪರ ಜಿಲ್ಲಾಧಿಕಾರಿ ಪೂಜಾರ್ ವೀರಮಲ್ಲಪ್ಪ, ಪಾಲಿಕೆ ಆಯುಕ್ತ ವಿಶ್ವನಾಥ ಮುದಜ್ಜಿ, ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕಿ ನಜ್ಮ ಮತ್ತಿತರರು ಉಪಸ್ಥಿತರಿದ್ದರು.

# ಅರಸೀಕೆರೆಯಲ್ಲಿ ಇಂದು - ನಾಳೆ 'ಯಕ್ಷ ಸಂಭ್ರಮ'

ಕರ್ನಾಟಕ ಯಕ್ಷಗಾನ ಅಕಾಡೆಮಿ ಆಶ್ರಯದಲ್ಲಿ ಇಂಚರ ಗ್ರಾಮೀಣ ಕ್ರೀಡಾ ಮತ್ತು ಸಾಂಸ್ಕೃತಿಕ ಸಂಘ ಮತ್ತು ಕರ್ನಾಟಕ ಗ್ರಾಮೀಣ ಹವ್ಯಾಸಿ ಯಕ್ಷಗಾನ ಮೂಡಲಪಾಯ ಕಲಾವಿದರ ಒಕ್ಕೂಟದ ಸಹಕಾರದೊಂದಿಗೆ ಕರ್ನಾಟಕದ ಕರಾವಳಿ ಜಿಲ್ಲೆಗಳ ಯಕ್ಷಗಾನವೂ ಸೇರಿದಂತೆ ನಾಡಿನ ವಿವಿಧ ಯಕ್ಷಗಾನ ಕಲಾ ಪ್ರಕಾರಗಳ ಪ್ರದರ್ಶನ, ಉಪನ್ಯಾಸ, ವಿಚಾರಗೋಷ್ಠಿ ಗಳ 'ಯಕ್ಷ ಸಂಭ್ರಮ' ಸಮಾರಂಭವು ಹರಪನಹಳ್ಳಿ ತಾಲ್ಲೂಕು ಅರಸೀಕೆರೆಯ ಜ್ಞಾನಜ್ಯೋತಿ ಹಿರಿಯ ಪ್ರಾಥಮಿಕ ಶಾಲೆ ಆವರಣದಲ್ಲಿ ಇಂದು ಮತ್ತು ನಾಳೆ ನಡೆಯಲಿದೆ ಎಂದು ಕರ್ನಾಟಕ ಯಕ್ಷಗಾನ ಅಕಾಡೆಮಿ ರಿಜಿಸ್ಟಾರ್ ಎಸ್.ಹೆಚ್. ಶಿವರುದ್ರಪ್ಪ ತಿಳಿಸಿದ್ದಾರೆ.

ಇಂದು ಸಂಜೆ 3 ಗಂಟೆಗೆ ಸಮಾರಂಭ ವನ್ನು ಶಾಸಕ ಎಸ್.ವಿ. ರಾಮಚಂದ್ರ ಉದ್ಘಾಟಿಸಲಿದ್ದಾರೆ. ಅಧ್ಯಕ್ಷತೆಯನ್ನು ಕರ್ನಾಟಕ ಯಕ್ಷಗಾನ ಅಕಾಡೆಮಿಯ ಅಧ್ಯಕ್ಷ ಪ್ರೊ॥ ಎಂ.ಎ.ಹೆಗಡೆ ವಹಿಸಿಕೊಳ್ಳಲಿದ್ದಾರೆ.

ಮುಖ್ಯ ಅತಿಥಿಗಳಾಗಿ ಸಂಸದ ವೈ. ದೇವೇಂದ್ರಪ್ಪ, ಮಾಜಿ ಶಾಸಕ ಹೆಚ್.ಪಿ. ರಾಜೇಶ್, ಜಿ.ಪಂ. ಸದಸ್ಯರಾದ ವೈ.ಡಿ. ಸುಶೀಲಮ್ಮ ಆಗಮಿಸಲಿದ್ದಾರೆ. ಅತಿಥಿಗಳಾಗಿ ತಾ.ಪಂ. ಸದಸ್ಯರಾದ ಪಾಟೀಲ್ ವಿಶಾಲಾಕ್ಷಮ್ಮ, ರವೀಂದ್ರಗೌಡರು, ಹರಪ ನಹಳ್ಳಿಯ ಪೆರಿಯರ್ ಚಿಂತಕ ಕೋಡಿಹಳ್ಳಿ ಭೀಮಪ್ಪ, ಅರಸೀಕೆರೆಯ ಜ್ಞಾನಜ್ಯೋತಿ ಹಿರಿಯ ಪ್ರಾಥಮಿಕ ಶಾಲೆಯ ಅಧ್ಯಕ್ಷ ಬಿ.ಎಂ.ಗುರುಮೂರ್ತಿಸ್ವಾಮಿ ಆಗಮಿಸಲಿದ್ದಾರೆ ಎಂದು ಕರ್ನಾಟಕ ಯಕ್ಷಗಾನ ಅಕಾಡೆಮಿಯ ಸದಸ್ಯ ಸಂಚಾಲಕ ಡಾ. ರಂಗಾರೆಡ್ಡಿ ಕೋಡಿ ರಾಂಪುರ ಸಿ. ಮುನಿರೆಡ್ಡಿ ತಿಳಿಸಿದ್ದಾರೆ.



ಈ ಯಕ್ಷ ಸಂಭ್ರಮದಲ್ಲಿ ಸಂಜೆ 4.30ಕ್ಕೆ ಯಕ್ಷಗಾನ ಕಲಾಪ್ರಕಾರದ ಕುರಿತು ವಿಚಾರಗೋಷ್ಠಿ ನಡೆಯಲಿದ್ದು, ಅಧ್ಯಕ್ಷತೆಯನ್ನು ಹರಿಹರದ ಎಸ್.ಜೆ. ವಿ.ಪಿ. ಕಾಲೇಜಿನ ಪ್ರಾಚಾರ್ಯ ಪ್ರೊ. ಎ.ಬಿ.ರಾಮಚಂದ್ರಪ್ಪ ವಹಿಸಲಿದ್ದಾರೆ. ದಾವಣಗೆರೆಯ ಯಕ್ಷರಂಗ ಸಂಸ್ಥೆಯ ಸಂಸ್ಥಾಪಕ ಸಾಲಿಗ್ರಾಮ ಗಣೇಶ್ ಶೆಣೈ 'ಕರ್ನಾಟಕ ಕರಾವಳಿ ಜಿಲ್ಲೆಗಳ ಯಕ್ಷಗಾನ ಕಲೆಯ ಸಾಮಾನ್ಯ ಸ್ವರೂಪ' ವಿಚಾರವಾಗಿ ಉಪನ್ಯಾಸ ನೀಡಲಿದ್ದಾರೆ. 'ಮೂಡಲಪಾಯ ಪರಿಷ್ಕರಣೆ' ಎಂಬ ವಿಚಾರವಾಗಿ ಹರಪನಹಳ್ಳಿ ಹಿರಿಯ ಮೂಡಲಪಾಯ ಕಲಾವಿದ ಬಿ.ಪರಶುರಾಮ್ ಉಪನ್ಯಾಸ ನೀಡಲಿದ್ದಾರೆ.

ಸಂಜೆ 5-30ಕ್ಕೆ ಯಕ್ಷಗಾನ ನಡೆಯಲಿದ್ದು, ತಲಕಾಡು ಹೆಮ್ಮಿಗೆಯ ಶ್ರೀ ಹೇಮಾಂಬಿಕಾ ಯಕ್ಷಗಾನ ಕಲಾ ಸಂಘದ ಕಲಾವಿದರಿಂದ ತಾಳ-ಮೇಳ ಅಂಗದ-ಸಂಧಾನ, ಜಗಳೂರಿನ ಬಿ.ಕೆ.ಅಜಯ್ ಮತ್ತು ತಂಡದಿಂದ ಮೂಡಲಪಾಯ ಯಕ್ಷಗಾನ, 'ಕಂಸಾಸುರ ವಧೆ' ಸಿದ್ದಮ್ಮನಹಳ್ಳಿ ಕಲಾವಿದರು ಮತ್ತು ತಂಡದಿಂದ ಮೂಡಲಪಾಯ ಯಕ್ಷಗಾನ 'ಕರಿಭಂಟನ ಕಾಳಗ' ಪ್ರದರ್ಶನ ನಡೆಯಲಿದೆ.

ನಾಳೆ ಗುರುವಾರ ಸಮಾರೋಪ ಸಮಾರಂಭ ನಡೆಯಲಿದ್ದು , ಮುಖ್ಯ ಅತಿಥಿಗಳಾಗಿ ಕರ್ನಾಟಕ ಗ್ರಾಮೀಣ ಹವ್ಯಾಸಿ ಯಕ್ಷಗಾನ ಮೂಡಲಪಾಯ ಕಲಾವಿದರ ಒಕ್ಕೂಟದ ಸಂಸ್ಥಾಪಕ ಅಧ್ಯಕ್ಷ ಎನ್.ಎಸ್.ರಾಜು, ಅರಸೀಕೆರೆಯ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಮಹಮ್ಮದ್ ಹುಸೇನ್, ಅರಸೀಕೆರೆಯ ಯುವ ಮುಖಂಡ ವೈ.ಡಿ.ಅಣ್ಣಪ್ಪ, ಇಂಚರ ಗ್ರಾಮೀಣ ಕ್ರೀಡಾ ಮತ್ತು ಸಾಂಸ್ಕೃತಿಕ ಸಂಘದ ಅಧ್ಯಕ್ಷ ಕೆ.ಎಂ.ಕೊಟ್ರಯ್ಯ ಆಗಮಿಸಲಿದ್ದಾರೆ.

ಕೆ.ಬಿ.ಷಣ್ಮುಖಪ್ಪ, ಹೆಚ್.ನಾಗರಾಜು, ಸಿ. ಚಂದ್ರಪ್ಪ, ಚನ್ನಬಸಪ್ಪ ದಳವಾಯಿ, ಸಣ್ಣಬೋರಯ್ಯ, ಎನ್.ರಂಗನಾಥ್, ಡಿ. ರಂಗಪ್ಪ, ಎಂ.ಇಮಾಮ್‌ಸಾಬ್, ಹೆಚ್. ಮರುಳಸಿದ್ದಪ್ಪ, ಬಿ.ದೇವೇಂದ್ರಪ್ಪ, ಜಿ. ಗೋಪಾಲ, ಡಿ.ಶಾಂತಪ್ಪ ಅವರುಗಳನ್ನು ಸನ್ಮಾನಿಸಲಾಗುತ್ತದೆ.

ಸಭಾ ಕಾರ್ಯಕ್ರಮದ ನಂತರ ದಾವಣಗೆರೆಯ ಯಕ್ಷರಂಗ ಸಂಸ್ಥೆಯ ಕಲಾವಿದರಿಂದ 'ಜಾಂಬುವತಿ ಕಲ್ಯಾಣ' ಕರಾವಳಿಯ ಯಕ್ಷಗಾನ ಪ್ರದರ್ಶನ, ಹರಪನಹಳ್ಳಿಯ ಸಮಸ್ತರು ಸಾಂಸ್ಕೃತಿಕ ಸಂಘದ ಕಲಾವಿದರಿಂದ 'ಕರ್ಣ' ಮೂಡಲಪಾಯ, ಯಕ್ಷಗಾನ ಕಾರ್ಯಕ್ರಮ ನಡೆಯಲಿದೆ.

## ಮುಪ್ಪು



ಮುಪ್ಪಾಗುತಿದೆ ನನಗೆ
ದಿನದಿನದ ಕೊನೆಗೆ
ಮೈ ಮನಕೆ ನೆರೆ
ಹೊಕ್ಕು ಸುಕ್ಕಾಗುತಿದೆ ತನುಗೆ

ತಲೆಯ ಕೂದಲು ಉದುರಿ ನೆತ್ತಿ ಬೋಳಾಗುತಿದೆ
ಅಳಿದುಳಿದ ಕೂದಲೆರಡು ಬಿಳಿಯ ಬಣ್ಣವ ತಳೆದು
ನಿಂತಿಹವು ಬೋಳು ಬೆಟ್ಟದ ಮೇಲಿನ ಒಣ ಹುಲ್ಲಿನಂತೆ

ಕಣ್ಣುಗಳು ಮಂಜಾಗಿ ಬಣ್ಣಗಳು ಕಲಸೋಗಿ
ದೂರದವರು ಕಾಣುವರು ಬೆದರು ಬೊಂಬೆಯಂತೆ
ಹತ್ತಿರದಿ ಕೈ ಎತ್ತಿ ಕಣ್ಣೆಟ್ಟು ನೋಡಿದರೂ
ಕೇಳಬೇಕು ನಿಂತವರು ಎದುರು ಯಾರಂತೆ

ಕಿವಿಯ ತಮಟೆಗಳೊಡೆದು ಗದ್ದಲದ ಸದ್ದಡಗಿ
ಝೀರುಂಡೆ ಝೀ ದನಿಯೇ ಕಿವಿಯ ತುಂಬಿಹುದು
ಕರೆದಾಗ ಕೇಳಿಸದೆ ಕರೆಯದಿರೆ ಕರೆದಂತಾಗಿ ಓ ಎನ್ನೆ
ಇದ್ದಲ್ಲೆ ಜೋಳ್ಳಾಗುವೆನು ಗೊಳ್ಳೆಂಬ ನಗೆಗೆ

ದಂತ ಪಕ್ತಿಗಳೆರಡು ಪಂಕ್ತಿ ನಿಯಮವ ಮೀರಿ
ಪಾಳುಗುಡಿಯಲಿರುವ ಮುರಿದ ಕಂಬಗಳಂತೆ
ಅಲ್ಲಲ್ಲಿ ನಿಂತಿಹವು ಕೆಸರಲಿಟ್ಟ ಕಲ್ಲಿನಂತೆ
ಅಗಿಯಲಾಗದು ಅನ್ನ ವನು ಒಂದಿಷ್ಟು ಬೇಯದಿರೆ
ಕೆಸರಲೂತ ಗಾಲಿಗೆ ಸನ್ನೆಯನು ಇಟ್ಟಂತೆ
ಕೇಳುವುದು ಕಡ್ಡಿಯನು ಕಡ್ಡಾಯವೆಂಬಂತೆ

ಸುಕ್ಕುಗಟ್ಟುತಿದೆ ಮೈಕವಚ ತನ್ನ ಕಾಂತಿಯ ಕಳೆದು
ಅಲ್ಲಲ್ಲಿ ಬಿಳಿ ಕಲೆ ಎಲೆಯ ಮೇಲಿನ ಚುಕ್ಕಿ ಗಳಂತೆ
ಕೈ ಬೆರಳು ತಾಗಿದೊಡೆ ಹಿಂತೆಗೆಯಲಾಗದು
ಕೆಂಪಾಗಿ ಉರಿ ಏರಿ ರಂಪವಾಗುವವರೆಗೆ

ಆಗ ಕಂಡದ್ದು ಈಗ ನೆನಪಿಲ್ಲ
ಮನಸಿನಲೇನು ನಿಲ್ಲುತಿಲ್ಲ
ತೊಣಚಿ ಅಂಟಿದ ಶುನಕನಂತೆ ತಿರುಗುತ್ತಿದೆ
ಮನ ಗುರಿ ಇಲ್ಲದಂತೆ

ಕೈಯಲೇನೂ ಇಲ್ಲ ಮೈಯ್ಯಲೇನೂ ಇಲ್ಲ
ಆದರೂ ಸಿಡುಕುತಿಹೆ ಸೆಡ್ಡು ಹೊಡೆವಂತೆ
ಮಾತು ಕೇಳಿದ ಮಡದಿ ಮಾತು ಕಲಿತಾ ಮಗ
ಮೇಲೇರಿ ಬರುವರು ಮೂಲೆಯಲಿ ಕೂರೆಂದು
ತಲೆ ಸುತ್ತಿ ಕಾಲೆಡವಿ ಮುಗ್ಗರಿಸುವ ಮುನ್ನ
ಆಸರೆಗೆ ಬೇಕಿದೆ ಊರುಗೋಲೊಂದು ಆಸರೆಗೆ
ಬೇಕಿದೆ ಊರುಗೋಲೊಂದು

**- ಚಂಪಕ**
**(ಕೆ. ಪಿ. ಚಂದ್ರಪ್ಪ, ನಿ. ಡಿವೈಎಸ್ಪಿ, ದಾವಣಗೆರೆ.)**

## ನಾನು ಮಾಯೆ ನೀನು ಮಾಯೆ

ಜಗವೇ ಮಾಯಾ ಜಾಲ
ದಲಿ ಸಿಲುಕಿರಲು, ಜಗಕೆ
ಅಂಜಿದೊಡೆ ಎಂತಯ್ಯ,
ನನ್ನದೆನ್ನುವುದು ಮಾಯೆ.

ಯಾಕೆ ಬಡಿದಾಡಿತಿ ನಂದು
ನನ್ನದು ಎಂದು, ನೀನು ಈ
ಜಗವ ಬಿಟ್ಟು ನಡೆದಾಗ
ನಿನ್ನವರಾರು ಬರೋಲ್ಲ ನಿನ್ ಜೊತೆ

ಕೊಟ್ಟಿದ್ದು ನನ್ನದು, ಬಚ್ಚಿಟ್ಟಿದ್ದು ಪರರಿಗೆ
ಎಂಬುದು ನಿತ್ಯ ನವೀನ,
ಹೀಗೆ ಬದುಕೋ ಸದಾ..


ನಾ ಯಾರಿಗಾದೇನೋ ಎಲೆ
ಮಾನವ,ದುಷ್ಟ ಬುದ್ದಿ ತುಂಬಿರುವ ನನ್ನ
ನಿನ್ನ ಮನಸು ಕೀಳಿನದಲ್ವೆ...

ಭವ ಜಂಜಾಟ ಬಿಟ್ಟು ಬಿಡು,
ಸ್ವಾಮಿಯ ಜಪ
ಮಾತ್ರ ಶ್ರೇಷ್ಠ, ಮುಕ್ತಿಗೆ
ಭಕ್ತಿಯ ತೋರು ಮನವೆ

ನಾನು ನನ್ನಿಂದ ಎನ್ನುವುದು ಬಿಡು ನೀನು
ಹರಿಯ ಸ್ಮರಣೆಯೇ ನಿನ್ನ
ಸಂಪಾದನೆ ಎಂದು ಮಾಡು

**-ರೇವಣ್ಣ ಬಳ್ಳಾರಿ,**
ವಕೀಲರು, ದಾವಣಗೆರೆ.

# ಮಠ-ಮಾನ್ಯಗಳು ಶಾಂತಿ ಕೇಂದ್ರಗಳು



**ಹೊನ್ನಾಳಿ ಹಿರೇಕಲ್ಮಠದ ಶ್ರೀಗಳು**

ಹೊನ್ನಾಳಿ ಜ.5 - ಮಠ-ಮಾನ್ಯಗಳು ಶಾಂತಿ-ನೆಮ್ಮದಿಯ ಕೇಂದ್ರಗಳು ಎಂದು ಹೊನ್ನಾಳಿ ಹಿರೇಕಲ್ಮಠದ ಒಡೆಯರ್ ಡಾ. ಚನ್ನಮಲ್ಲಿಕಾರ್ಜುನ ಸ್ವಾಮೀಜಿ ಹೇಳಿದರು.

ತಾಲ್ಲೂಕಿನ ಮಾಸಡಿ ಗ್ರಾಮದಲ್ಲಿ ಸೋಮವಾರ ಶ್ರೀ ಮಹೇಶ್ವರ ಸ್ವಾಮಿ ಮಠವನ್ನು ಲೋಕಾರ್ಪಣೆಗೊಳಿಸಿ ಶ್ರೀಗಳು ಆಶೀರ್ವಚನ ನೀಡಿದರು.

ವಿಜ್ಞಾನ-ತಂತ್ರಜ್ಞಾನ ಕ್ಷೇತ್ರದಲ್ಲಿ ಮನುಷ್ಯ ಅಗಾಧ ಸಾಧನೆ ಮಾಡಿದ್ದಾನೆ. ಆದರೆ, ತನ್ನ ಬದುಕಿನಲ್ಲಿ ಶಾಂತಿ-ನೆಮ್ಮದಿ ಕಂಡುಕೊಳ್ಳಲು ವಿಫಲನಾಗಿದ್ದಾನೆ. ಆದ್ದರಿಂದ, ಧಾರ್ಮಿಕ ಶ್ರದ್ಧಾ ಕೇಂದ್ರಗಳು, ದೇವಸ್ಥಾನಗಳು, ಗುರುಗಳ ಸನ್ನಿಧಿಗೆ ತೆರಳಿ ಮನಸ್ಸಿಗೆ ನೆಮ್ಮದಿ ಕಂಡುಕೊಳ್ಳಬೇಕು ಎಂದು ತಿಳಿಸಿದರು.

ಮಾಸಡಿ ಗ್ರಾಮದ ವತಿಯಿಂದ ಶ್ರೀ ಮಹೇಶ್ವರ ಸ್ವಾಮಿ ಜಾತ್ರೆಯನ್ನು ಶ್ರದ್ಧಾ-ಭಕ್ತಿಗಳಿಂದ ಆಚರಿಸಲಾಗುತ್ತದೆ. ಸುತ್ತ-ಮುತ್ತಲಿನ ಗ್ರಾಮಸ್ಥರೆಲ್ಲರೂ ಇಲ್ಲಿಗೆ ಆಗಮಿಸಿ, ಶಿವನ ಕೃಪೆಗೆ ಪಾತ್ರರಾ ಗುತ್ತಿದ್ದಾರೆ. ಗ್ರಾಮದಲ್ಲಿದ್ದ ಮಹೇಶ್ವರ ಸ್ವಾಮಿ ಹಳೆಯ ಮಠದ ಬದಲಿಗೆ ಹೊಸ ಮಠವನ್ನು ಗ್ರಾಮಸ್ಥರೆಲ್ಲರೂ ಒಗ್ಗಟ್ಟಿನಿಂದ ನಿರ್ಮಿಸಿರುವುದು ಗ್ರಾಮದ ಐಕ್ಯತೆಯನ್ನು ಬಿಂಬಿಸುತ್ತದೆ. ಇದೇ ರೀತಿ ಎಲ್ಲಾ ಗ್ರಾಮಸ್ಥರೂ ಭಾವೈಕ್ಯತೆಯಿಂದ ಬಾಳ್ವೆ ನಡೆಸಬೇಕು ಎಂದು ಸೂಚಿಸಿದರು.

ಶ್ರೀ ಮಹೇಶ್ವರಸ್ವಾಮಿ ಮಠದ ಮಹೇಶ್ವರಯ್ಯ ಸ್ವಾಮಿ, ಎಪಿಎಂಸಿ ನಿರ್ದೇಶಕ ಎಂ.ಎಚ್. ಗಜೇಂದ್ರಪ್ಪ, ಮಾಸಡಿ ಗ್ರಾಪಂ ಸದಸ್ಯರಾದ ಸಿ.ಎಚ್. ಅಶೋಕ್, ಮಮತಾ ಎನ್.ಪಿ. ನಾಗಪ್ಪ, ಲಕ್ಷ್ಮಮ್ಮ ಭರಮಪ್ಪ, ನೇತ್ರಾವತಿ ನಾಗರಾಜ್, ಮುಖಂಡರಾದ ಪಿ. ಗದಿಗೆಪ್ಪ, ನಾರಾಯಣಪ್ಪ, ಸತೀಶ್, ಕೆ.ಟಿ. ಸುರೇಶ್ ಮತ್ತಿತರರು ಉಪಸ್ಥಿತರಿದ್ದರು.

## ಆರಂಭಕ್ಕೆ ಉತ್ತಮ ಪ್ರತಿಕ್ರಿಯೆ

**(1ನೇ ಪುಟದಿಂದ)** ಬಂದಿಲ್ಲವಾದ್ದರಿಂದ ಶಾಲೆಗಳು ಸಮರ್ಪಕವಾಗಿ ನಡೆಯುತ್ತಿವೆ ಎಂದವರು ಹೇಳಿದ್ದಾರೆ.

ಬಿಜಾಪುರ ಜಿಲ್ಲೆಯ ಪ್ರಾಥಮಿಕ ಶಾಲೆಯ ಒಬ್ಬ ಶಿಕ್ಷಕರು ಕೊರೊನಾ ಸೋಂಕಿಗೊಳಗಾಗಿದ್ದು ಅವರು ಗೃಹ ಪ್ರತ್ಯೇಕತೆಯಲ್ಲಿದ್ದಾರೆ. ಹುಕ್ಕೇರಿ ಶೈಕ್ಷಣಿಕ ಜಿಲ್ಲೆಯಲ್ಲಿ ನಾಲ್ವರು ಶಿಕ್ಷಕರು ಹೋಂ ಕ್ವಾರಂಟೈನ್‌ನಲಿದ್ದಾರೆ. ಕೊಪ್ಪಳ ಜಿಲ್ಲೆಯ ವಡಗನಹಳ್ಳಿ ಪ್ರಾಥಮಿಕ ಶಾಲೆಯ ಒಬ್ಬ ಶಿಕ್ಷಕರಿಗೆ ಕೊರೊನಾ ಪಾಸಿಟಿವ್ ಬಂದಿದ್ದು, ಶಾಲೆಯನ್ನು ಸ್ಯಾನಿಟೈಸೇಷನ್ ಮಾಡಿಸಲಾಗಿದೆ.

ಬಾಗಲಕೋಟೆ ಜಿಲ್ಲೆಯ ಐವರು ಶಿಕ್ಷಕರಿಗೆ ಕೊರೊನಾ ಪಾಸಿಟಿವ್ ಬಂದಿದ್ದು, ಅವರೆಲ್ಲ ಗೃಹ ಪ್ರತ್ಯೇಕತೆಯಲ್ಲಿದ್ದಾರೆ. ಚಿತ್ರದುರ್ಗ ಜಿಲ್ಲೆಯ ವಿವಿಧ ಐದು ಶಾಲೆಗಳ ಐವರು ಶಿಕ್ಷಕರಿಗೆ ಕೊರೊನಾ ಸೋಂಕು ದೃಢಪಟ್ಟಿದ್ದು, ಅವರೆಲ್ಲ ಗೃಹ ಪ್ರತ್ಯೇಕತೆಯಲ್ಲಿದ್ದಾರೆ. ಮಕ್ಕಳಿಗೆ ಯಾವುದೇ ತೊಂದರೆಯಾಗಿಲ್ಲ.

ಬೆಳಗಾವಿ ಜಿಲ್ಲೆ ಕಡೋಲಿ ಶಾಲೆಯ ಶಿಕ್ಷಕರಿಗೆ ಈ ತನಕ ಕೊರೊನಾ ಸೋಂಕು ದೃಢಪಟ್ಟಿಲ್ಲ. ಅವರಿಗೆ ಟೆಸ್ಟ್ ಆಗಿದ್ದು, ಇನ್ನು ಫಲಿತಾಂಶ ಬರಬೇಕಿದೆ. ರ‍್ಯಾಪಿಡ್ ಆಂಟಿಜನ್ ಟೆಸ್ಟ್ ಪರೀಕ್ಷೆಯಲ್ಲಿ ನೆಗೆಟಿವ್ ಫಲಿತಾಂಶ ಬಂದಿದೆ. ಪೂರ್ಣ ಫಲಿತಾಂಶ ಬರುವ ತನಕ ಈ ಶಿಕ್ಷಕರು ಶಾಲೆಗೆ ಹಾಜರಾಗುತ್ತಿಲ್ಲ. ನಾಳೆ ಟೆಸ್ಟ್ ಫಲಿತಾಂಶ ಬರಬಹುದು. ಈ ಯಾವ ಶಿಕ್ಷಕರೂ ಮಕ್ಕಳ ಸಂಪರ್ಕಕ್ಕೆ ಬಂದಿಲ್ಲ ಎಂದು ಸಚಿವರು ತಿಳಿಸಿದ್ದಾರೆ.

## ಶಾಸಕರು ಸಂದಿಗ್ಧ ಸ್ಥಿತಿಯಲ್ಲಿದ್ದೇವೆ -ಗೂಳಿಹಟ್ಟಿ ಶೇಖರ್

ಬೆಂಗಳೂರು, ಜ. 5 - ಶಾಸಕರೆಲ್ಲಾ ಸಂದಿಗ್ಧ ಪರಿಸ್ಥಿತಿಯಲ್ಲಿದ್ದೇವೆ ಎಂದು ಬಹಿರಂಗವಾಗಿ ಹೇಳುವ ಮೂಲಕ ಸರ್ಕಾರದ ವಿರುದ್ಧ ಬಿಜೆಪಿ ಶಾಸಕ ಗೂಳಿಹಟ್ಟಿ ಶೇಖರ್ ಅಸಮಾಧಾನ ಹೊರ ಹಾಕಿದ್ದಾರೆ.

ಬೆಂಗಳೂರಿನಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನಮ್ಮ ಸ್ಥಿತಿ ಹೇಳಿಕೊಳ್ಳಲು ಆಗಲ್ಲ, ಬಿಡೋದಕ್ಕೂ ಆಗಲ್ಲ ಎಂಬಂತಾಗಿದೆ. ಒಂದು ಮಾತನಾಡಿದರೆ ದೊಡ್ಡದಾಗುತ್ತೆ, ಒಂದು ಮಾತು ಬಿಟ್ರೆ ಸಣ್ಣದಾಗುತ್ತೆ, ನಾವು ಏನೇ ಮಾತನಾಡಿದರೂ ಕಷ್ಟ ಎಂಬಂತಾಗಿದೆ ಎಂದಿದ್ದಾರೆ.

ನಮಗೂ ಅನೇಕ ಸಮಸ್ಯೆಗಳಿವೆ, ಕ್ಷೇತ್ರಕ್ಕೆ ಹೋದರೆ ಕೆಲಸ ಆಗುತ್ತಿಲ್ಲ ಅಂತ ಜನ ಬೈತಾರೆ. ಆದರೆ ಈ ಬಗ್ಗೆ ಸಚಿವರಲ್ಲಿ ಹೇಳಿಕೊಳ್ಳೋಕೆ ಅವರೇ ಸಿಗುತ್ತಿಲ್ಲ ಎಂದರು.

ನಾವು ಮಾತನಾಡಿದರೆ ಬೇರೆ ಬೇರೆ ಬಣ್ಣ ಕಟ್ಟುತ್ತಾರೆ, ವಿಜಯೇಂದ್ರ ಬಗ್ಗೆ ಮಾತನಾಡುವಷ್ಟು ದೊಡ್ಡ ವ್ಯಕ್ತಿ ನಾನಲ್ಲ, ಅಂತಹ ಸಂದಿಗ್ಧ ಪರಿಸ್ಥಿಯಲ್ಲಿ ನಾವಿದ್ದೇವೆ, ನಾವು ಏನೇ ಮಾತನಾಡಿದರೂ ತಪ್ಪಾಗುತ್ತದೆ ಎಂದು ಬೇಸರ ವ್ಯಕ್ತಪಡಿಸಿದ್ದಾರೆ.

## ಬೆಂಬಿಡದ ವಿವಾದ

**(1ನೇ ಪುಟದಿಂದ)** ದೂರಿನ ಆರೋಪಗಳ ಕುರಿತು ಪ್ರಾಥಮಿಕ ತನಿಖೆ ನಡೆಸಿದ್ದ ಲೋಕಾಯುಕ್ತ ಪೊಲೀಸರು, ಆರೋಪಗಳಲ್ಲಿ ಮೇಲ್ನೋಟಕ್ಕೆ ಸತ್ಯಾಂಶ ಕಂಡುಬಂದ ಹಿನ್ನೆಲೆಯಲ್ಲಿ ಯಡಿಯೂರಪ್ಪ ವಿರುದ್ಧ ಎಫ್‌ಐಆರ್ ದಾಖಲಿಸಿದ್ದರು.

## ಲೋಪದೋಷ : ಮರುಎಣಿಕೆಗೆ ಮನವಿ

**(1ನೇ ಪುಟದಿಂದ)** ಎಣಿಕೆ ನಿಯಮ ಉಲ್ಲಂಘಿಸಿದ್ದಾರೆ ಎಂದು ಶಿವಕುಮಾರ್ ಆರೋಪಿಸಿದ್ದಾರೆ.

ಮತ ಎಣಿಕೆ ತಡ ರಾತ್ರಿ 12 ಗಂಟೆಯಲ್ಲಿ ನಡೆದಿದ್ದು, ಅಭ್ಯರ್ಥಿಗಳ ಮತ ಪತ್ರದ ಚಿಹ್ನೆ ಸರಿಯಾದ ಗುರುತು ತೋರಿಸದೇ ಅತಿ ಅವಸರದಲ್ಲಿ ಪ್ರಕ್ರಿಯೆ ಮುಗಿಸಿದ್ದಾರೆ. ವಿಶೇಷವಾಗಿ 1ನೇ ಮತಗಟ್ಟೆ ವಾರ್ಡ್‌ನಲ್ಲಿ 484 ಮತದಾನ ನಡೆದ ಬಗ್ಗೆ ದಾಖಲೆ ಇದೆ. ಆದರೆ ಎಣಿಕೆ ಸಂದರ್ಭದಲ್ಲಿ 486 ಮತ ಪತ್ರಗಳು ಇವೆ. ಇದರ ಬಗ್ಗೆ ಸ್ಪಷ್ಟನೆ ಕೊಡದೇ ಇರುವುದು ಮೇಲ್ನೋಟಕ್ಕೆ ಕಂಡುಬಂದಿದೆ ಮತ್ತು ಎಣಿಕೆ ನಂತರ ಅಭ್ಯರ್ಥಿಗಳಿಂದ ಸಹಿ ಪಡೆದಿಲ್ಲ. ಅಧಿಕಾರಿಗಳು ವಿಶೇಷ ಗಮನ ಹರಿಸಿ ಕ್ರಮಕೈಗೊಳ್ಳಬೇಕು ಎಂದು ಮನವಿ ಮಾಡಿದ್ದಾರೆ.

ಮನವಿ ಸ್ವೀಕರಿಸಿ ಮಾತನಾಡಿದ ತಹಶೀಲ್ದಾರ್ ಡಾ.ನಾಗವೇಣಿ ಅವರು ನಿಮ್ಮ ಮನವಿಯನ್ನು ಜಿಲ್ಲಾಧಿಕಾರಿಗಳ ಗಮನಕ್ಕೆ ತರುತ್ತೇವೆ. ಇದೀಗ ಮತ ಪೆಟ್ಟಿಗೆಗಳನ್ನು ಖಜಾನೆ ಭದ್ರತಾ ಕೊಠಡಿಯಲ್ಲಿ ಇಡಲಾಗಿದ್ದು, ಮರು ಮತ ಎಣಿಕೆ ಮಾಡುವ ಅಧಿಕಾರ ನಮಗಿಲ್ಲ. ಈ ಬಗ್ಗೆ ಕೋರ್ಟ್ ಮೊರೆ ಹೋಗುವಂತೆ ಸಲಹೆ ನೀಡಿದರು. ಈ ಸಂದರ್ಭದಲ್ಲಿ ಆರ್.ತಿಪ್ಪೇಸ್ವಾಮಿ, ಪಿ.ಆರ್.ಬಸವರಾಜ್, ಮಂಜುನಾಥ್, ಶಶಿಧರ್ ಸೇರದಂತೆ ಹಲವರು ಭಾಗವಹಿಸಿದ್ದರು.

## ಹರಿಹರ : ತುಂಗಭದ್ರಾ ನದಿಯ ತೀರದಲ್ಲಿ ಶ್ರೀ ಮಹೇಶ್ವರ ಸ್ವಾಮಿ ಜಾತ್ರೆ



ಹರಿಹರ, ಜ.5- ನಗರದ ತುಂಗಭದ್ರಾ ನದಿಯ ದಂಡೆಯಲ್ಲಿರುವ ಶ್ರೀ ಸಂಗಮೇಶ್ವರ ದೇವಸ್ಥಾನದ ಆವರಣದಲ್ಲಿ ಶ್ರೀ ಮಹೇಶ್ವರ ಸ್ವಾಮಿ ಜಾತ್ರಾ ಮಹೋತ್ಸವ ನಿಮಿತ್ತವಾಗಿ ಬೆಳಿಗ್ಗೆ ಮಹೇಶ್ವರ ಸ್ವಾಮಿಗೆ ವಿಶೇಷ ಅಭಿಷೇಕ, ಬಿಲ್ವಾರ್ಚನೆ, ಮಹಾಮಂಗಳಾರತಿ ನಂತರದಲ್ಲಿ ಪ್ರಸಾದ ವಿನಿಯೋಗ ನಡೆಯಿತು. ಈ ಸಂದರ್ಭದಲ್ಲಿ ಗೌಡ್ರು ಮಲ್ಲೇಶಪ್ಪ, ಟಿ.ಜೆ. ಮುರುಗೇಶಪ್ಪ, ಜಿ.ಕೆ. ವೀರಣ್ಣ, ಕಂಚಿಕೇರಿ ಕರಿಬಸಪ್ಪ, ಈಶ್ವರ ಗೌಡಗೇರಿ, ಮಹೇಂದ್ರ, ಶೇಖರ್ ಗೌಡ ಇತರರು ಹಾಜರಿದ್ದರು.


**ಸೈಟ್‌ಗಳು ಮಾರಾಟಕ್ಕಿವೆ**
ಸಿದ್ದವೀರಪ್ಪ ಬಡಾವಣೆಯಲ್ಲಿ 60x40 ಉತ್ತರ ಮನೆ ಮಾರಾಟಕ್ಕಿದೆ., ನಿಟುವಳ್ಳಿ 20x30 ಡುಪ್ಲೆಕ್ಸ್ ಮನೆ
ಧನ್ಯಕುಮಾರ ಶಾಮನೂರು 97415 62589
ಸ್ವಾಮಿ ಏಜೆಂಟ್, ವಿದ್ಯಾನಗರ 97421 44715

**ಮನೆ ಬಾಡಿಗೆಗೆ (ಇಂಡಿಪೆಂಡೆಂಟ್)**
ದಕ್ಷಿಣ, 3 BHK, 40x60 ಎಂ.ಸಿ.ಸಿ. 'ಬಿ' ಬ್ಲಾಕ್ ನಲ್ಲಿ.
ಕಿರಣ್ ಬೂಸ್ನೂರ್ (ಏಜೆಂಟ್)
97315-63409, 98440-63409
(ಮನೆ ಬಾಡಿಗೆಗೆ, ಲೀಸ್ ಗೆ ಬೇಕೇ ? ವಿಚಾರಿಸಿ)

**ಮನೆ ಮಾರಾಟಕ್ಕಿದೆ**
ಕುವೆಂಪು ಬಡಾವಣೆಯಲ್ಲಿ ಮಾವಿನ ತೋಪು ಆಸ್ಪತ್ರೆ ಹಿಂಭಾಗ, 40x60, North, 3 ಬೆಡ್ ರೂಂ ಮನೆ, ಇಂಡಿಪೆಂಡೆಂಟ್ ಹೌಸ್ ಇದೆ.
ಐನಳ್ಳಿ ಚನ್ನಬಸಪ್ಪ 99166 12110

**ಸೈಟ್‌ಗಳು ಮಾರಾಟಕ್ಕಿವೆ**
40x60 East ಜೆ.ಹೆಚ್. ಪಟೇಲ್ ಬಡಾವಣೆಯಲ್ಲಿ., 60x40 ಮಹಾಲಕ್ಷ್ಮಿ ಲೇಔಟ್‌ನಲ್ಲಿ ಕಾರ್ನರ್., 30x63 ಡಾಲರ್ಸ್ ಕಾಲೋನಿಯಲ್ಲಿ south west cornner.
ಐನಳ್ಳಿ ಚನ್ನಬಸಪ್ಪ 99166 12110

**3 BHK ಮನೆ ಬಾಡಿಗೆಗೆ ಇದೆ**
ದಾವಣಗೆರೆ ವಿದ್ಯಾನಗರ 2ನೇ ಬಸ್‌ಸ್ಟಾಪ್ ಹತ್ತಿರ, 2A ಮೇನ್, 8ನೇ ಕ್ರಾಸ್ ತರಳಬಾಳು ಬಡಾವಣೆಯಲ್ಲಿ ಮೊದಲನೇ ಮಹಡಿಯಲ್ಲಿ ಉತ್ತರಾಭಿಮುಖದ 3 ಬೆಡ್ ರೂಂ ಮನೆ ಬಾಡಿಗೆಗೆ ಇದೆ. ಬೋರ್, ಕಾರ್ಪೊರೇಷನ್ ನೀರು ಹಾಗೂ ಕಾರ್ ಪಾರ್ಕಿಂಗ್ ಸೌಲಭ್ಯವಿದೆ. ಆಸಕ್ತರು ಸಂಪರ್ಕಿಸಿ:
99026 88442

**ಬೇಕಾಗಿದ್ದಾರೆ**
ಪಿಯುಸಿ ಆಗಿರುವ ಹುಡುಗರು/ಹುಡುಗಿಯರು ಕೌಂಟರ್ ಸೇಲ್ಸ್‌ಮನ್ ಹುದ್ದೆಗೆ ಬೇಕಾಗಿದ್ದಾರೆ. ಆಸಕ್ತರು ಬಯೋಡಾಟಾ ಹಾಗೂ ಪರಿಚಯಸ್ಥರೊಂದಿಗೆ ಸಂಪರ್ಕಿಸಿ :
ಆರ್ಚೀಸ್ ಗ್ಯಾಲರಿ
ಶರಾವತಿ ಲೇಡೀಸ್ ಹಾಸ್ಟೆಲ್ ಎದುರು, ಮಾಮಾಸ್ ಜಾಯಿಂಟ್ ರಸ್ತೆ, ದಾವಣಗೆರೆ.
ಮೊ : 96324-33166
ಆಕರ್ಷಕ ವೇತನ ನೀಡಲಾಗುವುದು.

**ಸೈಟುಗಳು/ಮನೆಗಳು ಮಾರಾಟಕ್ಕಿವೆ**
ಶಿವಪಾರ್ವತಿ ಬಡಾವಣೆ $38\frac{1}{2}$×40 ಪಶ್ಚಿಮ, 30x50 ಪಶ್ಚಿಮ, 30x40 ಪಶ್ಚಿಮ, ಬಾಲಾಜಿ ಲೇಔಟ್ ನಲ್ಲಿ 30x50 ಪಶ್ಚಿಮ ಮನೆ, 30x40 ಪೂರ್ವ ಮನೆ, ನಿಜಲಿಂಗಪ್ಪ ಬಡಾವಣೆ 30x35 ಉತ್ತರ ಮನೆ, 30x40 ಪೂರ್ವ ಮನೆ.
ಕೊಡುವುದಕ್ಕೂ, ತೆಗೆದುಕೊಳ್ಳುವುದಕ್ಕೂ ಸಂಪರ್ಕಿಸಿ
ಸುರೇಶ್, 95911 60520
ಐಗೂರು ವಿಜಯ್‌ಕುಮಾರ್, 99457 02495

**ಬೇಕಾಗಿದ್ದಾರೆ**
ಪತ್ರಿಕಾ ಕಾರ್ಯಾಲಯದಲ್ಲಿ ಡಿ.ಟಿ.ಪಿ. ಆಪರೇಟರ್ ಕೆಲಸಕ್ಕೆ ಪುರುಷ ಹಾಗೂ ಮಹಿಳೆಯರು ಬೇಕಾಗಿದ್ದಾರೆ.
84949 49909

**ಸೈಟ್‌ಗಳು ಮಾರಾಟಕ್ಕಿವೆ**
ಶಿವಪಾರ್ವತಿ ಬಡಾವಣೆಯಲ್ಲಿ 30x46, 30x57 ಪೂರ್ವ, 30x52 ಪಶ್ಚಿಮ, ಜೆ.ಹೆಚ್. ಪಟೇಲ್ ಬಡಾವಣೆಯಲ್ಲಿ 30x52 ಪೂರ್ವ 40 ಅಡಿ ರಸ್ತೆಗೆ.
ಸ್ವಾಮಿ ಏಜೆಂಟ್, ವಿದ್ಯಾನಗರ 97421 44715

**ಸುವರ್ಣಾವಕಾಶ**
ಎಸ್ಸೆಸ್ಸೆಲ್ಸಿ, ಪಿಯುಸಿ, ಫೇಲಾದವರು ನೇರ ಬಿ.ಎ., ಎಂ.ಎ., ಬಿ.ಕಾಂ., ಎಂ.ಕಾಂ., ಬಿ.ಎಸ್ಸಿ., ಬಿ.ಎಡ್., ಎಂ.ಎಡ್., ಡಿಪ್ಲೋಮಾ, ಬಿ.ಟೆಕ್, ಎಂ.ಟೆಕ್ ಮುಂತಾದ ಕೋರ್ಸ್‌ಗಳನ್ನು ಪಾಸ್ ಮಾಡಲು ಸಂಪರ್ಕಿಸಿ
8296265995, 8971684391
ಬೆಳಿಗ್ಗೆ 10 ರಿಂದ ಸಂಜೆ 6 ರೊಳಗೆ

**ಡ್ಯೂಪ್ಲೆಕ್ಸ್ ಮನೆ ಮಾರಾಟಕ್ಕಿದೆ**
6BHK ಮನೆ 60x44 ವಿಸ್ತೀರ್ಣ, ಕಾರ್ ಪಾರ್ಕಿಂಗ್ ವ್ಯವಸ್ಥೆಯುಳ್ಳ, ಡ್ಯೂಪ್ಲೆಕ್ಸ್ ಮನೆ #1935/7, 10ನೇ ಕ್ರಾಸ್, ಸಿದ್ದವೀರಪ್ಪ ಬಡಾವಣೆಯಲ್ಲಿ ಮಾರಾಟಕ್ಕಿದೆ.
99007 00091

**ಬೇಕಾಗಿದ್ದಾರೆ**
ಕಂಪ್ಯೂಟರ್ ಆಪರೇಟರ್ ಬೇಕಾಗಿದ್ದಾರೆ. ಕೂಡಲೇ ಸಂಪರ್ಕಿಸಿ:
ಗಂಗಾವತಿ ಸಿಲ್ಕ್ ಸ್ಯಾರಿ ಸೆಂಟರ್
ಬಿನ್ನಿ ಕಂಪನಿ ರಸ್ತೆ, ದಾವಣಗೆರೆ-1

**ಬೇಕಾಗಿದ್ದಾರೆ**
ಬಟ್ಟೆ ಅಂಗಡಿ ಮತ್ತು ಗಾರ್ಮೆಂಟ್ಸ್‌ನಲ್ಲಿ ಕೆಲಸ ಮಾಡಲು ಗಂಡು ಮಕ್ಕಳು ಮತ್ತು ಹೆಣ್ಣು ಮಕ್ಕಳು ಬೇಕಾಗಿದ್ದಾರೆ.
ಮೊ. : 98863 79790

**ಮಳಿಗೆ ಬಾಡಿಗೆಗೆ ಇದೆ**
ವಿದ್ಯಾರ್ಥಿ ಭವನ ಹತ್ತಿರ ಹದಡಿ ರೋಡ್ ದಾವಣಗೆರೆ.
ಫೋ. : 84315 68521

**ಹಾಲ್ ಬಾಡಿಗೆಗಿದೆ**
800 sqft ಹಾಲ್, ಮೊದಲನೇ ಮಹಡಿ ಮಾಮಾಸ್ ಜಾಯಿಂಟ್ ರೋಡ್, ಎಂ.ಸಿ.ಸಿ. 'ಬಿ' ಬ್ಲಾಕ್,
94489 21346
82177 72482

**ಶಿಕ್ಷಕ/ಶಿಕ್ಷಕಿಯರು ಬೇಕಾಗಿದ್ದಾರೆ**
ಶ್ರೀಮಾತಾ ವಿದ್ಯಾಸಂಸ್ಥೆ (ರಿ.) ಆಶ್ರಯದಲ್ಲಿ ನಡೆಯುತ್ತಿರುವ ನಂದಗೋಕುಲ ಆಂಗ್ಲ ಮಾಧ್ಯಮ ಹಿರಿಯ ಪ್ರಾಥಮಿಕ ಹಾಗೂ ಪ್ರೌಢಶಾಲೆ, ದೇವರಾಜ ಅರಸ್ ಬಡಾವಣೆ 'ಸಿ' ಬ್ಲಾಕ್, ಆರ್.ಟಿ.ಓ. ಆಫೀಸ್ ಹಿಂಭಾಗ ದಾವಣಗೆರೆ, B.Sc., B.Ed., M.Sc., B.Ed, BA, B.Ed, MA, B.Ed ತರಬೇತಿ ಹೊಂದಿದ ಶಿಕ್ಷಕ/ಶಿಕ್ಷಕಿಯರು ಬೇಕಾಗಿದ್ದಾರೆ.
Mob. 99640 17729

**ಮನೆ ಲೀಜಿಗೆ ಇದೆ**
ಡಬಲ್ ಬೆಡ್ ರೂಂ, ನೆಲಮಹಡಿ ನದಿ ಹಾಗೂ ಬೋರ್‌ವೆಲ್ ನೀರಿನ ಸೌಲಭ್ಯ ಇದೆ. ಚಿಕ್ಕಮ್ಮಣಿ ದೇವರಾಜ್ ಅರಸ್ ಬಡಾವಣೆ, ಕೆ.ಇ.ಬಿ ಕಾಂಪೌಂಡ್ ಹಿಂಭಾಗ, ದಾವಣಗೆರೆ.
96111 21308
98457 89825, 86180 42740

**2 BHK ಮನೆ ಬಾಡಿಗೆಗೆ ಇದೆ**
ಮೊದಲನೆ ಮಹಡಿ, 4ನೇ ಮೇನ್, 7ನೇ ಕ್ರಾಸ್, ವಿನೋಬನಗರ, ದಾವಣಗೆರೆಯಲ್ಲಿ ಡಬಲ್ ಬೆಡ್ ರೂಂ ಮನೆ ಬಾಡಿಗೆಗೆ ಇದೆ. ಸಂಪರ್ಕಿಸಿರಿ :
98442 44811

**ಮನೆ ಬಾಡಿಗೆಗೆ ಇದೆ**
ಟಿ.ವಿ. ಸ್ಟೇಷನ್‌ಗೆ, ಸರ್.ಎಂ.ವಿ. ಕಾಲೇಜ್, ಶಶಿ ಸೋಪ್ ಫ್ಯಾಕ್ಟರಿಗೆ, ಹೈಟೆಕ್ ಆಸ್ಪತ್ರೆಗೆ ತುಂಬಾ ಹತ್ತಿರವಿರುವ ವಿಶಾಲವಾದ ಹಾಲ್, 2 ಬೆಡ್‌ರೂಂ, 2 ಬಾತ್‌ರೂಂ, ಸೋಲಾರ್, ಕಾರ್ ಪಾರ್ಕಿಂಗ್, ಸದಾ ನೀರಿನ ವ್ಯವಸ್ಥೆ, ವಾಸ್ತು ಪ್ರಕಾರವಿರುವ ಮನೆ ಕ್ಲೀನ್ ಆಗಿ ಮನೆ ಇಟ್ಟುಕೊಳ್ಳುವವರಿಗೆ, ಹಿಂದೂ ಜನಕ್ಕೆ, ಆರೋಗ್ಯವಂತರಿಗೆ ಮಾತ್ರ ವಿಚಾರಿಸಿ.
99865 38099, 99806 11110

**ಶ್ರೀ ಮೃತ್ಯುಂಜಯ ಸ್ಕೂಲ್ ಆಫ್ ನರ್ಸಿಂಗ್ & ಇನ್‌ಸ್ಟಿಟ್ಯೂಟ್ ಆಫ್ ಪ್ಯಾರಾಮೆಡಿಕಲ್ ಸೈನ್ಸಸ್**
ಪ್ರವೇಶ ಪ್ರಾರಂಭ :
ಜಿ.ಎನ್.ಎಂ. (GNM), ಲ್ಯಾಬ್ (LAB), ಹೆಲ್ತ್ (Health) ಓಟಿ (OT)
ಪಿ.ಜೆ. ಬಡಾವಣೆ, ದಾವಣಗೆರೆ.
97432 10028, 94488 73558

**ಬೇಕಾಗಿದ್ದಾರೆ**
ಹೋಟೆಲ್ ಕೆಲಸಕ್ಕೆ ಹುಡುಗರು ಮತ್ತು ಮಧ್ಯ ವಯಸ್ಕರು ಬೇಕಾಗಿದ್ದಾರೆ. ವಿಚಾರಿಸಿ:
99646 36217

**SITE Lease or Rent**
Site No 14,15,16 at jayanagar Badavane Near Shiradi Saibaba Temple.
94489 66264
82774 81291

**House For Rent Long Term & Short Term Available**
with all Amenities cot, bed, fan, light, UPS, internet, T.V, Dining table, Geyser, Kitchen, Stove, Gas etc.
94800 73451

**ಬೇಕಾಗಿದ್ದಾರೆ**
ಟೆಲಿಕಾಲರ್ ಮಹಿಳೆಯರು, ಸಹಾಯಕ ಮಹಿಳೆಯರು ಬೇಕಾಗಿದ್ದಾರೆ.
ಫೋ. : 74830 88761

**ಬೇಕಾಗಿದ್ದಾರೆ**
ಅಂಗಡಿಯಲ್ಲಿ ಕೆಲಸ ಮಾಡಲು 18 ರಿಂದ 30 ವರ್ಷದೊಳಗಿನ ಹುಡುಗರು ಬೇಕಾಗಿದ್ದಾರೆ. ಸಂಪರ್ಕಿಸಿ :
ಪ್ರಕಾಶ ಟಿ.ವಿ. ಸೆಂಟರ್
ಕುರುಬರ ಹಾಸ್ಟೆಲ್ ಎದುರು, ಶ್ರೀ ಮುರುಘರಾಜೇಂದ್ರ ಕಾಂಪ್ಲೆಕ್ಸ್, ಹದಡಿ ರಸ್ತೆ, ದಾವಣಗೆರೆ.

**ಹುಡುಗರು ಬೇಕಾಗಿದ್ದಾರೆ**
ಮರದ ಅಂಗಡಿಯಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ. ದಿನಕ್ಕೆ ರೂ. 300/- ಸಂಬಳ. ಆಸಕ್ತಿ ಇರುವವರು
ಶ್ರೀ ದುರ್ಗಾಶ್ರೀ ಟಿಂಬರ್, ನ್ಯೂ ಬಂಬೂ ಬಜಾರ್, ಆರ್.ಎಂ.ಸಿ. ರೋಡ್, ದಾವಣಗೆರೆ -01 ಗೆ ಸಂಪರ್ಕಿಸಿ :
88844 45445, 99160 78615, 98442 10443

**Coding and decoding classes**
2nd std to 5th std
Bruit abacus and vedic maths
Mob: 96201 53806

**Wanted Teachers**
(Ladies only)
1) Engalish 01 Post B.A B.Ed English Major
2) Maths 01 Post B.Sc. B.Ed
Contact No:
95358 85997

**ಮಹಿಳೆ ಬೇಕಾಗಿದ್ದಾರೆ**
ಮನೆ ಕೆಲಸ ಮಾಡಿಕೊಂಡು ಹಗಲು ಅಥವಾ ರಾತ್ರಿ ಅಥವಾ 24 ಗಂಟೆಯೂ ವಯಸ್ಸಾದವರನ್ನು ನೋಡಿಕೊಳ್ಳಲು ಹೆಣ್ಣುಮಕ್ಕಳು ಬೇಕಾಗಿದ್ದಾರೆ. *ಸಂಪರ್ಕಿಸಿ :*
98440-63507

**ಮನೆ ಮಾರಾಟಕ್ಕೆ ಇದೆ**
1200 Sqft, ಹೊಂಡದ ರೋಡ್, ಮೇನ್ ರೋಡ್ ಪಶ್ಚಿಮ ದಿಕ್ಕಿನ 3 ಅಂತಸ್ತಿನ ಮನೆ ಸುರಭಿ ಆಸ್ಪತ್ರೆ ಪಕ್ಕ ಮಾರಾಟಕ್ಕಿದೆ.
ಸಂಪರ್ಕಿಸಿ:
99640 23807
79753 33605

**ಜಾಗ ಮಾರಾಟಕ್ಕಿದೆ**
ದಾವಣಗೆರೆ ಮುದ್ದಳ್ಳಿ ತೋಟ, ಪೊಲೀಸ್ ಪೆರೇಡ್ ಗ್ರೌಂಡ್ ಎದುರು 12.8 ಗುಂಟೆ ಜಾಗ ಮಾರಾಟಕ್ಕಿದೆ. ಸಂಪರ್ಕಿಸಿ:
87109 64433

**WANTED**
Working Pharmasist
Qualification : D.Pharma, B.Pharma,
Age : Below 30 Years, Salary Scale: 12000 to 16000
Contact
90355 03140

**ಬಾಡಿಗೆಗೆ ಇದೆ**
ದಾವಣಗೆರೆ ಪಿ.ಬಿ. ರಸ್ತೆ ಅರುಣ ಸರ್ಕಲ್ ಹತ್ತಿರ ಮೊದಲನೇ ಮಹಡಿಯಲ್ಲಿ ಅಟ್ಯಾಚ್ಡ್ ಬಾತ್ ರೂಂವುಳ್ಳ ಕಚೇರಿಗೆ ಅನುಕೂಲವಾದ ಹಾಲ್ ಬಾಡಿಗೆಗೆ ಇದೆ.
97407 40315
90601 65011

**ಬೇಕಾಗಿದ್ದಾರೆ**
ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡಲು ಅನುಭವವುಳ್ಳ Sales girls / Sales boys ಬೇಕಾಗಿದ್ದಾರೆ.
ಸಂಪರ್ಕಿಸಿ:
ಗಂಗಾವತಿ ಸಿಲ್ಕ್ ಸ್ಯಾರಿ ಸೆಂಟರ್
ಬಿನ್ನಿ ಕಂಪನಿ ರಸ್ತೆ, ದಾವಣಗೆರೆ-1

**ಮಾರ್ಕೆಟಿಂಗ್ ಮಾಡಲು ಯುವಕರು ಬೇಕಾಗಿದ್ದಾರೆ**
ಸಂಬಳ 10,000/- ದಿಂದ 15,000/-
ಫೋ. 08192-231951
231953

**ಹೆಸರು ಬದಲಾವಣೆ**
ನಾನು ಶ್ರೀಮತಿ ಎಂ.ಈರಮ್ಮ ಮುತ್ತಿಗಿ ಕೋಂ ಜಗದೀಶ್ ಜಿ.ಟಿ., ಕೇರಾಫ್ ಮುನಿಯಪ್ಪ ಮುತ್ತಿಗಿ, ಬಸವ ಬುದ್ದ ಭೀಮ ನಗರ, ಇಂಡಸ್ಟ್ರಿಯಲ್ ಏರಿಯಾ, ದಾವಣಗೆರೆ ವಾಸಿಯಾಗಿದ್ದು ನನ್ನ ಹೆಸರನ್ನು ಸ್ವ ಇಚ್ಛೆಯಿಂದ ಶ್ರೀಮತಿ ನಂದಿನಿ ಜೆ. ಎಂದು ದಾವಣಗೆರೆ ನೋಟರಿಯವರ ಸಮ್ಮುಖದಲ್ಲಿ ದಿ: 5-1-2021ರಂದು ಬದಲಾಯಿಸಿಕೊಂಡಿರುತ್ತೇನೆ. ಇನ್ನು ಮುಂದೆ ನಾನು ನನ್ನ ಬದಲಾದ ನಂದಿನಿ ಜೆ.ಹೆಸರಿನಿಂದ ವ್ಯವಹರಿಸುತ್ತೇನೆ.
ಶ್ರೀಮತಿ ನಂದಿನಿ ಜೆ.

**'ನೋನಿ' ಜ್ಯೂಸ್ ಹಾಗೂ ಆಯುರ್ವೇದ ಔಷಧಿಗಳು**
ರಿಯಾಯಿತಿ ದರದಲ್ಲಿ ದೊರೆಯುತ್ತವೆ
Free Home Delivery
80954 56388
80738 29135

**ಬೇಕಾಗಿದ್ದಾರೆ**
ಲಾಡ್ಜ್‌ನಲ್ಲಿ ಹಗಲು ಮತ್ತು ರಾತ್ರಿ ಪ್ರತ್ಯೇಕ ಪಾಳೆಯಗಳಲ್ಲಿ ರೂಂ ಬಾಯ್ ಮತ್ತು ಸೂಪರ್‌ವೈಸರ್ ಕೆಲಸಕ್ಕೆ ಬೇಕಾಗಿದ್ದಾರೆ. *ಸಂಪರ್ಕಿಸಿ :*
98440-63507

**REQUIRED**
Manager, Computer Knowledge Fluency in English
Marketing Executive, 1 Year Experience
Any Degree + own Vehicle, Salary 10,000+ Incentive. Two Years Agriment.
Contact : 88844 45445
nitheskc90@gmail.com

**LOOKING FOR DATA ENTRY EXECUTIVES**
Eligibility : PUC / degree or engineering
Skills : basic English communication, excel, browsing, email handling
Shift : day & night shift
Location : E-Mark Technologies, Davangere
Contact :
099647 93273
099642 45723

ಶ್ರೀ ಗುರು ಶಾಂತವೀರೇಶ್ವರ ಸೇವಾ ಸಮಿತಿ (ರಿ.)
**ವೀರಶೈವ/ಲಿಂಗಾಯಿತ ವಧು-ವರರ ಅನ್ವೇಷಣಾ ಕೇಂದ್ರ**
(ಕಳೆದ 21ನೇ ವರ್ಷಗಳ ಸೇವೆಯಲ್ಲಿ)
www.lingayathweds.com
ದಾವಣಗೆರೆ, ಶಿವಮೊಗ್ಗ, ಸಾಗರ ಬೆಂಗಳೂರು ಹಾಗೂ 10 ಶಾಖಾ ಕಛೇರಿ ಹೊಂದಿರುವ ನಮ್ಮಲ್ಲಿ ಎಲ್ಲಾ ತರಹದ ವೀರಶೈವ ವಧು-ವರರಿಗಾಗಿ ಸಂಪರ್ಕಿಸಿ.
ವಿಳಾಸ : ಸಿದ್ದವೀರಪ್ಪ ಬಡಾವಣೆ, ದಾವಣಗೆರೆ.
ಮೊ: 95135 79130, 80509 52637

**ಮದ್ಯವ್ಯಸನಿಗೆ ಅರಿವಿಲ್ಲದಂತೆ ಮದ್ಯ ಸೇವನೆ ಬಿಡಿಸಿರಿ**
ಪ್ರತಿ ತಿಂಗಳು 7ಮತ್ತು 21ನೇ ತಾರೀಖು ಜನತಾ ಡೀಲಕ್ಸ್ ಲಾಡ್ಜ್, ಕೆ.ಎಸ್.ಆರ್.ಟಿ.ಸಿ. ಹೊಸ ಬಸ್ ಸ್ಟ್ಯಾಂಡ್ ಎದುರು, ದಾವಣಗೆರೆ.
4 ಮತ್ತು 18ರಂದು ಕಾವೇರಿ ಲಾಡ್ಜ್, ಪೂನಾ - ಬೆಂಗಳೂರು ರೋಡ್, ಹಾವೇರಿ.
ಅಸ್ತಮಾ, ಕೀಲು ನೋವು
ಡಾ॥ ಎಸ್.ಎಂ. ಸೇಠಿ. ಫೋನ್ : 96322 95561
ಸಮಯ: ಬೆಳಿಗ್ಗೆ 10ರಿಂದ ಮಧ್ಯಾಹ್ನ 2 ರವರೆಗೆ.

**Simple vaastu**
ಸಿಂಪಲ್ ವಾಸ್ತು
98444 88838

**100% Result**
ನಿಮ್ಮ ಮಗ/ಮಗಳು SSLC/PUC ವಿದ್ಯಾಭ್ಯಾಸ ಮಾಡುತ್ತಿದ್ದು ಅವರಿಗೆ Mathematics/Physics ಅರ್ಥವಾಗುತ್ತಿಲ್ಲವೇ ಹಾಗಿದ್ದರೆ ನಮ್ಮನ್ನು ಸಂಪರ್ಕಿಸಿ. ನಾವು ನಿಮ್ಮ ಮನೆಗೇ ಬಂದು ನಿಮ್ಮ ಮಗುವಿಗೆ ಅರ್ಥವಾಗುವ ತರಹ ಹೇಳಿಕೊಟ್ಟು ನಿಮ್ಮ ಮಗುವಿನ ಕಡೆಯಿಂದ 100% ಫಲಿತಾಂಶ ಕೊಡಿಸುತ್ತೇವೆ.
76761 28466


**ಸಂಘ ಸಂಸ್ಥೆಗಳ, ಟ್ರಸ್ಟ್, GST ರಿಜಿಸ್ಟ್ರೇಷನ್ & ನವೀಕರಣ, ಆಡಿಟ್ ಮಾಡಿಕೊಡುತ್ತೇವೆ.**
94838 62779

**ನೇರ ಪರೀಕ್ಷೆಗಳು**
ಉನ್ನತ ಶಿಕ್ಷಣಕ್ಕೆ ಮತ್ತು ಸರ್ಕಾರಿ ಕೆಲಸಕ್ಕೆ ಉಪಯೋಗ
S.S.L.C., PUC, Technical & Non Technical Courses, Pharmacy & BHMS (Goverment & Private College)
ಶ್ರೀ ಸಾಯಿ ಕರೆಸ್ಪಾಂಡೆನ್ಸ್ ಕಾಲೇಜ್
ರಾಂ ಅಂಡ್ ಕೋ ಸರ್ಕಲ್, ಸೋಮ ಮೆಡಿಕಲ್ಸ್ ಮೇಲೆ ಗಣೇಶ ದೇವಸ್ಥಾನದ ಹಿಂಭಾಗ, ದಾವಣಗೆರೆ.
87490 24789, 94837 64859, 87620 58369
82173 02649, 80507 27467

**ಅಧಿಕೃತ ಚೀಟಿ ಸಂಸ್ಥೆ**
ರೂ.5 ಲಕ್ಷದ ಚೀಟಿ ಪ್ರಾರಂಭ.
ತಿಂಗಳ ಕಂತು 10,000/- ದಿಂದ 6,500/- ಮಾತ್ರ
ಸ್ಕಂದ ಚಿಟ್ ಫಂಡ್ಸ್ (ರಿ) ದಾವಣಗೆರೆ-02
84531 61869


ಮಾಸ್ಕ್ ಬಳಸಿ ಕೊರೊನಾ ತೊಲಗಿಸಿ

## 'ಕೃಷಿ ಬಿಕ್ಕಟ್ಟು ಮತ್ತು ಸವಾಲುಗಳು' : ಹರಪನಹಳ್ಳಿಯಲ್ಲಿ ಇಂದು ಸಂವಾದ



ಮಾನವ ಬಂಧುತ್ವ ವೇದಿಕೆ ಬಳ್ಳಾರಿ ಜಿಲ್ಲಾ ಘಟಕ ಹಾಗೂ ಹರಪನಹಳ್ಳಿ ತಾಲ್ಲೂಕು ಘಟಕಗಳ ಸಂಯುಕ್ತಾಶ್ರಯದಲ್ಲಿ ಹರಪನಹಳ್ಳಿಯಲ್ಲಿ ಇಂದು ಮಧ್ಯಾಹ್ನ 2.30 ಕ್ಕೆ ಶ್ರೀಕ್ಷೇತ್ರ ತೆಗ್ಗಿನಮಠದ ಟಿಎಂಎಇ ಸಭಾಂಗಣದಲ್ಲಿ 'ಕೃಷಿ ಬಿಕ್ಕಟ್ಟು ಮತ್ತು ಸವಾಲುಗಳು' ವಿಷಯ ಕುರಿತು ಸಂವಾದ ಗೋಷ್ಠಿಯನ್ನು ಹಮ್ಮಿಕೊಳ್ಳಲಾಗಿದೆ.

ದೇಶದ ಕೃಷಿ ವಲಯದಲ್ಲಿ ಆಗುತ್ತಿರುವ ವ್ಯಾಪಾರೀಕರಣ ಮತ್ತು ಕೇಂದ್ರ ಸರ್ಕಾರದ ಕೃಷಿ ಸಂಬಂಧಿ ಕಾನೂನುಗಳಲ್ಲಿನ ರೈತ ವಿರೋಧಿ ನೀತಿಗಳ ಕುರಿತಾಗಿ ಚಿಂತನ-ಮಂಥನ ನಡೆಸುವ ಸಂಬಂಧ ನಡೆಯುತ್ತಿರುವ ಸಂವಾದ ಗೋಷ್ಠಿಯಲ್ಲಿ ವೇದಿಕೆ ಸಂಸ್ಥಾಪಕ ಹಾಗೂ ಕೆಪಿಸಿಸಿ ಕಾರ್ಯಾಧ್ಯಕ್ಷ ಸತೀಶ್ ಜಾರಕಿಹೊಳಿ ಪಾಲ್ಗೊಂಡು ರೈತರು, ಕಾರ್ಮಿಕರು, ಯುವಜನತೆ ಹಾಗೂ ವಿದ್ಯಾರ್ಥಿ ಮುಖಂಡರೊಂದಿಗೆ ಸಂವಾದ ನಡೆಸಲಿದ್ದಾರೆ ಎಂದು ವೇದಿಕೆ ಜಿಲ್ಲಾ ಸಂಚಾಲಕ ಇರ್ಫಾನ್ ಮುದಗಲ್ ಹಾಗೂ ತಾಲ್ಲೂಕು ಸಂಚಾಲಕ ಟಿ.ಮಂಜುನಾಥ ತಿಳಿಸಿದ್ದಾರೆ.

## ಹರಪನಹಳ್ಳಿ : ಕುರುಬ ನೌಕರರ ಸಂಘದಿಂದ ಪ್ರತಿಭಾ ಪುರಸ್ಕಾರ

ಹರಪನಹಳ್ಳಿ, ಜ.5- ತಾಲ್ಲೂಕು ಕುರುಬ ನೌಕರರ ಸಂಘದ ವತಿಯಿಂದ ದಾಸಶ್ರೇಷ್ಠ ಶ್ರೀ ಕನಕದಾಸರ 533ನೇ ಜಯಂತ್ಯೋತ್ಸವದ ಅಂಗವಾಗಿ ಪಟ್ಟಣದ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಕಛೇರಿಯಲ್ಲಿ ಇದೇ ದಿನಾಂಕ 9 ರಂದು ಬೆಳಿಗ್ಗೆ 11 ಘಂಟೆಗೆ ಎಸ್ಸೆಸ್ಸೆಲ್ಸಿ ಮತ್ತು ಪಿಯುಸಿಯಲ್ಲಿ ಶೇ. 85 ಕ್ಕೂ ಹೆಚ್ಚು ಅಂಕ ಗಳಿಸಿ ಉತ್ತೀರ್ಣರಾದ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ತಾಲ್ಲೂಕು ಕುರುಬ ಸಮಾಜದ ವಿದ್ಯಾರ್ಥಿಗಳು ಇದೇ ದಿನಾಂಕ 8 ರೊಳಗೆ ಸಂಘಕ್ಕೆ ಅರ್ಜಿ ಸಲ್ಲಿಸಲು ಸಂಘದ ಅಧ್ಯಕ್ಷ ಎಸ್. ರಾಮಪ್ಪ (97405 92278), ಉಪಾಧ್ಯಕ್ಷ ಸಿದ್ದಪ್ಪ ಹರಿಂದ್ರಾಳ್ (9731833109) ತಿಳಿಸಿದ್ದಾರೆ.

## ನಗರಕ್ಕೆ ಇಂದು ಸಚಿವ ಈಶ್ವರಪ್ಪ

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಕೆ.ಎಸ್. ಈಶ್ವರಪ್ಪ ಇಂದು ನಗರಕ್ಕೆ ಆಗಮಿಸಲಿದ್ದಾರೆ. ಬೆಳಿಗ್ಗೆ 10 ಗಂಟೆಗೆ ನಗರಕ್ಕೆ ಆಗಮಿಸಿ, ಸ್ಥಳೀಯ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳುವರು. ಸಂಜೆ 4 ಗಂಟೆಗೆ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಆಯೋಜಿಸಲಾಗಿರುವ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಕಾರ್ಯಕ್ರಮ ಮತ್ತು ಯೋಜನೆಗಳ ಪ್ರಗತಿ ಪರಿಶೀಲನಾ ಸಭೆಯಲ್ಲಿ ಪಾಲ್ಗೊಳ್ಳುವರು.

## ಹರಿಹರದಲ್ಲಿ ಇಂದು ವಿದ್ಯುತ್ ಇಲ್ಲ

ಜೀಜಾ ಮಾತಾ ಕಾಲೋನಿ, ಆಶ್ರಯ ಕಾಲೋನಿ, ಕೆ. ಆರ್. ನಗರ, ವಿಜಯನಗರ, ಪಟೇಲ್ ಬಡಾವಣೆ, ಸುತ್ತ ಮುತ್ತ ಪ್ರದೇಶ, ಬಸ್ ಸ್ಟ್ಯಾಂಡ್ ಏರಿಯಾ, ಭರಂಪುರ, ಇಂಡ ಸ್ಟ್ರಿಯಲ್ ಏರಿಯಾ, ಹಂಸಾಗರ ಕಾಂಪೌಂಡ್, ಮಜ್ಜಿಗೆ ಬಡಾವಣೆ, ವಿವೇಕಾ ನಂದ ನಗರ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ಇಂದು ಬೆಳಿಗ್ಗೆ 10 ರಿಂದ ಸಂಜೆ 6 ರವರೆಗೆ ವಿದ್ಯುತ್ ಇರುವುದಿಲ್ಲ.

## ಹರಿಹರಕ್ಕೆ ನಾಳೆ ಕಾರಜೋಳ

ದಾವಣಗೆರೆ, ಜ.5- ಉಪಮುಖ್ಯಮಂತ್ರಿಗಳು ಹಾಗೂ ಲೋಕೋಪಯೋಗಿ ಇಲಾಖೆ ಸಚಿವ ಗೋವಿಂದ ಎಂ.ಕಾರಜೋಳ ಅವರು ನಾಳೆ ದಿನಾಂಕ 7 ರ ಗುರುವಾರ ನಗರಕ್ಕಾಗ ಮಿಸಲಿದ್ದು, ಅಂದು ಬೆಳಿಗ್ಗೆ 9 ಕ್ಕೆ ದಾವಣಗೆರೆ ವಿಭಾಗದ ವ್ಯಾಪ್ತಿಯಲ್ಲಿ ಬರುವ ಲೋಕೋಪಯೋಗಿ ಇಲಾಖೆಯ ವಿವಿಧ ಕಾಮಗಾರಿಗಳ ಪ್ರಗತಿ ಪರಿಶೀಲನಾ ಸಭೆಯಲ್ಲಿ ಭಾಗವಹಿಸುವರು.

ಬೆಳಿಗ್ಗೆ 11.30ಕ್ಕೆ ಹರಿಹರದಲ್ಲಿ ನಡೆಯುವ ಸಮಾರಂಭವೊಂದರಲ್ಲಿ ಭಾಗವಹಿಸುವರು.

# ಹಸಿರು ನಗರ, ಜಿಲ್ಲೆಯ ಸುಸ್ಥಿರ ಅಭಿವೃದ್ಧಿ

## ಜೀವವೈವಿಧ್ಯ ಮಂಡಳಿ ಅಧ್ಯಕ್ಷ ಅನಂತ ಹೆಗಡೆ ಆಶೀಸರ ಆಶಯ

ದಾವಣಗೆರೆ, ಜ. 5 - ಸ್ಮಾರ್ಟ್ ಸಿಟಿ ಎಂದರೆ ಸಿಮೆಂಟ್, ಕಬ್ಬಿಣದ ಕಟ್ಟಡಗಳ ನಿರ್ಮಾಣವಲ್ಲ. ಅದು ನೈಜವಾಗಿ ಹಸಿರಿನಿಂದ ಕೂಡಿರುವ ನಗರ ಎಂದು ರಾಜ್ಯ ಜೀವ ವೈವಿಧ್ಯ ಮಂಡಳಿಯ ಅಧ್ಯಕ್ಷ ಅನಂತ ಹೆಗಡೆ ಆಶೀಸರ ಹೇಳಿದರು.

ಮಂಗಳವಾರ ಜಿಲ್ಲಾಡಳಿತ ಕಚೇರಿ ಸಭಾಂಗಣದಲ್ಲಿ ಏರ್ಪಡಿಸಲಾಗಿದ್ದ ಅರಣ್ಯ ಪರಿಸರ ಮತ್ತು ಜೀವ ವೈವಿಧ್ಯ ಸಂರಕ್ಷಣೆ ಕುರಿತಾದ ಅಧಿಕಾರಿಗಳ ಸಭೆಯಲ್ಲಿ ಮಾತನಾಡಿದ ಅವರು, ಜೀವ ವೈವಿಧ್ಯತೆಗೆ ಪೂರಕವಾಗಿ ಬಯೋಗ್ಯಾಸ್ ತಯಾರಿಸುವ ಘಟಕಗಳನ್ನು ನಿರ್ಮಿಸಲು ಈಗಾಗಲೇ ತರಬೇತಿ ನೀಡಲಾಗಿದೆ. ಇದರಿಂದ ತ್ಯಾಜ್ಯ ವಿಲೇವಾರಿ ಸುಲಭವಾಗಲಿದ್ದು, ಸಾಕಷ್ಟು ಇಂಧನ ಕೂಡ ದೊರೆಯಲಿದೆ. ಹೋಟೆಲ್‌ಗಳು, ಹಾಸ್ಟೆಲ್‌ಗಳು, ಕಲ್ಯಾಣ ಮಂಟಪಗಳಲ್ಲಿ ಉಳಿಯುವ ತ್ಯಾಜ್ಯಗಳಿಂದ ಬಯೋಗ್ಯಾಸ್ ಉತ್ಪಾದಿಸುವುದರಿಂದ ಪರಿಸರ ರಕ್ಷಣೆಗೂ ಅನುಕೂಲವಾಗಲಿದೆ ಎಂದರು. ಜಿಲ್ಲೆಯ ಸುಸ್ಥಿರ ಅಭಿವೃದ್ಧಿಗೆ ಹಾಗೂ ನೈಸರ್ಗಿಕ ಸಂಪನ್ಮೂಲ ರಕ್ಷಣೆಗೆ ಜಿಲ್ಲಾ, ತಾಲ್ಲೂಕು ಹಾಗೂ ಗ್ರಾಮ ಪಂಚಾಯ್ತಿ ಮಟ್ಟಗಳಲ್ಲಿ ಈಗಾಗಲೇ ರಚನೆಯಾಗಿರುವ ಸಮಿತಿಗಳು ಕಾರ್ಯ ಚಟುವಟಿಕೆ ನಡೆಸುತ್ತಿದ್ದು, ವರದಿ ಕೂಡ ನೀಡಿವೆ. ಈ ಕೆಲಸಗಳು ಮತ್ತಷ್ಟು ಪರಿಣಾಮಕಾರಿಯಾಗಿ ಆಗಬೇಕು ಎಂದರು.

ಮೇ 22 ನ್ನು ಜೀವ ವೈವಿಧ್ಯ ದಿನವನ್ನಾಗಿ ಎಲ್ಲೆಡೆ ಆಚರಿಸುವ ಮೂಲಕ ಆ ವರ್ಷದಲ್ಲಿ ಏನೇನು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕೆಂಬ ನೀಲನಕ್ಷೆಯನ್ನು ತಯಾರಿಸಿಕೊಂಡು ಜೀವ ವೈವಿಧ್ಯ ತಾಣಗಳನ್ನು ಪಂಚಾಯಿತಿ ಹಂತದಲ್ಲಿಯೇ ಗುರುತಿಸಿ ಸ್ಥಳೀಯ ಬೆಟ್ಟ, ಗುಡ್ಡ, ಕೆರೆಗಳನ್ನು ಅಭಿವೃದಿಪಡಿಸುವ ಮೂಲಕ ಜೀವ ವೈವಿಧ್ಯ ತಾಣಗಳನ್ನಾಗಿ ಮಾಡಬಹುದಾಗಿದೆ.

ಕೃಷಿ ಚಟುವಟಿಕೆಗಳಿಗೆ ಹೆಚ್ಚಾಗಿ ಕೀಟ ನಾಶಕಗಳನ್ನು ಬಳಸುವುದರಿಂದ ಪರಿಸರದ ಮೇಲೆ ದುಷ್ಪರಿಣಾಮವಾಗುತ್ತಿದ್ದು, ಕೃಷಿ ಅಧಿಕಾರಿಗಳು ಈ ಬಗ್ಗೆ ಗಮನ ಹರಿಸಬೇಕು. ನಿಷೇಧಿತ ಕೀಟನಾಶಕಗಳು ಅಂಗಡಿಗಳಲ್ಲಿ ಮಾರಾಟವಾಗದಂತೆ ಹಾಗೂ ನಿಷೇಧಿತ ಕೀಟ ನಾಶಕಗಳು ಬೇರೆ ಬ್ರಾಂಡ್ ಹಾಗೂ ಬೇರೆ ಹೆಸರುಗಳಿಂದ ಮಾರುಕಟ್ಟೆಗೆ ಬರದಂತೆ ಅಧಿಕಾರಿಗಳು ಎಚ್ಚರ ವಹಿಸಬೇಕು ಎಂದು ಸೂಚಿಸಿದರು.

ಜಿಲ್ಲಾಧಿಕಾರಿ ಮಹಾಂತೇಶ ಬೀಳಗಿ ಮಾತನಾಡಿ, ಜಿಲ್ಲೆ ಹಾಗೂ ತಾಲ್ಲೂಕು ಮಟ್ಟದಲ್ಲಿ ಸಮಿತಿಗಳನ್ನು ರಚಿಸಿದ್ದು, ಜೀವ ವೈವಿಧ್ಯ ದಾಖಲಾತಿ ಪೂರ್ಣಗೊಂಡಿದೆ. ಜಿಲ್ಲೆಯಲ್ಲಿ ಸಾಕಷ್ಟು ಜೀವ ವೈವಿಧ್ಯ ಹಾಟ್‌ಸ್ಪಾಟ್‌ಗಳಿದ್ದು, ಕೊಮಾರನಹಳ್ಳಿ ಗುಡ್ಡ ಅತ್ಯಂತ ಮೌಲ್ಯಯುತ ಜೀವ ವೈವಿಧ್ಯವನ್ನು ಹೊಂದಿದೆ. ಈ ಹಿಂದಿನ ವರ್ಷಗಳಲ್ಲಿ ಸಾಕಷ್ಟು ಗಿಡಮರಗಳು ಕಂಡು ಬರುತ್ತಿದ್ದ ಗುಡ್ಡದಲ್ಲಿ ಇತ್ತೀಚಿನ ದಿನಗಳಲ್ಲಿ ಜೋಳದ ಬೆಳೆ ಕಂಡುಬರುತ್ತಿದೆ. ಹಾಗಾಗಿ ಈ ಪ್ರದೇಶವನ್ನು ಸಂರಕ್ಷಣೆ ಮಾಡಬೇಕಾಗಿದೆ ಎಂದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಹನುಮಂತರಾಯ ಮಾತನಾಡಿ, ದಾವಣಗೆರೆ ಸಮೀಪವಿರುವ ಬಾತಿ ಗುಡ್ಡವನ್ನು ಅಭಿವೃದ್ದಿಪಡಿಸಿದರೆ ತುಮಕೂರಿನ ಸಿದ್ದರ ಬೆಟ್ಟದಂತೆ ಅಭಿವೃದ್ದಿಪಡಿಸಬಹುದಾಗಿದೆ. ಮಲೇಬೆನ್ನೂರು ಪೊಲೀಸ್ ಠಾಣೆಯ ಆವರಣದಲ್ಲಿ 10 ಎಕರೆ ಪ್ರದೇಶವಿದ್ದು, ಈಗಾಗಲೇ ಅಲ್ಲಿನ ಸಿಬ್ಬಂದಿ ಔಷಧೀಯ ಸಸ್ಯಗಳನ್ನು ಬೆಳೆಸಿದ್ದಾರೆ ಎಂದು ಹೇಳಿದರು.

ಜಿ.ಪಂ ಸಿಇಓ ಪದ್ಮಾ ಬಸವಂತಪ್ಪ ಮಾತನಾಡಿ, ಜಿಲ್ಲೆಯ ಎಲ್ಲಾ ಗುಡ್ಡಗಳ ಸುತ್ತ ಟ್ರಂಚ್ ನಿರ್ಮಿಸಿ, ಅದರ ಬದುಗಳ ಮೇಲೆ ಗಿಡಗಳನ್ನು ಬೆಳೆಸಲಾಗುತ್ತಿದೆ. ಜಗಳೂರು ಹೊರ ವಲಯದಲ್ಲಿ ಹೆಚ್ಚಿನ ಅರಣ್ಯೀಕರಣ ಆಗುತ್ತಿದೆ. ಚನ್ನಗಿರಿಯ ದಾಗಿನಕಟ್ಟೆ, ದಿದ್ದಿಗಿ, ಹರಿಹರದ ಸಾರಥಿ ಈ ಪ್ರದೇಶಗಳಲ್ಲಿ ಹಸಿರನ್ನು ಕಾಪಾಡಿ, ನರೇಗಾ ಯೋಜನೆಯಡಿ ಹೆಚ್ಚು ಗಿಡಗಳನ್ನು ಬೆಳೆಸಲಾಗುತ್ತಿದೆ. ಕೇಂದ್ರ ಸರ್ಕಾರದ ದೀನ್ ದಯಾಳ್ ಮಿಷನ್ ಅಡಿಯಲ್ಲಿ ಜಿಲ್ಲೆಯಲ್ಲಿ ಹೆಚ್ಚಿರುವ ಅರಣ್ಯ ಪ್ರದೇಶವನ್ನು ಗುರುತಿಸಿ, ಜಿಲ್ಲಾ ಪಂಚಾಯ್ತಿಗೆ ಪ್ರಶಸ್ತಿ ದೊರೆತಿದೆ ಎಂದರು.

ಸಭೆಯಲ್ಲಿ ಅಪರ ಜಿಲ್ಲಾಧಿಕಾರಿ ಪೂಜಾರ ವೀರಮಲ್ಲಪ್ಪ, ಮಹಾನಗರಪಾಲಿಕೆ ಆಯುಕ್ತ ವಿಶ್ವನಾಥ ಮುದಜ್ಜಿ, ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕಿ ನಜ್ಮಾ, ಜಿಲ್ಲಾ ಕೃಷಿ ಜಂಟಿ ನಿರ್ದೇಶಕ ಶ್ರೀನಿವಾಸ್ ಚಿಂತಾಲ್ ಹಾಗು ವಿವಿಧ ಇಲಾಖೆಗಳ ಅಧಿಕಾರಿಗಳು ಹಾಜರಿದ್ದರು.

> "ಕುಂದುವಾಡ ಕೆರೆಯು ಪ್ರಮುಖ ಜೀವ ವೈವಿಧ್ಯ ತಾಣವಾಗಿದೆ. ಈ ಕೆರೆಯನ್ನು ರೂ.18 ಕೋಟಿ ವೆಚ್ಚದಲ್ಲಿ ಅಭಿವೃದ್ಧಿಪಡಿಸ ಲಾಗುತ್ತಿದೆ. ನಗರದಲ್ಲಿ 6 ಸಾವಿರ ಗಿಡಗಳನ್ನು ನೆಡುವ ಮೂಲಕ ಹಸಿರನ್ನು ಹೆಚ್ಚಿಸಲು ಹಾಗೂ ಅವುಗಳ ಮೂರು ವರ್ಷಗಳ ನಿರ್ವಹಣೆಗೆ ಗುತ್ತಿಗೆದಾರರಲ್ಲಿ ಒಪ್ಪಂದ ಮಾಡಿಕೊಳ್ಳಲಾಗಿದೆ.
>
> - ಮಹಾಂತೇಶ್ ಬೀಳಗಿ, ಜಿಲ್ಲಾಧಿಕಾರಿ

> ನರೇಗಾ ಯೋಜನೆಯಡಿ ಹೆಚ್ಚು ಗಿಡಗಳನ್ನು ಬೆಳೆಸಲಾಗುತ್ತಿದೆ. ಕೇಂದ್ರ ಸರ್ಕಾರದ ದೀನ್ ದಯಾಳ್ ಮಿಷನ್ ಅಡಿಯಲ್ಲಿ ಜಿಲ್ಲೆಯಲ್ಲಿ ಹೆಚ್ಚಿರುವ ಅರಣ್ಯ ಪ್ರದೇಶವನ್ನು ಗುರುತಿಸಿ, ಜಿಲ್ಲಾ ಪಂಚಾಯ್ತಿಗೆ ಪ್ರಶಸ್ತಿ ದೊರೆತಿದೆ."
>
> - ಪದ್ಮಾ ಬಸವಂತಪ್ಪ, ಸಿಇಒ ಜಿ.ಪಂ.

> "ಕೊಂಡಜ್ಜಿಯಲ್ಲಿರುವ ಪೊಲೀಸ್ ಪಬ್ಲಿಕ್ ಶಾಲೆಯ ಆವರಣದಲ್ಲಿ ಸಾಕಷ್ಟು ಜಾಗವಿದ್ದು, ಜೀವ ವೈವಿಧ್ಯವನ್ನು ಅಭಿವೃದ್ಧಿಪಡಿಸಬಹುದು.
>
> - ಹನುಮಂತರಾಯ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ

## ಹರಿಹರ: ಅಪರಿಚಿತನಿಗೆ ಹಣ ನಗದೀಕರಿಸಿದ ಎಸ್.ಬಿ.ಐ. ವಿರುದ್ಧ ಪ್ರತಿಭಟನೆ



ಹರಿಹರ, ಜ.5 - ನಗರದ ಎಸ್‌ಬಿಐ ಬ್ಯಾಂಕ್‌ನವರು, ಎಸ್.ಎಂ. ರಾಜು ಅವರ ಉಳಿತಾಯ ಖಾತೆಯಿಂದ ಒಂದೂವರೆ ಲಕ್ಷ ರೂ.ಗಳನ್ನು ಅಪರಿಚಿತ ವ್ಯಕ್ತಿಗೆ ಹಣ ನಗದಿಕರಿಸಿದ್ದಾರೆ ಎಂದು ಹಣ ಕಳೆದುಕೊಂಡ ವ್ಯಕ್ತಿ ಆರೋಪ ಮಾಡಿದ್ದಾರೆ.

ರಾಜು ಅವರು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಹರಿಹರ ಶಾಖೆಯ ಗ್ರಾಹಕರಾಗಿದ್ದು, ದಿನಾಂಕ 9/10/2020 ರಂದು ಅವರ ಖಾತೆಯ ಚೆಕ್ ನಂಬರ್ 740076 ರಲ್ಲಿ ಒಂದೂವರೆ ಲಕ್ಷ ರೂ.ಗಳನ್ನು ಯಾರೋ ಅಪರಿಚಿತ ವ್ಯಕ್ತಿ ರಾಜು ಅವರ ಸಹಿಯನ್ನೇ ಫೋರ್ಜರಿ ಮಾಡಿ ಹಣ ಡ್ರಾ ಮಾಡಿದ್ದಾರೆ.

ಆದರೆ ಬೇರೆ ಯಾವುದೇ ವ್ಯಕ್ತಿ ಬೇರೆಯವರ ಖಾತೆಯಿಂದ ಹಣ ಡ್ರಾ ಮಾಡುವಾಗ ಈ ಮೊತ್ತಕ್ಕೆ ತನ್ನ ಗುರುತಿನ ದಾಖಲೆ ತೋರಿಸಬೇಕು ಹಾಗೂ ಚೆಕ್‌ನ ಹಿಂಬದಿಯಲ್ಲಿ ಸಹಿ ಮತ್ತು ಮೊಬೈಲ್ ಸಂಖ್ಯೆ ನಮೂದು ಮಾಡಬೇಕು. ಈ ಯಾವುದೇ ಪ್ರಕ್ರಿಯೆ ಮಾಡದೆ ಅಪರಿಚಿತ ವ್ಯಕ್ತಿಗೆ ಬ್ಯಾಂಕಿನವರ ಬೇಜವಾಬ್ದಾರಿಯಿಂದ ಹಣ ಡ್ರಾ ಮಾಡಲಾಗಿದೆ ಎಂದು ಬ್ಯಾಂಕಿನ ವಿರುದ್ಧ ಜಯಕರ್ನಾಟಕ ಸಂಘಟನೆಯ ತಾಲ್ಲೂಕು ಅಧ್ಯಕ್ಷ ಎಸ್. ಗೋವಿಂದ ಹರಿಹಾಯ್ದರು.

ಇದರ ಬಗ್ಗೆ ಬ್ಯಾಂಕಿನ ವ್ಯವಸ್ಥಾಪಕರ ಗಮನಕ್ಕೆ ತಂದಾಗ ಒಂದು ವಾರದೊಳಗೆ ಬಗೆಹರಿಸಿ ಕೊಡುತ್ತೇವೆ ಎಂದು ಹೇಳಿದ್ದರು. ಆದರೂ ಇಲ್ಲಿಯವರೆಗೂ ಯಾವುದೇ ಕ್ರಮ ಕೈಗೊಂಡಿಲ್ಲ. ಆದ್ದರಿಂದ ಬ್ಯಾಂಕಿನ ವಿರುದ್ಧ ನಗರದ ಮಹಾತ್ಮ ಗಾಂಧಿ ವೃತ್ತದಲ್ಲಿ ಇಂದು ಪ್ರತಿಭಟನೆ ಹಮ್ಮಿಕೊಂಡಿದ್ದೇವೆ ಎಂದು ಗೋವಿಂದ ಅವರು ತಹಶೀಲ್ದಾರ್ ಕೆ. ಬಿ. ರಾಮಚಂದ್ರಪ್ಪ ಅವರಿಗೆ ಬ್ಯಾಂಕಿನ ವಿರುದ್ಧ ಕಾನೂನು ಕ್ರಮ ಜರುಗಿಸುವಂತೆ ಮತ್ತು ಹಣ ಕಳೆದುಕೊಂಡವರಿಗೆ ನ್ಯಾಯ ಒದಗಿಸಿಕೊಡುವಂತೆ ಮನವಿ ಸಲ್ಲಿಸಿದರು.

ಈ ಸಂದರ್ಭದಲ್ಲಿ ಜಯ ಕರ್ನಾಟಕ ಸಂಘಟನೆಯ ಕಾರ್ಯಕರ್ತರಾದ ಸುನಿಲ್ ಕುಮಾರ್, ಚಂದ್ರಪ್ಪ ಕುಣೆಬೆಳಕೆರೆ, ರಾಘು ನಾಗೇನಹಳ್ಳಿ, ರಾಜು ಎಸ್.ಎಂ. ಹೇಮಲತಾ, ಶಿವಕುಮಾರ್ ಮರಡಿ, ಮಾರುತಿ, ಜಯಂತಿ, ಅನನ್ಯರಾಜ್, ಬಶೆಟ್ಟಪ್ಪ ದೀಟೂರು ಇತರರು ಹಾಜರಿದ್ದರು.

## ಹರಿಹರದಲ್ಲಿ ನಾಳೆ ಶ್ರೀಶೈಲ ಸಮುದಾಯ ಭವನಕ್ಕೆ ಶಂಕುಸ್ಥಾಪನೆ

ದಾವಣಗೆರೆ, ಜ.5- ಹರಿಹರದ ಎಸ್‌ಜೆವಿಪಿ ಕಾಲೇಜಿನ ಆವರಣದಲ್ಲಿ ನಾಡಿದ್ದು ದಿನಾಂಕ 7ರ ಗುರುವಾರ ಬೆಳಿಗ್ಗೆ 11 ಗಂಟೆಗೆ ಶ್ರೀಶೈಲ ಸಮುದಾಯ ಭವನ, ಅತಿಥಿ ಗೃಹ, ವಾಣಿಜ್ಯ ಸಂಕೀರ್ಣ ಹಾಗೂ ಹೊರಾಂಗಣ ಉದ್ಯಾನವನ, ಸಭಾಭವನದ ಶಂಕುಸ್ಥಾಪನೆಯನ್ನು ರಾಜ್ಯದ ಉಪಮುಖ್ಯಮಂತ್ರಿಗಳು ಮತ್ತು ಲೋಕೋಪಯೋಗಿ ಇಲಾಖೆ ಸಚಿವ ಗೋವಿಂದ ಕಾರಜೋಳ ನೆರವೇರಿಸುವರು ಎಂದು ಶ್ರೀ ಜಗದ್ಗುರು ಪಂಚಾಚಾರ್ಯ ವಿಶ್ವಧರ್ಮ ವಿದ್ಯಾಪೀಠದ ಉಪಾಧ್ಯಕ್ಷ ಡಿ.ಎಂ. ಹಾಲಸ್ವಾಮಿ ತಿಳಿಸಿದರು.

ಇಂದಿಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಸಮಾರಂಭದ ಸಾನಿಧ್ಯವನ್ನು ಶ್ರೀಶೈಲ ಜಗದ್ಗುರು ಡಾ. ಚನ್ನಸಿದ್ಧರಾಮ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ವಹಿಸುವರು ಎಂದು ಹೇಳಿದರು. ನೇತೃತ್ವವನ್ನು ಆವರಗೊಳ್ಳದ ಶ್ರೀ ಓಂಕಾರ ಶಿವಾಚಾರ್ಯ ಸ್ವಾಮೀಜಿ, ಕೋಡಿಯಾಲ ಹೊಸಪೇಟೆಯ ಶ್ರೀ ಬಾಲಯೋಗಿ ಜಗದೀಶ್ವರ ಸ್ವಾಮೀಜಿ ವಹಿಸುವರು ಎಂದರು.

ಅಧ್ಯಕ್ಷತೆಯನ್ನು ಅಖಿಲ ಭಾರತ ವೀರಶೈವ ಮಹಾಸಭಾ ರಾಷ್ಟ್ರೀಯ ಅಧ್ಯಕ್ಷರೂ, ಹಿರಿಯ ಶಾಸಕರೂ ಆದ ಡಾ. ಶಾಮನೂರು ಶಿವಶಂಕರಪ್ಪ ವಹಿಸುವರು. ಮುಖ್ಯ ಅತಿಥಿಗಳಾಗಿ ಸಂಸದ ಜಿ.ಎಂ. ಸಿದ್ದೇಶ್ವರ, ಶಾಸಕ ಎಸ್. ರಾಮಪ್ಪ, ಮಾಜಿ ಶಾಸಕ ಬಿ.ಪಿ. ಹರೀಶ್, ಹೆಚ್.ಎಸ್. ಶಿವಶಂಕರ್, ಮಹಾನಗರಪಾಲಿಕೆ ಮಹಾಪೌರ ಬಿ.ಜಿ. ಅಜಯಕುಮಾರ್, ಡಿಡಿಎ ಅಧ್ಯಕ್ಷ ರಾಜನಹಳ್ಳಿ ಶಿವಕುಮಾರ್, ಲೆಕ್ಕ ಪರಿಶೋಧಕ ಅಥಣಿ ವೀರಣ್ಣ, ಜವಳಿ ವರ್ತಕ ಬಿ. ಸಿ. ಉಮಾಪತಿ, ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಹನುಮಂತರಾಯಪ್ಪ, ಉಪವಿಭಾಗಾಧಿಕಾರಿ ಮಮತಾ ಹೊಸಗೌಡರ ಮುಂತಾದ ಗಣ್ಯರು ಆಗಮಿಸುವರು.

ಸುಮಾರು 12 ಕೋಟಿ ರೂ.ಗಳ ವೆಚ್ಚದಲ್ಲಿ ನಿರ್ಮಾಣಗೊಳ್ಳುವ ಸಮುದಾಯ ಭವನ ಮುಂತಾದ ಕಟ್ಟಡ, ಉದ್ಯಾನವನ ಕಾಮಗಾರಿಗಳು ಒಂದು ವರ್ಷದಲ್ಲಿ ಮುಕ್ತಾಯವಾಗಿ ಲೋಕಾರ್ಪಣೆಗೊಳ್ಳಲಿದೆ ಎಂದರು.

ಶ್ರೀಶೈಲ ಜಗದ್ಗುರುಗಳು ದಾವಣಗೆರೆಯ ಶ್ರೀ ಜಗದ್ಗುರು ಪಂಚಾಚಾರ್ಯ ಧರ್ಮಸಂಸ್ಥೆಗೆ ಮೂರು ಎಕರೆ ಪ್ರದೇಶವನ್ನು ನೀಡಿದ್ದು, ಈ ನಿವೇಶನದಲ್ಲಿ ಸಮುದಾಯ ಭವನ ಮುಂತಾದ ಕಟ್ಟಡಗಳು ನಿರ್ಮಾಣಗೊಳ್ಳಲಿವೆ ಎಂದು ಅವರು ವಿವರಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಶ್ರೀ ಜ.ಪಂ. ಧರ್ಮಸಂಸ್ಥೆ ಕಾರ್ಯದರ್ಶಿ ಚಂದ್ರಶೇಖರಯ್ಯ ಹಿರೇಮಠ, ಸಹಕಾರ್ಯದರ್ಶಿ ಕೆ.ಎಂ. ಪರಮೇಶ್ವರಯ್ಯ, ಪದಾಧಿಕಾರಿಗಳಾದ ದೇವರಮನೆ ಯೋಗೀಶ್, ತ್ಯಾವಣಿಗಿ ಎಂ. ಮಲ್ಲಿಕಾರ್ಜುನ, ಬನ್ನಯ್ಯಸ್ವಾಮಿ, ಮಿಟ್ಲಕಟ್ಟೆ ಸಿದ್ದರಾಮಪ್ಪ, ಶ್ರೀಮತಿ ದಾಕ್ಷಾಯಣಮ್ಮ ಅಂದಾನಪ್ಪ, ಶ್ರೀಮತಿ ಪುಷ್ಪ ವೀರೇಶ್ ಮತ್ತಿತರರು ಉಪಸ್ಥಿತರಿದ್ದರು.

## ಕೊರೊನಾದಿಂದ ವೈಭವ ಕಳೆದುಕೊಂಡ ಬಸಾಪುರ ಮಹೇಶ್ವರ ಜಾತ್ರೆ



ದಾವಣಗೆರೆ, ಜ.5- ಜಿಲ್ಲೆಯಲ್ಲಿಯೇ ಮಹೇಶ್ವರ ಜಾತ್ರೆಗೆ ಪ್ರಸಿದ್ಧವಾದ ಸ್ಥಳ ಬಸಾಪುರ, ಹತ್ತಾರು ವರ್ಷಗಳಿಂದ ತನ್ನದೇ ಆದ ವೈಭವವನ್ನು ಹೊಂದಿದ್ದ ಬಸಾಪುರದ ಮಹೇಶ್ವರ ಜಾತ್ರೆ ಈ ವರ್ಷ ಕೊರೊನಾ ಕಾರಣದಿಂದ ಕೇವಲ ಮೊದಲ ದಿನದ ಮಹಾಪಂಕ್ತಿಗೆ ಮಾತ್ರ ಸೀಮಿತವಾಗಿ ಜಾತ್ರೆಯ ಕಳೆ ಕಳೆದುಕೊಂಡಿದೆ.

ಪ್ರತಿವರ್ಷ ಭಕ್ತರಿಗೆ ಮೊದಲ ದಿನ ಅನ್ನ, ಹಾಲು, ಬಾಳೆಹಣ್ಣು, ಸಕ್ಕರೆ ಹಾಗೂ ಎರಡನೇ ದಿನ ಅನ್ನ, ಸಾಂಬಾರ್, ಮಜ್ಜಿಗೆ ಸಾಂಬಾರ್ ವ್ಯವಸ್ಥೆ ಮಾಡಲಾಗುತ್ತಿತ್ತು. ಆದರೆ ಈ ವರ್ಷ ಜನರಿಲ್ಲದೆ ಬಿಕೋ ಎನ್ನುತ್ತಿದ್ದ ದೃಶ್ಯ ಗ್ರಾಮಸ್ಥರಿಗೆ ನೋವು ತಂದಿತು. ಜಿಲ್ಲೆಯ ಬೇರೆ ಬೇರೆ ಸ್ಥಳಗಳಲ್ಲಿ ಮಹೇಶ್ವರ ಜಾತ್ರೆ, ಕಾರ್ತಿಕಗಳು ನಡೆಯುತ್ತಿದ್ದರೂ ನಮ್ಮ ಗ್ರಾಮದಲ್ಲಿ ಮಾತ್ರ ಜಾತ್ರೆ ನಡೆಸುವಲ್ಲಿ ಮಹೇಶ್ವರ ಸಮಿತಿ ವಿಫಲವಾಗಿರುವುದು ವಿಪರ್ಯಾಸ ಎಂಬುದು ಜನರ ಅಭಿಪ್ರಾಯವಾಗಿತ್ತು.

## ನಗರದಲ್ಲಿ ಇಂದು ಮಹೇಶ್ವರ ಸ್ವಾಮಿ ಜಾತ್ರೆ ರದ್ದು

ಕಾಯಿಪೇಟೆಯ ಶ್ರೀ ಬಸವೇಶ್ವರ ಸೇವಾ ಸಂಘದ ವತಿಯಿಂದ ಪ್ರತಿ ವರ್ಷದಂತೆ ಈ ವರ್ಷವೂ ನಡೆಯ ಬೇಕಿದ್ದ ಶ್ರೀ ಮಹೇಶ್ವರ ಜಾತ್ರೆಯನ್ನು ರದ್ದುಪಡಿಸಲಾಗಿದೆ ಎಂದು ಸಂಘದ ಪದಾಧಿಕಾರಿಗಳು ತಿಳಿಸಿದ್ದಾರೆ.

ಕೋವಿಡ್ 19 ಹಿನ್ನೆಲೆಯಲ್ಲಿ ಸರ್ಕಾರ ರೂಪಿಸಿರುವ ಮಾರ್ಗಸೂಚಿಯನ್ವಯ ಪಿ.ಬಿ. ರಸ್ತೆ ಶ್ರೀ ಪೂಜಾ ಹೋಟೆಲ್ ಪಕ್ಕದಲ್ಲಿ ಇಂದು ನಡೆಸಲುದ್ದೇಶಿಸಿದ್ದ ಮಹೇಶ್ವರ ಜಾತ್ರೆಯನ್ನು ರದ್ದುಪಡಿಸಲಾಗಿದ್ದು, ಭಕ್ತಾದಿಗಳು ಸಹಕರಿಸುವಂತೆ ಪದಾಧಿಕಾರಿಗಳು ವಿನಂತಿಸಿದ್ದಾರೆ.

## ಕೊರೊನಾ : ಗಣರಾಜ್ಯೋತ್ಸಕ್ಕೆ ಬರುವುದಿಲ್ಲ ಎಂದ ಬ್ರಿಟನ್ ಪ್ರಧಾನಿ



ಲಂಡನ್, ಜ. 5 – ರೂಪಾಂತರಿ ಕೊರೊನಾ ಹಾವಳಿ ಕಾರಣದಿಂದಾಗಿ ಮುಂಬರುವ ಜನವರಿ 26ರ ಗಣರಾಜ್ಯೋತ್ಸವ ಸಮಾರಂಭದಲ್ಲಿ ಪಾಲ್ಗೊಳ್ಳಲು ಸಾಧ್ಯವಾಗುವುದಿಲ್ಲ ಎಂದು ಬ್ರಿಟನ್ ಪ್ರಧಾನ ಮಂತ್ರಿ ಬೋರಿಸ್ ಜಾನ್ಸನ್ ಅವರು ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರಿಗೆ ತಿಳಿಸಿದ್ದಾರೆ.

ಬ್ರಿಟನ್‌ನಲ್ಲಿ ಕೊರೊನಾ ತೀವ್ರ ಸ್ವರೂಪ ತಳೆದಿದ್ದು, ಅಲ್ಲಿ ಬಿಗಿ ಲಾಕ್‌ಡೌನ್ ಜಾರಿಗೆ ತರಲಾಗಿದೆ. ವೈದ್ಯಕೀಯ ಸಂಸ್ಥೆಗಳು ತೀವ್ರ ಒತ್ತಡದಲ್ಲಿ ಸಿಲುಕಿವೆ. ವರ್ಷದ ಪ್ರಥಮಾರ್ಧದಲ್ಲಿ ಹಾಗೂ ಜಿ7 ಶೃಂಗಸಭೆಗೆ ಮುಂಚೆ ಭಾರತಕ್ಕೆ ಭೇಟಿ ನೀಡುವುದಾಗಿ ಜಾನ್ಸನ್ ಪ್ರಧಾನಿ ಮೋದಿಗೆ ತಿಳಿಸಿದ್ದು, ಗಣರಾಜ್ಯೋತ್ಸವಕ್ಕೆ ಬರಲು ಸಾಧ್ಯ ವಾಗದೇ ಇರುವುದಕ್ಕೆ ವಿಷಾದ ವ್ಯಕ್ತಪಡಿಸಿದ್ದಾರೆ.

## ಹಕ್ಕಿ ಜ್ವರ : ರಾಜ್ಯದಲ್ಲಿ ಕಟ್ಟೆಚ್ಚರ

ನವದೆಹಲಿ, ಜ. 5 – ಹಕ್ಕಿ ಜ್ವರ ಹರಡುವುದನ್ನು ತಡೆಯಲು ಕೇರಳದಲ್ಲಿ ಕೋಳಿ ಹಾಗೂ ಬಾತುಕೋಳಿಗಳ ಸಂಹಾರ ಆರಂಭವಾಗಿದೆ. ಮತ್ತೊಂದೆಡೆ ಜಮ್ಮು ಕಾಶ್ಮೀರದಲ್ಲಿ ಹಕ್ಕಿ ಜ್ವರ ಪತ್ತೆಗಾಗಿ ವಲಸೆ ಪಕ್ಷಿಗಳ ಮಾದರಿಗಳನ್ನು ಪಡೆಯಲಾಗುತ್ತಿದೆ.

ಹಿಮಾಚಲ ಪ್ರದೇಶ, ರಾಜಸ್ಥಾನ ಹಾಗೂ ಮಧ್ಯ ಪ್ರದೇಶಗಳ ಹಲವೆಡೆ ಈಗಾಗಲೇ ಹಕ್ಕಿ ಜ್ವರದ ಸೋಂಕು ಕಂಡು ಬಂದಿದೆ. ಈ ಹಿನ್ನೆಲೆಯಲ್ಲಿ ಕರ್ನಾಟಕ ಹಾಗೂ ತಮಿಳುನಾಡುಗಳಲ್ಲಿ ಕಟ್ಟೆಚ್ಚರ ವಹಿಸಲಾಗಿದೆ. ಕೇರಳ ಹಾಗೂ ಮಧ್ಯ ಪ್ರದೇಶದ ಪಕ್ಷಿಗಳಲ್ಲಿ ಹೆಚ್5ಎನ್8 ಹಕ್ಕಿ ಜ್ವರ ಕಾಣಿಸಿಕೊಂಡಿದೆ. ರಾಜಸ್ಥಾನದ ಝುಲ್ವರ್, ಕೋಟಾ ಹಾಗೂ ಬರನ್‌ಗಳಲ್ಲಿಯೂ ಸೋಂಕು ಕಂಡು ಬಂದಿದೆ.

## ನಗರದಲ್ಲಿ ಇಂದು ಕುರುಬ ಜಾಗೃತಿ ಸಮಾವೇಶ

ಕುರುಬ ಜನಾಂಗವನ್ನು ಎಸ್ಟಿ ಪಟ್ಟಿಗೆ ಸೇರಿಸುವಂತೆ ಆಗ್ರಹಿಸಿ ಇಂದು ನಗರದಲ್ಲಿ ಕುರುಬರ ಬೃಹತ್ ಜಾಗೃತಿ ಸಮಾವೇಶವು ಶ್ರೀ ಬೀರಲಿಂಗೇಶ್ವರ ಮೈದಾನದಲ್ಲಿ ಬೆಳಿಗ್ಗೆ 11 ಗಂಟೆಗೆ ನಡೆಯಲಿದೆ. ಕಾಗಿನೆಲೆ ಶ್ರೀ ನಿರಂಜನಾನಂದಪುರಿ ಸ್ವಾಮೀಜಿ, ಹೊಸದುರ್ಗ ಮಠದ ಶ್ರೀ ಈಶ್ವರಾನಂದ ಪುರಿ ಸ್ವಾಮೀಜಿ, ಶ್ರೀ ಶಿವಾನಂದ ಸ್ವಾಮೀಜಿ, ಶ್ರೀ ಸಿದ್ಧರಾಮಾನಂದ ಸ್ವಾಮೀಜಿ, ಸಚಿವರುಗಳಾದ ಕೆ.ಎಸ್.ಈಶ್ವರಪ್ಪ, ಬಿ.ಎ.ಬಸವರಾಜ ಭೈರತಿ, ಮಾಜಿ ಸಚಿವರುಗಳಾದ ಹೆಚ್.ಎಂ.ರೇವಣ್ಣ, ಬಂಡೆಪ್ಪ ಕಾಶೆಂಪುರ್, ಶಾಸಕರಾದ ಎಂ.ಟಿ.ಬಿ.ನಾಗರಾಜ, ಎಸ್.ರಾಮಪ್ಪ ಮುಂತಾದ ಗಣ್ಯರು ಪಾಲ್ಗೊಳ್ಳಲಿದ್ದಾರೆ.

## ಬಸಾಪುರದಲ್ಲಿ ಮಹೇಶ್ವರ ಸ್ವಾಮಿ ಜಾತ್ರೆ



ದಾವಣಗೆರೆ, ಜ. 5- ನಗರ ಪಾಲಿಕೆ ವ್ಯಾಪ್ತಿಯ 21 ನೇ ವಾರ್ಡ್ ಬಸಾಪುರದಲ್ಲಿ ಮಂಗಳವಾರ ನಡೆದ ಶ್ರೀ ಮಹೇಶ್ವರ ಸ್ವಾಮಿ ಜಾತ್ರೆಗೆ ಕೈಗಾರಿಕೋದ್ಯಮಿ ಎಸ್.ಎಸ್. ಗಣೇಶ್ ಅವರು ಆಗಮಿಸಿ, ಸ್ವಾಮಿಯ ಆಶೀರ್ವಾದ ಪಡೆದರು. ಈ ವರ್ಷ ಕೋವಿಡ್‌ನಿಂದಾಗಿ ಮಹೇಶ್ವರ ಸ್ವಾಮಿ ಜಾತ್ರೆಯನ್ನು ಸರಳವಾಗಿ ಆಚರಿಸಲಾಯಿತು. ಈ ಸಂದರ್ಭದಲ್ಲಿ ಮುಖಂಡ ಕಿತ್ತೂರು ಜಯಣ್ಣ, ಗ್ರಾಮದ ಕೆ.ಎಲ್. ಹರೀಶ್, ರುದ್ರಯ್ಯ, ಹನುಮಂತಪ್ಪ, ರಾಜೇಶ್ ನಿವೃತ್ತ ಪೊಲೀಸ್ ಪೇದೆ ಹಾಲಪ್ಪ ಇದ್ದರು.

# ಐದು ಮನೆಗಳ್ಳತನ ಪ್ರಕರಣಗಳ ಪತ್ತೆ : ನಾಲ್ವರ ಬಂಧನ

ದಾವಣಗೆರೆ, ಜ.5- ಐದು ಮನೆಗಳ್ಳತನ ಪ್ರಕರಣಗಳನ್ನು ಬೇಧಿಸಿರುವ ಪೊಲೀಸರು, ನಾಲ್ವರನ್ನು ಬಂಧಿಸಿ, ಒಟ್ಟು 9 ಲಕ್ಷದ 30 ಸಾವಿರ ಮೌಲ್ಯದ ಚಿನ್ನಾಭರಣಗಳನ್ನು ವಶಪಡಿಸಿಕೊಂಡಿದ್ದಾರೆ.

ಚನ್ನಗಿರಿ ತಾಲ್ಲೂಕಿನ ಚಿಕ್ಕಬೆನ್ನೂರು ಗ್ರಾಮದ ಕೃಷ್ಣ ಅಲಿಯಾಸ್ ಖಾದರ್ ಕೃಷ್ಣ, ರಾಮ ಅಲಿಯಾಸ್ ಬುಡ್ಡರಾಮ, ಭದ್ರಾವತಿ ತಾಲ್ಲೂಕಿನ ಹೊಳೆಹೊನ್ನೂರಿನ ಮೈಲಾರಿ ಅಲಿಯಾಸ್ ವಗ್ಗ ಮೈಲಾರಿ, ಕುಮಾರ ಅಲಿಯಾಸ್ ವಗ್ಗ ಕುಮಾರ ಬಂಧಿತರು.




9 ಲಕ್ಷಕ್ಕೂ ಅಧಿಕ ಮೌಲ್ಯದ ಚಿನ್ನಾಭರಣ ವಶ

ಸಂತೆಬೆನ್ನೂರು ಪೊಲೀಸ್ ಠಾಣೆ ವ್ಯಾಪ್ತಿಯ ಮನೆಗಳ್ಳತನ ಪ್ರಕರಣಕ್ಕೆ ಸಂಬಂಧಿಸಿದಂತೆ ಆರೋಪಿಗಳಾದ ಕೃಷ್ಣ, ರಾಮನನ್ನು ಬಂಧಿಸಿ, ಸುಮಾರು 2 ಲಕ್ಷದ 80 ಸಾವಿರ ಮೌಲ್ಯದ 4 ಕೆಜಿ 600 ಗ್ರಾಂ ಬೆಳ್ಳಿಯ ಆಭರಣಗಳನ್ನು ವಶಪಡಿಸಿಕೊಳ್ಳಲಾಗಿದೆ. ಇದೇ ತಂಡದ ಮೈಲಾರಿ, ಕುಮಾರ ಅವರನ್ನು ಬಂಧಿಸಿ, ಮಾಯಕೊಂಡ ಠಾಣೆ, ಅಜ್ಜಂಪುರ ಪೊಲೀಸ್ ಠಾಣೆ, ಹೊಳಲ್ಕೆರೆ ಪೊಲೀಸ್ ಠಾಣೆ ಸೇರಿ ಒಟ್ಟು 4 ಪ್ರಕರಣಗಳನ್ನು ಪತ್ತೆ ಹಚ್ಚಿ ಸುಮಾರು 6 ಲಕ್ಷ ರೂ. ಮೌಲ್ಯದ ಸುಮಾರು 120 ಗ್ರಾಂ ತೂಕದ ಬಂಗಾರದ ಆಭರಣಗಳು, 50 ಸಾವಿರ ಮೌಲ್ಯದ ಬೈಕ್ ವಶಪಡಿಸಿಕೊಳ್ಳಲಾಗಿದೆ ಎಂದು ಎಸ್ಪಿ ಹನುಮಂತರಾಯ ತಮ್ಮ ಕಚೇರಿಯಲ್ಲಿ ಇಂದು ಸಂಜೆ ಕರೆಯಲಾಗಿದ್ದ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದ್ದಾರೆ.

ಈ ನಾಲ್ಕು ಜನರು ಎರಡು ತಂಡಗಳನ್ನಾಗಿ ಮಾಡಿಕೊಂಡು ಕಳ್ಳತನ ನಡೆಸುತ್ತಿದ್ದರು. ಈ ಕಳ್ಳರು ಹಿಂದೆ ಹಲವು ಕಳ್ಳತನದ ಪ್ರಕರಣಗಳಲ್ಲಿ ಭಾಗಿಯಾಗಿ, ಕಳೆದ ಸುಮಾರು ಎರಡು ತಿಂಗಳ ಹಿಂದೆ ಜೈಲಿನಿಂದ ಬಿಡುಗಡೆ ಹೊಂದಿ ಈ ಅವಧಿಯಲ್ಲಿ ಕಳ್ಳತನ ಮಾಡಿದ್ದಾರೆ.

ಈ ಪ್ರಕರಣಗಳನ್ನು ಚನ್ನಗಿರಿ ಡಿವೈಎಸ್ಪಿ ಪ್ರಶಾಂತ ಜಿ. ಮನ್ನೋಳಿ ಮಾರ್ಗದರ್ಶನದಂತೆ ಚನ್ನಗಿರಿ ವೃತ್ತದ ಸಿಪಿಐ ಆರ್.ಆರ್. ಪಾಟೀಲ್ ನೇತೃತ್ವದಲ್ಲಿ ಸಂತೇಬೆನ್ನೂರು ಪಿಎಸ್‌ಐ ಶಿವರುದ್ರಪ್ಪ ಎಸ್. ಮೇಟಿ, ಸಿಬ್ಬಂದಿಗಳಾದ ಎಂ. ರುದ್ರೇಶ, ಎಸ್.ಆರ್. ರುದ್ರೇಶ, ಡಿ. ನಿಂಗಣ್ಣ, ಎಸ್. ಧರ್ಮಪ್ಪ ಕೊಟ್ರೇಶ, ನಾಗರಾಜನಾಯ್ಕ, ರಂಗಸ್ವಾಮಿ, ಯಶವಂತ, ಯೋಗೇಶ, ರೇವಣಸಿದ್ದಪ್ಪ , ಸೋಮಶೇಖರ, ಜಿಲ್ಲಾ ಪೊಲೀಸ್ ಕಛೇರಿಯ ಬೆರಳು ಮುದ್ರೆ ಘಟಕದ ಪಿಎಸ್‌ಐ ಮಂಜುನಾಥ ಮತ್ತು ಅವರ ತಂಡ, ರಾಘವೇಂದ್ರ ಮತ್ತು ತಂಡವು ಬೇಧಿಸಿದೆ. ಇದೇ ವೇಳೆ ಕಳೆದ ನವಂಬರ್, ಡಿಸೆಂಬರ್‌ನಲ್ಲಿ ಜಿಲ್ಲೆಯಲ್ಲಿ ನಡೆದ ವರ್ಷದ ಮೊದಲನೆಯದಾದ ಈ ಪ್ರಕರಣಗಳನ್ನು ಭೇದಿಸುವಲ್ಲಿ ಯಶಸ್ವಿಯಾದ ಅಧಿಕಾರಿ ಮತ್ತು ಸಿಬ್ಬಂದಿ ವರ್ಗದವರನ್ನು ಎಸ್ಪಿ ಹನುಮಂತರಾಯ ಶ್ಲಾಘಿಸಿ, ಪ್ರಶಂಸನಾ ಪತ್ರ ನೀಡಿದರು.

**ಮಾವಿನ ಮರದಲ್ಲಿ ಅವಿತಿಟ್ಟ ಚಿನ್ನಾಭರಣ ಪತ್ತೆ:** ಈ ಪ್ರಕರಣಗಳಲ್ಲಿ ಮಾಜಿ ಸಂಸದ ಟಿ.ವಿ. ಚಂದ್ರಶೇಖರಪ್ಪ ಅವರ ಚನ್ನಗಿರಿ ತಾಲ್ಲೂಕಿನ ನಲ್ಕುದರೆಯಲ್ಲಿರುವ ತೋಟದ ಮನೆಯಲ್ಲಿದ್ದ ಚಿನ್ನಾಭರಣವನ್ನು ಯಾರು ಇಲ್ಲದ ವೇಳೆ ಕಳ್ಳತನ ಮಾಡಿದ್ದರು. ಹೀಗೆ ಕಳ್ಳತನ ಮಾಡಿದ್ದ ಚಿನ್ನಾಭರಣವನ್ನು ಈ ನಾಲ್ವರು ಕಳ್ಳರು ಮಾವಿನ ಮರದ ಮೇಲೆ ಬಚ್ಚಿಡುತ್ತಿದ್ದರು. ಈ ಪ್ರಕರಣವನ್ನು ತುಂಗಾ ಶ್ವಾನ ದಳ ತಂಡ ಮತ್ತು ಬೆರಳಚ್ಚು ತಂಡದ ಸಹಕಾರದಲ್ಲಿ ಪತ್ತೆ ಹಚ್ಚಿರುವುದಾಗಿ ಎಸ್ಪಿ ಹನುಮಂತರಾಯ ಮಾಹಿತಿ ನೀಡಿದರು.















JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte